**ಡಾ. ಶಮ್ಲಾ ಇಕ್ಬಾಲ್,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ಮೊದಲನೇ ಮಹಡಿ, 3ನೇ ಗೇಟ್,
ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001
ಕಛೇರಿ ದೂರವಾಣಿ: 080–2235 3991
080–2203 2562
ಇ–ಮೇಲ್: prlsecy-wc@karnataka.gov.in

ಅ.ಸ.ಪ.ಸಂಖ್ಯೆ:ಮರನಿ/ಐ.ಇ.ಸಿ/2024-25 ದಿನಾಂಕ:06.09.2025

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 ಪರಿಷ್ಕೃತ 2023 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಮಮಇ 259 ಮಭಾಬ 2014, ಬೆಂಗಳೂರು, ದಿನಾಂಕ:30.04.2016.
2. ಸರ್ಕಾರದ ಆದೇಶ ಸಂಖ್ಯೆ: ಮಮಇ 102 ಮಭಾಬ 2023, ಬೆಂಗಳೂರು, ದಿನಾಂಕ:14.12.2023.

*****

ಕರ್ನಾಟಕ ರಾಜ್ಯದ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ**,** ಶೋಷಣೆ ಮತ್ತು ದುರುಪಯೋಗಕ್ಕೊಳಗಾಗುವ **ಪ್ರಕರಣಗಳು** ಹೆಚ್ಚುತ್ತಿರುವುದನ್ನು ಮನಗೊಂಡ **ರಾಜ್ಯ** ಸರ್ಕಾರ**,** ಸದರಿ ಪ್ರಕರಣಗಳಲ್ಲಿ ನೊಂದವರಿಗೆ ಅಲ್ಪಾವಧಿ ಪರಿಹಾರದ ಬದಲು ಪ್ರಕರಣಗಳು ಮರುಕಳಿಸದಂತೆ ಕ್ರಮ ವಹಿಸಲು **ಶಾಶ್ವತ** ಕಾರ್ಯ ವಿಧಾನವನ್ನು ಅಳವಡಿಸುವ ನಿಟ್ಟಿನಲ್ಲಿ**,** ಅದರಲ್ಲೂ ಶಾಲೆಗಳಲ್ಲಿ ಮಕ್ಕಳು ಶೋಷಣೆಗೊಳಗಾಗುವುದನ್ನು ತಪ್ಪಿಸಲು**,** ಕಡ್ಡಾಯವಾಗಿ ಅನುಸರಿಸಬೇಕಾದ ಕ್ರಮಗಳನ್ನೊಳಗೊಂಡ ನೀತಿಯನ್ನು ರೂಪಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ಮಕ್ಕಳಿಗಾಗಿ **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016 ನೀತಿ"** ಯನ್ನು ಜಾರಿಗೊಳಿಸಿದೆ**.**

ಮುಂದುವರೆದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪ್ರಕರಣ ಸಂಖ್ಯೆ: W.P.10208/2018ರಂತೆ ದಾಖಲಾದ ಸಾರ್ವಜನಿಕ ಹಿತಾಸಕ್ತಿ ಪ್ರಕರಣದನ್ವಯ ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ಮಕ್ಕಳ ರಕ್ಷಣಾ ನೀತಿಯು ಕೇವಲ ಶಿಕ್ಷಣ ಸಂಸ್ಥೆಗಳಿಗೆ ಸೀಮಿತವಾಗಿದ್ದು, ಇದನ್ನು ಪರಿಷ್ಕರಿಸುವಂತೆ ಸೂಚನೆ ನೀಡಲಾಗಿತ್ತು. ಅದರಂತೆ ಮಕ್ಕಳ ರಕ್ಷಣಾ ನೀತಿ 2016 ಅನ್ನು ರಚಿಸಿರುವ ಭಾಗೀದಾರ ಸಂಸ್ಥೆಗಳು ಹಾಗೂ ಅರ್ಜಿದಾರನ್ನೊಳಗೊಂಡಂತೆ ಸಮಿತಿ ರಚಿಸಿ ಶಿಕ್ಷಣ ಸಂಸ್ಥೆಗಳು ಅಲ್ಲದೇ ಸಾಮಾನ್ಯವಾಗಿ ಎಲ್ಲಾ ಮಕ್ಕಳಿಗೂ ಹಾಗೂ ವಸತಿ ಮತ್ತು ವಸತಿ ರಹಿತ ಹಾಸ್ಟಲ್ ಗಳಿಗೂ ಅನ್ವಯಿಸುವಂತೆ ಮಕ್ಕಳ ರಕ್ಷಣಾ ನೀತಿ 2023ನ್ನು ಪರಿಷ್ಕರಿಸಿ ಜಾರಿಗೊಳಿಸಲಾಗಿದೆ.

ಮಕ್ಕಳ ಹಿತದೃಷ್ಟಿಯಿಂದ ಹಾಗೂ ಮಕ್ಕಳ ರಕ್ಷಣೆಯನ್ನು ನಿಜವಾದ ಅರ್ಥದಲ್ಲಿ ಕಾರ್ಯರೂಪಕ್ಕೆ ತರಲು ಸಮಗ್ರ ಮಾರ್ಗಸೂಚಿಯನ್ನು ಈ ನೀತಿಯು ಒಳಗೊಂಡಿದ್ದು, ಇದರಲ್ಲಿ ಭಾಗವಹಿಸುವ ಎಲ್ಲಾ ಪಾಲುದಾರರು ಸಹಭಾಗೀದಾರರುಗಳಿಗೆ ನಿರ್ದೇಶನ ಮತ್ತು ಕಾನೂನುಗಳು, ಯೋಜನೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಈ ನೀತಿಯು ಒಳಗೊಂಡಿರುತ್ತದೆ.

ಆದ್ದರಿಂದ ಎಲ್ಲಾ ಭಾಗೀದಾರ ಇಲಾಖೆಗಳು ಕಡ್ಡಾಯವಾಗಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016ರ ಪರಿಷ್ಕೃತ 2023(ಪ್ರತಿಯನ್ನು ಲಗತ್ತಿಸಿದೆ) ರನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಮತ್ತು ಅನುಸರಣಾ ವರದಿಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಕೋರಿದೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

**(ಡಾ. ಶಮ್ಲಾ ಇಕ್ಬಾಲ್)**

ಇವರಿಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560 001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560 001.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು-560 001.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560 001.
6. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001.
7. ಸರ್ಕಾರದ ಕಾರ್ಯದರ್ಶಿ, ಅಲ್ಪ ಸಂಖ್ಯಾತರ ಕಲ್ಯಾಣ/ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001.
8. ಸರ್ಕಾರ ಕಾರ್ಯದರ್ಶಿ, ಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001.
9. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಿಡಬ್ಲ್ಯೂಡಿ ಕಟ್ಟಡ ಆವರಣ, ಆನಂದ ರಾವ್ ಸರ್ಕಲ್, ಬೆಂಗಳೂರು.
10. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ವಿ.ವಿ.ಟವರ್, ಬೆಂಗಳೂರು-560 001.

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023)

ಕರ್ನಾಟಕ ರಾಜ್ಯ ಸರ್ಕಾರದ ಈ ಕೆಳಗಿನ ಎಲ್ಲಾ ಇಲಾಖೆಗಳ ವ್ಯಾಪ್ತಿಗೆ ಬರುವ ಅಥವಾ ನಡೆಸುವ ಪ್ರತಿಯೊಂದು ಶಾಲೆ/ಪದವಿ ಪೂರ್ವ ಕಾಲೇಜು/ಶಿಕ್ಷಣ ರಹಿತ ವಸತಿ ನಿಲಯ/ಶಿಕ್ಷಣ ಸಹಿತ ವಸತಿ ನಿಲಯ ಅಥವಾ ಶಾಲೆ/ಕ್ರೀಡಾ ವಸತಿ ನಿಲಯ ಅಥವಾ ಶಾಲೆ/ ಅಂಗನವಾಡಿಗಳು/ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆ/ತೆರೆದ ತಂಗುದಾಣಗಳು/ಯಾವುದೇ ಶಿಕ್ಷಣ ಸಂಸ್ಥೆ/ವೃತ್ತಿಪರ ಕೋರ್ಸ್/ಕೋಚಿಂಗ್ ಕೇಂದ್ರ/ಐಟಿಐ ಕೋರ್ಸ್/ಪಾಲಿಟೆಕ್ನಿಕ್ ಕೋರ್ಸ್/ವಿವಿಧ ಇಲಾಖೆಯ ಅಡಿಯಲ್ಲಿ ನಡೆಯುವ ಡಿಪ್ಲೊಮಾ ಕೋರ್ಸ್/ವೃತ್ತಿ–ಸ್ವ–ಉದ್ಯೋಗ ತರಬೇತಿ ಅಥವಾ ಕೋಚಿಂಗ್ ಕೇಂದ್ರಗಳು/ಕಲೆ/ಚಿತ್ರಕಲೆ/ಕ್ರೀಡೆ/ನಾಟಕ/ಸಂಗೀತ/ ಯೋಗ/ನೃತ್ಯ/ಡ್ಯಾನ್ಸ್ ತರಬೇತಿ ಶಾಲೆಗಳು/ಪ್ಯಾರಾ ಮೆಡಿಕಲ್ ಕೋಚಿಂಗ್ ಕೇಂದ್ರಗಳು/ಧಾರ್ಮಿಕ ಶಿಕ್ಷಣ ಕೇಂದ್ರಗಳು ಹಾಗೂ 18 ವರ್ಷದೊಳಗಿನ ಮಕ್ಕಳಿರುವ ಔಪಚಾರಿಕ ಅಥವಾ ಅನೌಪಚಾರಿಕ ಕೇಂದ್ರಗಳಿಗೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023) ಅನ್ವಯಿಸುತ್ತದೆ ಹಾಗೂ ಕಡ್ಡಾಯವಾಗಿ ಇವರೆಲ್ಲರೂ ಅನುಷ್ಠಾನಗೊಳಿಸಬೇಕಾದ ನೀತಿ.

### ಕರ್ನಾಟಕ ಸರಕಾರ

| | | | |
|---|---|---|---|
| 1 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 13 | ತಾಂತ್ರಿಕ ಶಿಕ್ಷಣ ಇಲಾಖೆ (ಪಾಲಿಟೆಕ್ನಿಕ್ ಶಾಲೆಗಳು) |
| 2 | ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) | 14 | ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ನಿಯಂತ್ರಣ ಪ್ರಾಧಿಕಾರ, ಅರೆ ವೈದ್ಯಕೀಯ ಮಂಡಳಿ. |
| 3 | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ | 15 | ತಾಂತ್ರಿಕ ಶಿಕ್ಷಣ ಇಲಾಖೆ (ಪಾಲಿಟೆಕ್ನಿಕ್ ಶಾಲೆಗಳು) |
| 4 | ಸಮಾಜ ಕಲ್ಯಾಣ ಆಯುಕ್ತಾಲಯ (ಸಮಾಜ ಕಲ್ಯಾಣ ಇಲಾಖೆ) | 16 | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ |
| 5 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 17 | ಕರ್ನಾಟಕ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ |
| 6 | ಅಲ್ಪಸಂಖ್ಯಾತರ ನಿರ್ದೇಶನಾಲಯ (ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ) | 18 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. |
| 7 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಕ್ರೀಡಾವಸತಿ ನಿಲಯಗಳು) | 19 | ಮಕ್ಕಳ ರಕ್ಷಣಾ ನಿರ್ದೇಶನಾಲಯ |
| 8 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಪ್ಯಾರಾ ಮೆಡಿಕಲ್ ಕೋಚಿಂಗ್ ಕೇಂದ್ರಗಳು) | 20 | ಧಾರ್ಮಿಕ ಸಂಘ ಸಂಸ್ಥೆಗಳು |
| 9 | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ. | 21 | ಖಾಸಗಿ ಸಂಘ ಸಂಸ್ಥೆಗಳು/ಕಂಪೆನಿಗಳು, ಹಣಕಾಸು ಸಂಸ್ಥೆಗಳು, ಬ್ಯಾಂಕ್‌ಗಳು |
| 10 | ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ, ಬೆಂಗಳೂರು. | 22 | ಯಾವುದೇ ಅಕಾಡೆಮಿಗಳು, ವಿಶ್ವವಿದ್ಯಾಲಯ (18 ವರ್ಷದೊಳಗಿನ ಮಕ್ಕಳಿರುವ ಕೋರ್ಸ್ ಇದ್ದಲ್ಲಿ) |
| 11 | ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ | 23 | ಸ್ವಯಂಸೇವಾ ಸಂಸ್ಥೆಗಳು, ನಾಗರಿಕ ಸಂಘ ಸಂಸ್ಥೆಗಳು. |
| 12 | ಕಾರ್ಮಿಕ ಇಲಾಖೆ | 24 | ತಾಂತ್ರಿಕ ಶಿಕ್ಷಣ ಇಲಾಖೆ (ಪಾಲಿಟೆಕ್ನಿಕ್ ಶಾಲೆಗಳು) |

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023)

## ತರಬೇತಿ ಸಾಹಿತ್ಯಗಳು ಹಾಗೂ ಅನುಷ್ಠಾನ ಕಾರ್ಯವಿಧಾನಗಳು: ಪರಿವಿಡಿ

| ಅಡಕಗಳು | ಅನುಷ್ಠಾನದ ವಿವರ | ಪುಟಗಳು |
|---|---|---|
| ಅಡಕ–1 | **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023)** ರ ನೀತಿ ಹಾಗೂ ಮಾನದಂಡದಂತೆ ಅನುಷ್ಠಾನ ಮಾಡಬೇಕಾದ 12 ಅಂಶಗಳ (ಕೆಲಸಗಳ) ವಿವರ. | 3 ಪುಟ ಇದೆ. |
| ಅಡಕ–2 | ಭಾರತ ಸರ್ಕಾರದ **ಮಿಷನ್ ವಾತ್ಸಲ್ಯ ಯೋಜನೆಯಂತೆ** ಶಾಲೆ/ಹಾಸ್ಟೆಲ್/ಕಾಲೇಜು/ಶಿಕ್ಷಣ ಸಂಸ್ಥೆ/ ಎಲ್ಲಾ ಸರ್ಕಾರಿ/ಅರೆ ಸರ್ಕಾರಿ ಕಛೇರಿಗಳಲ್ಲಿ **ಮಕ್ಕಳ ಸಹಾಯವಾಣಿ 1098 ನ್ನು ಕಡ್ಡಾಯವಾಗಿ ಶಾಶ್ವತ ಫಲಕ** ಹಾಕುವ ಮಾದರಿ ನಮೂನೆ. | 2 ಪುಟ ಇದೆ |
| ಅಡಕ–3 | **ಮಕ್ಕಳ ರಕ್ಷಣಾ ನೀತಿ** ರಚಿಸುವ, ರಾಜ್ಯ ಮಾದರಿ. ಈ ಮಾದರಿಯಂತೆ ಆಯಾ ಶಾಲೆ/ವಸತಿ ನಿಲಯಗಳು/ಕಾಲೇಜು/ಶಿಕ್ಷಣ ಸಂಸ್ಥೆಗಳು/ವಿವಿಧ ಶಿಕ್ಷಣ ಕೇಂದ್ರಗಳು ತಮ್ಮ **ಮಕ್ಕಳ ರಕ್ಷಣಾ** ನೀತಿಯನ್ನು ರಚಿಸಬೇಕು. | 6 ಪುಟ ಇದೆ |
| ಅಡಕ–3 | **ಮಕ್ಕಳ ರಕ್ಷಣಾ ಸಮಿತಿ** ರಚಿಸುವುದು. ಅಡಕ 3 ರಲ್ಲಿ 6 ನೇ ಪುಟದಲ್ಲಿರುವಂತೆ. | – |
| ಅಡಕ–4 | **ಮಕ್ಕಳ ಬದ್ಧತಾ ಸ್ವೀಕಾರ ಪತ್ರ ನಮೂನೆ** | 2 ಪುಟ ಇದೆ |
| ಅಡಕ–5 | ಸಿಬ್ಬಂದಿ ಬದ್ಧತಾ ಸ್ವೀಕಾರ | 3 ಪುಟ ಇದೆ |
| ಅಡಕ–6 | **ಮಕ್ಕಳ ರಕ್ಷಣಾ ನೀತಿಯಂತೆ 20 ಬದ್ಧತೆಗಳ ಗೋಡೆ ಬರಹದ ಅಂಶಗಳು** | 3 ಪುಟ ಇದೆ |
| ಅಡಕ–7 | **ಮಕ್ಕಳ ಹಕ್ಕುಗಳ ಕ್ಲಬ್** ರಚಿಸುವ ಮಾದರಿ. (ಶಾಲೆಗಳ ಮಾದರಿಯನ್ನೇ ಅನುಸರಿಸುವುದು) | 5 ಪುಟ ಇದೆ |

**ಮಕ್ಕಳ ರಕ್ಷಣಾ ನೀತಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ 5 ಕಡತಗಳು ಹಾಗೂ 5 ರಿಜಿಸ್ಟರ್ ಅಥವಾ ನಡಾವಳಿ ಪುಸ್ತಕಗಳು.**

| ಕ್ರ.ಸ | ಕಡತಗಳು | ರಿಜಿಸ್ಟರ್‌ಗಳು |
|---|---|---|
| 1 | ಮಕ್ಕಳ ರಕ್ಷಣಾ ನೀತಿ ರಚಿಸಿ ಅನುಮೋದನೆ ಪಡೆದ ಕಡತ | ಮಕ್ಕಳ ರಕ್ಷಣಾ ಸಮಿತಿಯ ಸಭೆ ನಡಾವಳಿ ಪುಸ್ತಕ. |
| 2 | ಮಕ್ಕಳ ಬದ್ದತಾ ಸ್ವೀಕಾರ ಪತ್ರದ ಕಡತ | ಮಕ್ಕಳ ಹಕ್ಕುಗಳ ಕ್ಲಬ್ ಸಭೆ ನಡಾವಳಿ ಪುಸ್ತಕ |
| 3 | ಸಿಬ್ಬಂದಿ ಬದ್ದತಾ ಸ್ವೀಕಾರ ಪತ್ರದ ಕಡತ | ಮಕ್ಕಳ ಸಲಹಾ ಪೆಟ್ಟಿಗೆಗೆ ಬಂದ ಸಲಹೆಗಳ ಪರಿಹಾರ ನಡಾವಳಿ |
| 4 | ಮಕ್ಕಳ ಹಕ್ಕುಗಳ ಕ್ಲಬ್ ರಚನೆ ಕಡತ | ಮಕ್ಕಳ ಹಕ್ಕುಗಳ ಜಾಗೃತಿ. ಅರಿವು ಕಾರ್ಯಕ್ರಮಗಳ ವರದಿ ಪುಸ್ತಕ. |
| 5 | ಸಲಹಾ ಪಟ್ಟಿಗೆಯ ಮಕ್ಕಳ ಚೀಟಿಗಳ ಕಡತ | ಪೋಷಕರ ಸಭೆ ನಡಾವಳಿ ಪುಸ್ತಕ. |

<table>
<tr><td colspan="3">ಮಕ್ಕಳ ಹಕ್ಕುಗಳ ಕ್ಲಬ್: ಮಕ್ಕಳು ಅವರ ಹಕ್ಕುಗಳನ್ನು ಅನುಭವಿಸಲು: ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ, ಮಕ್ಕಳಿಂದಲೇ ಕೂಡಿದ, ಮಕ್ಕಳೇ ರಚಿಸುವ ಕ್ಲಬ್ "ಮಕ್ಕಳ ಹಕ್ಕುಗಳ ಕ್ಲಬ್": ಸದಸ್ಯರ ವಿವರ;</td></tr>
<tr><td>ಕ್ರ.ಸ</td><td colspan="2">ಸದಸ್ಯರ ವಿವರ. (ಇದನ್ನು ಸಂಘ, ಸಮಿತಿ, ಒಕ್ಕೂಟ ಅಂತ ಕರೆಯುವುದು ಅಷ್ಟು ಸೂಕ್ತವಲ್ಲ. ಕ್ಲಬ್, ಮಕ್ಕಳ ಹಕ್ಕುಗಳ ಕ್ಲಬ್ ಎಂದೇ ಕರೆಯಬೇಕು)</td></tr>
<tr><td>1</td><td>4 ನೇ ತರಗತಿಯಿಂದ ಪ್ರಾರಂಬಿಸಿ ಪ್ರತಿ ತರಗತಿ (ವಿಭಾಗ) ಯಿಂದ 2 ಮಕ್ಕಳನ್ನು (ಮಕ್ಕಳೇ ಆಯ್ಕೆ ಮಾಡುವುದು) ಆಯ್ಕೆ ಮಾಡಬೇಕು. ಒಬ್ಬರು ಬಾಲಕ, ಒಬ್ಬರು ಬಾಲಕಿ. ಒಂದೇ ಗುಂಪಿನ ಮಕ್ಕಳು ಇದ್ದರೆ 2 ಮಕ್ಕಳು. ಕಾಲೇಜು ಅಥವಾ ಕೇವಲ ಎರಡೇ ವಿಭಾಗ ಇದ್ದರೆ 4 ರಿಂದ 6 ಮಕ್ಕಳನ್ನು ಆಯ್ಕೆ ಮಾಡಬಹುದು. (CRC- Child Rights Club)</td><td>14 ಮಕ್ಕಳು (4 ರಿಂದ 10 ನೇ ತರಗತಿ ಶಾಲೆಯಾದರೆ) ಬೇರೆ ಬೇರೆ ಸಂಸ್ಥೆಗಳಿಗೆ ಬೇರೆ ಬೇರೆ ಸಂಖ್ಯೆಗಳು ಇರುತ್ತವೆ.</td></tr>
<tr><td colspan="3">ಮಕ್ಕಳ ಹಕ್ಕುಗಳ ಕ್ಲಬ್ ನಲ್ಲಿ ಅಧ್ಯಕ್ಷರು, ಉಪಾಧ್ಯಕ್ಷ, ಕಾರ್ಯದರ್ಶಿ ಅಂತ ಇರುವುದಿಲ್ಲ. ಪ್ರತಿ ತರಗತಿಯಿಂದ ಆಯ್ಕೆ ಮಾಡಿದ ಒಟ್ಟು ಮಕ್ಕಳಲ್ಲಿ 4 ಮಕ್ಕಳನ್ನು ನಿರ್ದೇಶಕರನ್ನಾಗಿ ಮಕ್ಕಳೇ ಆಯ್ಕೆ ಮಾಡಬೇಕು. ಪ್ರತಿ ತಿಂಗಳ ಕಾರ್ಯಕ್ರಮವನ್ನು. ಈ 4 ನಿರ್ದೇಶಕರು ನಡೆಸಿ ಕೊಡುತ್ತಾರೆ. ಪ್ರತಿ 2 ತಿಂಗಳಿಗೊಮ್ಮೆ ಇವರನ್ನು ಬದಲಾಯಿಸಬೇಕು, ಅದು ಪ್ರತಿ ತಿಂಗಳ ಕಾರ್ಯಕ್ರಮದಲ್ಲಿ ಬದಲಾಯಿಸಬೇಕು. ಪ್ರತಿ ತಿಂಗಳ ಕಾರ್ಯಕ್ರಮದಲ್ಲಿ ನಿರ್ದೇಶಕ–1: ಆ ಸಮಾರಂಭದ ಅಧ್ಯಕ್ಷ, ನಿರ್ದೇಶಕ–2: ಉದ್ಘಾಟನೆ, ನಿರ್ದೇಶಕ–3: ನಿರೂಪಣೆ, ನಿರ್ದೇಶಕ–4: ವರದಿಗಾರ. ಈ ಕ್ಲಬ್ ನಡಿಯಲ್ಲಿ ವರ್ಷಕ್ಕೆ 10 ಜ್ಞಾನಾರ್ಜನೆ, ಅರಿವು, ಕ್ಷೇತ್ರ ಭೇಟಿ, ಜಾಗೃತಿ ಹಾಗೂ ಮಾಹಿತಿ ಕಾರ್ಯಕ್ರಮ ನಡೆಸಬೇಕು. (ತೆರೆದ ಮನೆ ಬಿಟ್ಟು).</td></tr>
<tr><td>2.</td><td>ಒಬ್ಬರು ಉತ್ತಮ ಶಿಕ್ಷಕರು ಅಥವಾ ಸಿಬ್ಬಂದಿಯನ್ನು ಮಾರ್ಗದರ್ಶಕ ಸದಸ್ಯರನ್ನಾಗಿ ಸಂಸ್ಥೆಯ ಮುಖ್ಯಸ್ಥರು ಮತ್ತು ಮಕ್ಕಳು ಸೇರಿ ಆಯ್ಕೆ ಮಾಡಬೇಕು. ಇವರೇ ಈ ಮಕ್ಕಳ ಹಕ್ಕುಗಳ ಕ್ಲಬ್‌ನ ವರ್ಷದ 10 ಕಾರ್ಯಕ್ರಮ ಸೇರಿದಂತೆ ಎಲ್ಲಾ ಚಟುವಟಿಕೆಗಳಿಗೆ ಮುಖ್ಯ ಮಾರ್ಗದರ್ಶಕರಾಗಿ ಇರುತ್ತಾರೆ.</td><td>1– ಮಾರ್ಗದರ್ಶಕ ಸದಸ್ಯರು</td></tr>
<tr><td>3.</td><td>ಮುಖ್ಯೋಪಾಧ್ಯಯರು/ಪ್ರಾಂಶುಪಾಲರು/ನಿಲಯ ಪಾಲಕರು/ಮೇಲ್ವಿಚಾರಕರು/ಮುಖ್ಯಸ್ಥರು</td><td>1–ಪ್ರೋತ್ಸಾಹಕ ಸದಸ್ಯರು</td></tr>
<tr><td>4.</td><td>ಇಬ್ಬರು ಪೋಷಕರು (1 ಮಹಿಳೆ, 1 ಪುರುಷ) ಸಂಸ್ಥೆಯ ಮುಖ್ಯಸ್ಥರು ಆಯ್ಕೆ ಮಾಡಬೇಕು</td><td>2–ಪ್ರೋತ್ಸಾಹಕ ಸದಸ್ಯರು</td></tr>
<tr><td>5.</td><td>SDMC/PTS/SBC/CDC ಯ ಅಧ್ಯಕ್ಷರು ಅಥವಾ ಒಬ್ಬರು ಸದಸ್ಯರು</td><td>1–ಪ್ರೋತ್ಸಾಹಕ ಸದಸ್ಯರು</td></tr>
</table>

**ಕರ್ನಾಟಕ ರಾಜ್ಯ ಸರಕಾರದ ವಿವಿಧ ಇಲಾಖೆಗಳಿಂದ ಹಾಗೂ ವಿವಿಧ ಸಂಸ್ಥೆಗಳಿಂದ ನಡೆಸುತ್ತಿರುವ ಪ್ರತಿಯೊಂದು ಶಾಲೆ/ಪದವಿ ಪೂರ್ವ ಕಾಲೇಜು/ಶಿಕ್ಷಣ ರಹಿತ ವಸತಿ ನಿಲಯ/ಶಿಕ್ಷಣ ಸಹಿತ ವಸತಿ ಶಾಲೆ/ ಕ್ರೀಡಾ ವಸತಿ ನಿಲಯ ಅಥವಾ ಶಾಲೆ/ ಅಂಗನವಾಡಿಗಳು/ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆ/ತೆರೆದ ತಂಗುದಾಣಗಳು/ಯಾವುದೇ ಶಿಕ್ಷಣ ಸಂಸ್ಥೆ/ವೃತ್ತಿಪರ ಕೋರ್ಸ್/ಕೋಚಿಂಗ್ ಕೇಂದ್ರ/ಐಟಿಐ ಕೋರ್ಸ್/ ಪಾಲಿಟೆಕ್ನಿಕ್ ಕೋರ್ಸ್/ವೃತ್ತಿ–ಸ್ವ–ಉದ್ಯೋಗ ತರಬೇತಿ,ಕೋಚಿಂಗ್/ಕಲೆ/ಚಿತ್ರಕಲೆ/ಕ್ರೀಡೆ/ನಾಟಕ/ ಸಂಗೀತ/ ಯೋಗ/ನೃತ್ಯ/ಡ್ಯಾನ್ಸ್/ತರಬೇತಿ ಶಾಲೆಗಳು/ಪ್ಯಾರಾ ಮೆಡಿಕಲ್ ಕೋಚಿಂಗ್ ಕೇಂದ್ರಗಳು/ ವಿವಿಧ ಇಲಾಖೆಯಡಿಯಲ್ಲಿನ ಡಿಪ್ಲೊಮಾ ಕೋರ್ಸ್‌ಗಳು/ಧಾರ್ಮಿಕ ಶಿಕ್ಷಣ ಕೇಂದ್ರಗಳು ಹಾಗೂ 18 ವರ್ಷದೊಳಗಿನ ಮಕ್ಕಳಿರುವ ಔಪಚಾರಿಕ ಅಥವಾ ಅನೌಪಚಾರಿಕ ಕೇಂದ್ರಗಳಲ್ಲಿ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023) ರ ಪ್ರಕಾರ ಅನುಷ್ಠಾನ ಮಾಡಿ ಕೈಗೊಳ್ಳಬೇಕಾದ ಪ್ರಮುಖ ಕಾರ್ಯಗಳು.**

***(ಅವುಗಳು ಸರಕಾರಿ, ಅನುದಾನಿತ, ಅನುದಾನರಹಿತ, ಖಾಸಗಿ/ಕೇಂದ್ರಿಯ, ಸಿ.ಬಿ.ಎಸ್.ಇ ಐ.ಸಿ.ಎಸ್.ಇ, ಸೈನಿಕ ಶಾಲೆ, ಸ್ವಯಂಸೇವಾ ಸಂಸ್ಥೆಗಳು ನಡೆಸುವ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ/ ಅರೆ ಸರ್ಕಾರಿ/ಖಾಸಗಿ ಸಂಸ್ಥೆಗಳು/ಧಾರ್ಮಿಕ ಸಂಸ್ಥೆಗಳು ನಡೆಸುತ್ತಿರುವ, ಯಾವುದೇ ವ್ಯಾಪ್ತಿಯಲ್ಲಿದ್ದರೂ ಮಕ್ಕಳಿಗೆ ಸಂಬಂಧಿಸಿದ ಎಲ್ಲವೂ ಒಳಗೊಂಡಂತೆ ಇತರೇ ಯಾರಿಗೇ ಒಳಪಟ್ಟಿದ್ದರೂ 18 ವರ್ಷದೊಳಗಿನ ಮಕ್ಕಳಿದ್ದಲ್ಲಿ ಅವರೆಲ್ಲರಿಗೂ ಅನ್ವಯಿಸುತ್ತದೆ.)***

1. ಕರ್ನಾಟಕದ ಉಚ್ಚ ನ್ಯಾಯಾಲಯವು ದಿನಾಂಕ:22/07/2020 ರಂದು ರಿಟ್‌ಅರ್ಜಿ ಸಂಖ್ಯೆ: 10208/2018 ರ ಮೂಲಕ ಹೊರಡಿಸಿದ ಆದೇಶದ ಪ್ರಕಾರ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023) ರ ಮಾರ್ಗಸೂಚಿ ಮತ್ತು ಮಾನದಂಡದಂತೆ ತನ್ನ **"ಮಕ್ಕಳ ರಕ್ಷಣಾ ನೀತಿ" (Child Protection Policy - CPP)** ಯನ್ನು ರಚಿಸಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಅನುಷ್ಠಾನ ಮಾಡುವುದು. (ತಮ್ಮ ಇಲಾಖೆಯ ತಾಲ್ಲೂಕ ಅಥವಾ ಜಿಲ್ಲಾ ಮಟ್ಟದ ಆಧಿಕಾರಿಗಳ ಮುಖಾಂತರ). ತಾಲೂಕು/ಜಿಲ್ಲಾ ಮಟ್ಟದ ವ್ಯವಸ್ಥೆ ಅಥವಾ ಅಧಿಕಾರಿಗಳು ಇಲ್ಲದಿದ್ದಲ್ಲಿ, ಸ್ವಯಂಸೇವಾ ಸಂಸ್ಥೆಗಳು ಅಥವಾ ಖಾಸಗಿ ಸಂಸ್ಥೆಗಳು ನಡೆಸುವುದಿದ್ದರೆ ಆಯಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮುಖಾಂತರ ಜಿಲ್ಲಾಧಿಕಾರಿಗಳಿಂದಲೇ ಅನುಮತಿ ಪಡೆಯಬೇಕು. (ಅಡಕ–3 ರ ರಾಜ್ಯ ಮಾದರಿ ಅನುಸಾರ ಆಯಾ ಶಿಕ್ಷಣ ಸಂಸ್ಥೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಅವರುಗಳೇ ತಯಾರಿಸಬೇಕು)

2. ಚೈಲ್ಡ್ ಹೆಲ್ಪ್‌ಲೈನ್/**"ಮಕ್ಕಳ ಸಹಾಯವಾಣಿ ಸಂಖ್ಯೆ 1098/112"**ರ **(Child Helpline: 1098, CHL) ಶಾಶ್ವತ ಗೋಡೆಬರಹವನ್ನು** ಕಡ್ಡಾಯವಾಗಿ ಗುಣಮಟ್ಟದ ರೂಪದಲ್ಲಿ ಶಾಶ್ವತವಾಗಿ ಇರುವಂತೆ **ಬರೆಸುವುದು.** (ಅಡಕ–2 ರಲ್ಲಿರುವ ಆದೇಶ ಮತ್ತು ಮಾದರಿಯಂತೆ)

3. **'ಮಕ್ಕಳ ರಕ್ಷಣಾ ಸಮಿತಿ'** (ಸಿ.ಪಿ.ಸಿ, **CPC- Child Protection Committee**) ರಚಿಸಿ ಕ್ರಿಯಾಶೀಲ ಅನುಷ್ಠಾನಕ್ಕೆ ತರುವುದು. (ಅಡಕ–3, ಪುಟ 6 ರಲ್ಲಿರುವಂತೆ) **ಮಕ್ಕಳ ಸುರಕ್ಷತೆ ಹಾಗೂ ಸುಭದ್ರತೆ** ಕುರಿತಂತೆ ಇರುವ **ವಿಪತ್ತು ನಿರ್ವಹಣಾ ಸಮಿತಿಯನ್ನು** ಇದರೊಂದಿಗೆ ಮಾಡಬಹುದು. ಇದರ ರಚನೆ ಹಾಗೂ ಅನುಷ್ಠಾನದ ಸಂದರ್ಭದಲ್ಲಿ **"ಮಕ್ಕಳ ಭಾಗವಹಿಸುವಿಕೆ"** ಯನ್ನು ಎಲ್ಲಾ ಹಂತದಲ್ಲಿ ಖಾತ್ರಿಪಡಿಸಬೇಕು.

**4.** ಈ ಸಮಿತಿಯು **3 ತಿಂಗಳಿಗೊಮ್ಮೆ ಸಭೆ ನಡೆಸುವುದು ಕಡ್ಡಾಯ. ವರ್ಷಕ್ಕೆ 4 ಸಭೆ ನಡೆಸಿ, ನಡಾವಳಿ ಪುಸ್ತಕ ಹಾಗೂ ಅದರ ಕಡತವನ್ನು** ಕಡ್ಡಾಯವಾಗಿ ನಿರ್ವಹಿಸುವುದು. **ಪ್ರತಿ ಅವಧಿಯ ಸಭೆಯಲ್ಲಿ *ಎಲ್ಲಾ ರೀತಿಯ ಮಕ್ಕಳ ಮೂಲಭೂತ ಶಿಕ್ಷಣ, ಮೂಲಭೂತ ಸೌಲಭ್ಯ/ಸೌಕರ್ಯ, ಸುರಕ್ಷತೆ ಮತ್ತು ಸುಭ್ರದತೆ, ಮಕ್ಕಳು ಮನೆಯಿಂದ ಬರುವ ಹಾಗೂ ಹೋಗುವ, ವಿಪತ್ತು ನಿರ್ವಹಣೆ ಹಾಗೂ ವಿವಿಧ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಮಕ್ಕಳ ರಕ್ಷಣೆ ಕುರಿತು ಕಾರ್ಯಸೂಚಿ ಇಟ್ಟು ಸಭೆ ನಡೆಸಿ ತೀರ್ಮಾನ ಕೈಗೊಂಡು ಅನುಷ್ಠಾನಕ್ಕೆ ನಡಾವಳಿ ಮಾಡಿ, ಅವುಗಳನ್ನು ರಿಜಿಸ್ಟರ್ ನಲ್ಲಿ ದಾಖಲಿಸಿ ಕಡ್ಡಾಯವಾಗಿ ಅನುಷ್ಠಾನಕ್ಕೆ ತರಬೇಕು.***

***<u>ಮಕ್ಕಳ ಸುಭದ್ರತೆ ಹಾಗೂ ಸುರಕ್ಷತೆಯಲ್ಲಿ ಮುಖ್ಯವಾಗಿ:</u> (Comprehensive Safety) ಶಾಲಾ/ಕಾಲೇಜು/ವಸತಿ ನಿಲಯ/ಶಿಕ್ಷಣ ಸಂಸ್ಥೆಯ ಆವರಣ, ಪ್ರವೇಶ ದ್ವಾರ, ಕಾಂಪೌಂಡ್, ಕೊಠಡಿಗಳು, ಶೌಚಾಲಯ, ಕುಡಿಯುವ ನೀರು, ನೀರಿನ ಸಂಪ್, ಶುದ್ಧ ನೀರಿನ ಖಾತ್ರಿ, ಪ್ರಥಮ ಚಿಕಿತ್ಸಾ ಕಿಟ್, ವಿದ್ಯುತ್ ಕಂಬ, ತಂತಿ, ಬಿಸಿಯೂಟದ ಸಾಮಾಗ್ರಿ ಹಾಗೂ ಸಂಪೂರ್ಣ ವ್ಯವಸ್ಥೆ/ ಅಡುಗೆ ಸಿಲಿಂಡರ್‌ಗಳು, ಆಹಾರ ಧಾನ್ಯಗಳು, ಬಿಸಿಯೂಟವನ್ನು ಮಕ್ಕಳನ್ನು ಕೂರಿಸಿ ನೀಡುವುದು, ಮಕ್ಕಳ ಪ್ರವಾಸ, ಕ್ರೀಡಾ ಕೂಟ/ಸಾಂಸ್ಕೃತಿಕ ಕಾರ್ಯಕ್ರಮ, ಅನಧಿಕೃತ ವ್ಯಕ್ತಿಗಳ ಭೇಟಿ, ಮಕ್ಕಳ 100% ದಾಖಲಾತಿ–ಹಾಜರಾತಿ, ಮಕ್ಕಳ ಆರೋಗ್ಯ, ಸಿಸಿಟಿವಿ ಕ್ಯಾಮರಾ, ವಿಪತ್ತು ನಿರ್ವಹಣೆ, ಮಕ್ಕಳ ಮೇಲಿನ ಮನೋ–ಸಾಮಾಜಿಕ–ದೈಹಿಕ ಶಿಕ್ಷೆ ನಿಷೇಧ, ಮಕ್ಕಳ ಸಾರಿಗೆ ವ್ಯವಸ್ಥೆ, ಅತಿಯಾದ ಮೊಬೈಲ್ ಬಳಕೆಯ ಪರಿಣಾಮ ಇತ್ಯಾದಿ ಅಂಶಗಳನ್ನು ಮಕ್ಕಳ ಹಿತ ದೃಷ್ಟಿಯಿಂದ ಮಕ್ಕಳ ಸ್ನೇಹಿ ನೆಲೆಯಲ್ಲಿ ಪ್ರತಿ ಸಭೆಯಲ್ಲಿ ಚರ್ಚಿಸಿ ಅನುಷ್ಠಾನಕ್ಕೆ ತರಬೇಕು.***

5. **ಮಕ್ಕಳ ಹಕ್ಕುಗಳು, ಮಕ್ಕಳ ಸಂರಕ್ಷಣೆ, ಮಿಷನ್ ವಾತ್ಸಲ್ಯ ಯೊಜನೆ,** ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986, ತಿದ್ದುಪಡಿ 2016, ಬಾಲ್ಯ ವಿವಾಹ ನಿಷೇಧ ಕಾಯ್ದೆ–2006, ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ–2016, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 ತಿದ್ದುಪಡಿ 2021, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012, ತಿದ್ದುಪಡಿ 2019, **ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶ** ಹಾಗೂ ವಿಪತ್ತು ಎದುರಿಸುವುದು ಹಾಗೂ ಪರಿಹಾರಗಳ ಬಗ್ಗೆ ಮತ್ತು ಸಂವಹನ/ ಸಂದರ್ಶನ/ಸಾರ್ವಜನಿಕ ಸಂಪರ್ಕ/ಸಮಾಲೋಚನೆ/ಭಾಷಣ/ನಾಯಕತ್ವ ಕಲೆಗಳ ತರಬೇತಿಗಳನ್ನು ನಡೆಸುವುದು.

<u>ಮಕ್ಕಳ ಬದ್ಧತಾ ಪತ್ರ:</u> **(Children's Endorsement Letter)** ***"ನಾನು ಎಲ್ಲಾ ರೀತಿಯ ಹಿಂಸೆ, ದೌರ್ಜನ್ಯ, ಹಾಗೂ ಶೋಷಣೆಗಳಿಂದ, ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳ ವಂಚನೆ, ಮಾದಕ ವ್ಯಸನಗಳಿಂದ ಮುಕ್ತವಾಗಿ, ಸೈಬರ್ ಸುರಕ್ಷತೆ ಮತ್ತು ಎಲ್ಲಾ ರೀತಿಯ ಬೆದರಿಸುವ ಕೃತ್ಯಗಳನ್ನು ಎದುರಿಸುವ ಜ್ಞಾನ ಪಡೆದು, ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುತ್ತೇನೆ, ಅವುಗಳಿಗೆ ಬಲಿಯಾಗುವುದಿಲ್ಲ. ಬಾಲ್ಯ ವಿವಾಹ ಮತ್ತು ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯಂತಹ ಯಾವುದೇ ಅಭಿವೃದ್ಧಿ ಮಾರಕ ಪಿಡುಗುಗಳಿಗೆ ಒಳಗಾಗುವುದಿಲ್ಲ. ಒಂದುವೇಳೆ ಪ್ರಕರಣಗಳು ಕಂಡುಬಂದರೆ ಸಂಬಂಧಿಸಿದವರಿಗೆ ಧೈರ್ಯವಾಗಿ ದೂರು ನೀಡುತ್ತೇನೆ"*** ಎಂಬ ಬದ್ಧತೆಯನ್ನು ಎಲ್ಲಾ ಮಕ್ಕಳಿಂದ, **ಮಕ್ಕಳ ಬದ್ಧತಾ ಪತ್ರ** ದ ಮೂಲಕ ಬದ್ಧತೆಯನ್ನು ಪಡೆಯುವುದು. (ಅಡಕ–4 ರಲ್ಲಿರುವಂತೆ).

6. <u>**ಪ್ರತಿ ಸಿಬ್ಬಂದಿಯಿಂದ ಬದ್ಧತಾ ಸ್ವೀಕಾರ ಪತ್ರ ಪಡೆಯುವುದು: (Staff Endorsement Letter);**</u> ನಿಗದಿತ ನಮೂನೆಯಲ್ಲಿ, ಪ್ರತಿಯೊಬ್ಬ ಆಡಳಿತ ಮಂಡಳಿ ಸದಸ್ಯರು, ಮುಖ್ಯಸ್ಥರು, ಪ್ರಾಂಶುಪಾಲರು, ಮುಖ್ಯೋಪಾಧ್ಯಯರು, ಶಿಕ್ಷಕರು, ಭೋಧಕೇತರ ಸಿಬ್ಬಂದಿ, ಇತೆರೇ ಎಲ್ಲಾ ರೀತಿಯ ಸೇವೆ ನೀಡುವ ನೌಕರರರಿಂದ ಪ್ರತ್ಯೇಕವಾಗಿ **ಬದ್ಧತಾ ಪತ್ರಕ್ಕೆ** ಸಹಿ ಪಡೆದು ಕಡತ ನಿರ್ವಹಿಸುವುದು. ಇದಕ್ಕೆ ಪ್ರತ್ಯೇಕ ಕಡತವನ್ನು ಕಡ್ಡಾಯವಾಗಿ ನಿರ್ವಹಿಸುವುದು. (***ಗುತ್ತಿಗೆ, ಒಪ್ಪಂದ ಮೇಲೆ ಬಂದಿರುವ ಸಿಬ್ಬಂದಿ, ಅತಿಥಿ ಶಿಕ್ಷಕರು, SDMC or PTA or CDC or SBT ಅಧ್ಯಕ್ಷರು, ಎಲ್ಲಾ ಸದಸ್ಯರುಗಳು, ವಿವಿಧ ಸಮಿತಿ ಸದಸ್ಯರುಗಳು, ಸೇವೆ ನೀಡುವ ಮುಖಾಂತರ ನಿಮ್ಮಲ್ಲಿಗೆ ಬರುವ ಪ್ರತಿಯೊಬ್ಬರಿಂದಲೂ ಈ ಬದ್ಧತಾ ಸ್ವೀಕಾರ ಪತ್ರ ಪಡೆಯಬೇಕು. (ಅಡಕ–5 ರಲ್ಲಿರುವಂತೆ, ಪ್ರತಿ 2 ವರ್ಷಕ್ಕೊಮ್ಮೆ ತಿದ್ದುಪಡಿ ಇದ್ದಲ್ಲಿ ತಿದ್ದುಪಡಿ ಮಾಡಿ ಹೊಸ ಬದ್ಧತಾ ಪತ್ರಕ್ಕೆ ಸಹಿ ಪಡೆಯಬೇಕು.) ಇದಲ್ಲದೆ ನಿಯಾಮನುಸಾರ ಪ್ರತಿ ಶಿಕ್ಷಕರ/ಸಿಬ್ಬಂದಿಯ ಪೊಲೀಸ್ ಪರಿಶೀಲನಾ ವರದಿ ಕಡ್ಡಾಯ.***

7. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023) ರ ಮಾರ್ಗಸೂಚಿ ಮತ್ತು ಮಾನದಂಡದಂತೆ ರಚಿಸಿದ ತನ್ನ **"ಮಕ್ಕಳ ರಕ್ಷಣಾ ನೀತಿ"** ಯಂತೆ ಇರುವ 20 ಬದ್ಧತೆಗಳನ್ನು ಗೋಡೆಯಲ್ಲಿ ಕಡ್ಡಾಯವಾಗಿ ಭಿತ್ತರಿಸಬೇಕು. (ಅಡಕ–6 ರಲ್ಲಿ ಇರುವಂತೆ)

8. ಮಕ್ಕಳಿಗೆ ಲಭ್ಯವಾಗುವಂತೆ **ಸಲಹಾ/ದೂರು ಪೆಟ್ಟಿಗೆ ಅಳವಡಿಸುವುದು. (Suggestion Box)** (75 ಮಕ್ಕಳಿಗೆ 1 ರಂತೆ ಪೆಟ್ಟಿಗೆ ಅಳವಡಿಸಬೇಕು. ಅವುಗಳು ಮಕ್ಕಳಿಗೆ ಸುಲಭವಾಗಿ ಸಿಗುವಂತಿರಬೇಕು. ಸಲಹಾ/ದೂರು ಪೆಟ್ಟಿಗೆಯಲ್ಲಿರುವ ದೂರುಗಳನ್ನು ವಾರಕ್ಕೊಮ್ಮೆ **ಮಕ್ಕಳ ರಕಣಾ ಸಮಿತಿಯ** ಸದಸ್ಯರೊಂದಿಗೆ (ಮಕ್ಕಳ ಸದಸ್ಯರ ಹಾಜರಾತಿ ಕಡ್ಡಾಯ) ತೆಗೆದು ಮಕ್ಕಳ ಎಲ್ಲಾ ಸಲಹೆ/ದೂರುಗಳನ್ನು ಗೌರವದಿಂದ ಸ್ವೀಕರಿಸಿ ಅದನ್ನು ಪ್ರಾಮಾಣಿಕವಾಗಿ ಪರಿಹರಿಸಬೇಕು. ಬೇರೆ ಇಲಾಖೆಗಳಿಗೆ ಸಂಬಂದಿಸಿದ್ದಾದಲ್ಲಿ ವಿಂಗಡಿಸಬೇಕು, ಆಯಾ ದೂರುಗಳನ್ನು ಆಯಾ ಇಲಾಖೆಗೆ ಹಸ್ತಾಂತರಿಸಬೇಕು. (ಸಿಪಿಸಿಯ ಅಧ್ಯಕ್ಷರು. ಮಕ್ಕಳ ರಕ್ಷಣಾಧಿಕಾರಿ ಮತ್ತು ಒಂದು ಸದಸ್ಯ ಮಗುವಿನ ಸಮ್ಮುಖದಲ್ಲಿ ವಾರಕ್ಕೊಮ್ಮೆ ಸಲಹಾ ಪೆಟ್ಟಿಗೆಯನ್ನು ತೆರೆದು ಕ್ರಮ ವಹಿಸುವುದು)

ಸಲಹಾ/ದೂರು ಪೆಟ್ಟಿಗೆಯ ದಾಖಲೆಯ ಬಗ್ಗೆ ಕೈಗೊಂಡ ಕ್ರಮದ ನಡಾವಳಿ ಪುಸ್ತಕವನ್ನು ನಿರ್ವಹಿಸಬೇಕು ಮತ್ತು ಮಕ್ಕಳ ಸಲಹಾ ಪತ್ರ/ಚೀಟಿಗಳನ್ನು ಪ್ರತ್ಯೇಕವಾಗಿ ಎ4 ಕಾಗದದಲ್ಲಿ ಅಂಟಿಸಿ ಪ್ರತ್ಯೇಕ ಕಡತ ನಿರ್ವಹಿಸಬೇಕು. ಮಕ್ಕಳ ಸಲಹೆ ದೂರುಗಳಿಗೆ ಕೈಗೊಂಡ ಕ್ರಮ/ಪರಿಹಾರ/ತೀರ್ಮಾನದ ಬಗ್ಗೆ ನಡಾವಳಿ ಪುಸ್ತಕದಲ್ಲಿ ಬರೆಯಬೇಕು. ಆದರೆ ಸಲಹೆ/ದೂರು ನೀಡಿದ ಮಗುವಿನ ಹೆಸರನ್ನು ನಡಾವಳಿ ಪುಸ್ತಕದಲ್ಲಿ ದಾಖಲಿಸಬಾರದು, ಮಗು ಬರೆದ ಚೀಟಿಗೆ ಕ್ರಮ ಸಂಖ್ಯೆ ಬರೆದು ಆ ಕ್ರಮ ಸಂಖ್ಯೆಯನ್ನಷ್ಟೇ ನಮೂದಿಸಬೇಕು) ಪ್ರತಿ ವಾರ ಪೆಟ್ಟಿಗೆ ತೆರೆಯುವಾಗ, ಯಾವುದೇ ಪತ್ರ/ಚೀಟಿ/ದೂರು ಇಲ್ಲದಿದ್ದರೂ ನಡಾವಳಿ ಪುಸ್ತಕದಲ್ಲಿ ಯಾವುದೇ ಪತ್ರ/ಚೀಟಿ/ದೂರು ಇಲ್ಲವೆಂದು ನಮೂದಿಸಿ ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರು, ಮಕ್ಕಳ ರಕ್ಷಣಾಧಿಕಾರಿ ಹಾಗೂ ಒಂದು ಮಗು ಸಹಿ ಮಾಡಿರಬೇಕು. ಒಟ್ಟಲ್ಲಿ ತಿಂಗಳಿಗೆ 4 ಸಲ ಪೆಟ್ಟಿಗೆ ತೆರದಿರುವ ಬಗ್ಗೆ ನಡಾವಳಿ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸಬೇಕು.

9. **'ಮಕ್ಕಳ ಹಕ್ಕುಗಳ ಕ್ಲಬ್' ನ್ನು (Child Rights Club-CRC)** ರಚಿಸಿ ಕ್ರಿಯಾಶೀಲವಾಗಿ ಅನುಷ್ಠಾನಕ್ಕೆ ತರುವುದು ಕಡ್ಡಾಯ. ಇದರ ನಡಾವಳಿ ಪುಸ್ತಕವನ್ನು ಪ್ರತ್ಯೇಕವಾಗಿ ನಿರ್ವಹಿಸುವುದು. (ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತರ ಸುತ್ತೋಲೆ ಸಂಖ್ಯೆ: ಎಡಿಎಂ2(2)ಅನುಮತಿ 03/2015–16 ದಿನಾಂಕ: 07–09–2015 ರಲ್ಲಿ ತಿಳಿಸಿರುವಂತೆ) ಪಿ ಯು ಕಾಲೇಜ್‌ಗಳು ಸೇರಿದಂತೆ 18 ವರ್ಷದೊಳಗಿನ ಮಕ್ಕಳಿರುವ ಔಪಚಾರಿಕ ಅಥವಾ ಅನೌಪಚಾರಿಕ ಯಾವುದೇ ಶಿಕ್ಷಣ ಕೇಂದ್ರಗಳಲ್ಲಿ, ಇದೇ ಮಾದರಿಯಲ್ಲಿ ಬೇಕಾದ ಬದಲಾವಣೆ ಮಾಡಿಕೊಂಡು **'ಮಕ್ಕಳ ಹಕ್ಕುಗಳ ಕ್ಲಬ್' ನ್ನು** ರಚಿಸಿ ಕ್ರಿಯಾಶೀಲವಾಗಿ ಅನುಷ್ಠಾನಕ್ಕೆ ತರುವುದು. ಇದಕ್ಕೆ ಯಾವುದೇ ಪ್ರತ್ಯೇಕ ಸುತ್ತೋಲೆ ಅಗತ್ಯವಿಲ್ಲ, ಇದು ಕಲಿಕೆ, ಅರಿವು ಹಾಗೂ ಜ್ಞಾನಾರ್ಜನೆಯ ಭಾಗವಾದ್ದರಿಂದ ಮಕ್ಕಳ ಹಿತದೃಷ್ಠಿಯಿಂದ ಕಡ್ಡಾಯ.

10. **<u>ತೆರೆದ ಮನೆ ಕಾರ್ಯಕ್ರಮ (Open House Program in Police Station for Children's)</u>** **<u>ಆಯೋಜಿಸುವುದು ಕಡ್ಡಾಯ:</u>** ನಿಮ್ಮ ಕಾರ್ಯವ್ಯಾಪ್ತಿಯ ಸ್ಥಳೀಯ ಪೊಲೀಸ್ ಠಾಣೆಗೆ ಪತ್ರ ಬರೆದು, ಮಕ್ಕಳನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಥವಾ ಪೊಲೀಸ್ ಅಧಿಕಾರಿಗಳನ್ನೇ ನಿಮ್ಮಲ್ಲಿಗೆ ಬರಲು ಹೇಳಿ, ಪೊಲೀಸ್ ಇಲಾಖೆ/ಠಾಣೆಯವರ ಮುಖಾಂತರ **ತರೆದ ಮನೆ** ಕಾರ್ಯಕ್ರಮ ಆಯೋಜಿಸಬೇಕು. (ಮಕ್ಕಳ ಸ್ನೇಹಿ ಪೊಲೀಸ್ ಅಥವಾ ಪೊಲೀಸ್ ಠಾಣೆ ಮಾಡುವುದು. ವಾರಕ್ಕೊಮ್ಮೆ ಸಾಮನ್ಯವಾಗಿ ಗುರುವಾರ, ಆಗದಿದ್ದಲ್ಲಿ ಬೇರೆ ಯಾವುದೇ ಸೂಕ್ತ ವಾರ ನಡೆಸಬಹುದು.) **ತೆರೆದ ಮನೆ** ಕಾರ್ಯಕ್ರಮದ ವರದಿಯನ್ನು ತಿಂಗಳಿಗೊಂದು ಕಾರ್ಯಕ್ರಮದ ರಿಜಿಸ್ಟರ್‌ನಲ್ಲಿ (ನಡಾವಳಿ ಪುಸ್ತಕ) ಕಡ್ಡಾಯವಾಗಿ ನಮೂದಿಸಿ ವಿವರ ಬರೆಯತಕ್ಕದ್ದು. ಇದನ್ನು ಮಕ್ಕಳೊಂದಿಗೆ ಸಂವಾದ ಹಾಗೂ ಮಕ್ಕಳಿಂದ ಪ್ರಶ್ನೋತ್ತರ ಮಾದರಿಯಲ್ಲಿ ನಡೆಸಬೇಕು.

11. **ಮಕ್ಕಳ ಭಾಗವಹಿಸುವಿಕೆಯ** ಮುಖಾಂತರ, ಮಕ್ಕಳ ಅಭಿವೃದ್ಧಿ ಸೂಚ್ಯಂಕಗಳನ್ನು ಮೇಲೆತ್ತುವ ಆಯಾ ಗ್ರಾಮ ಪಂಚಾಯತಿಯಲ್ಲಿ ಪ್ರತಿ ವರ್ಷ ನಡೆಯುವ **ಮಕ್ಕಳ ಹಕ್ಕುಗಳ ಗ್ರಾಮ ಸಭೆ** ಹಾಗೂ **ಗ್ರಾಮ ಪಂಚಾಯತಿಯಲ್ಲಿ ವರ್ಷಕ್ಕೆ 4 ಸಲ ನಡೆಯುವ 'ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಸಮಿತಿ' ಗಳ ಸಭೆಗಳಲ್ಲಿ ನಿಮ್ಮ ಮಕ್ಕಳು ಭಾಗವಹಿಸಿ ಅವರ ಅನಿಸಿಕೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು.**


12. ತಿಂಗಳಿಗೊಂದು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿ ಮಕ್ಕಳಿಗೆ ಜ್ಞಾನಾರ್ಜನೆಯನ್ನು ಮಾಡುವುದರ ಮುಖಾಂತರ ಸಬಲೀಕರಣಗೊಳಿಸುವುದು ಹಾಗೂ ಮಕ್ಕಳಿಗೆ ಅವರ ಅನಿಸಿಕೆ, ಅಭಿಪ್ರಾಯ, ಸಲಹೆ ಮತ್ತು ದೂರುಗಳನ್ನು ನೀಡಲು ಅವಕಾಶ ನೀಡಿ ಅವರ ಭಾಗವಹಿಸುವ ಹಕ್ಕನ್ನು ಬಲಗೊಳಿಸಿ ಮಕ್ಕಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು ಹಾಗೂ ವರದಿ ಮಾಡುವ ವ್ಯವಸ್ಥೆಯನ್ನು ಬಲಪಡಿಸುವುದು. ***ಹೊರಾಂಗಣ ಚಟುವಟಿಕೆಗಳು, ಕ್ರೀಡೆ, ಪ್ರತಿಭಾ ಕಾರ್ಯಕ್ರಮ, ಪ್ರವಾಸ, ವಿಹಾರ, ವನ ಭೋಜನ, ಅರಿವು/ಜಾಗೃತಿ ಕಾರ್ಯಕ್ರಮ, ಶೈಕ್ಷಣಿಕ ಕಾರ್ಯಕ್ರಮ, ರಿಯಾಲಿಟಿ ಶೋ ಕಾರ್ಯಕ್ರಮ ಮುಂತಾದವುಗಳಿಗೆ ಆಯಾ ಕಾಲಕ್ಕೆ ಇರುವ ಸೂಕ್ತ ನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.*** ಇದಕ್ಕೆ ಪ್ರತ್ಯೇಕ ನಡಾವಳಿ ಪುಸ್ತಕ ಕಡ್ಡಾಯವಾಗಿ ಇಡಬೇಕು.

# ಮಕ್ಕಳೇ ಜಾಗೃತರಾಗಿ !!! ಎಚ್ಚೆತ್ತುಕೊಳ್ಳಿ...

**ನಿಮ್ಮ ದೇಹ ಕೇವಲ ನಿಮಗೆ ಮಾತ್ರ ಸೇರಿದ್ದು, ಸದಾಕಾಲ ಸುರಕ್ಷಿತವಾಗಿರುವ ಹಕ್ಕು ನಿಮಗಿದೆ. ನಿಮ್ಮ ದೇಹದ ಮೇಲಿನ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶಗಳು:**

## ಚಿತ್ರ ನೋಡಿ ಅರಿತುಕೊಳ್ಳಿ

**ಈ ಎಚ್ಚರಿಕೆ ಹುಡುಗರು ಮತ್ತು ಹುಡುಗಿಯರು ಇಬ್ಬರಿಗೂ ಅನ್ವಯಿಸುತ್ತದೆ, ಜಾಗೃತರಾಗಿ...**




**ಅಸುರಕ್ಷಿತ ಸ್ಪರ್ಶ(UNSAFE TOUCH)–ಯಾರೂ ಮುಟ್ಟಲೇಬಾರದ ಭಾಗ**

(ಆರೋಗ್ಯ ಸಂದರ್ಭಗಳಲ್ಲಿ ಅಮ್ಮ, ಅಪ್ಪ ಮತ್ತು ಅವರ ಸಮ್ಮುಖದಲ್ಲಿ ವೈದ್ಯರು ಮಾತ್ರ ಮುಟ್ಟಬಹುದು)

**ಸುರಕ್ಷಿತ ಸ್ಪರ್ಶ(SAFE TOUCH) –ಅಗತ್ಯ ಸಂದರ್ಭಗಳಲ್ಲಿ ಮಾತ್ರ ಮುಟ್ಟಬಹುದಾದ ಭಾಗ**

**ಅಸುರಕ್ಷಿತ ಸ್ಪರ್ಶ ಮತ್ತು ಯಾವುದೇ ಕಿರುಕುಳದ ಸಂದರ್ಭಗಳಲ್ಲಿ ಜೋರಾಗಿ ಕಿರುಚಾಡಿ, ಬೇಡ... ಇಲ್ಲಾ... ನೋ... ಎಂದು ದೂರತಳ್ಳಿ ಸುರಕ್ಷಿತ ಜಾಗಕ್ಕೆ ಬನ್ನಿ, ತಕ್ಷಣ ಅಮ್ಮ, ಅಪ್ಪನಲ್ಲಿ ಧೈರ್ಯವಾಗಿ ಹೇಳಿಕೊಳ್ಳಿ ಮತ್ತು ದೂರು ಕೊಡಿ**

---

ಪ್ರಕಟಣೆ : ಜಿಲ್ಲಾಡಳಿತ –08532–229011, ಜಿಲ್ಲಾಪಂಚಾಯತ್–228448
ಪೊಲೀಸ್ ಇಲಾಖೆ–235635/ 235001 / 235100 / 100 /1091 ಜಿಲ್ಲಾ ಮಕ್ಕಳ ರಕ್ಷಣಾ ಘಟಕ–280670,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ–226292, ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ–230610. ರಾಯಚೂರು ಜಿಲ್ಲೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಚಿತ್ರ ಕೃಪೆ : ಪ್ರಜಾವಾಣಿ, ಭೂಮಿಕಾ 26-07-2014**

unicef

# ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ):

18 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಸಂಕಷ್ಟ, ತೊಂದರೆ, ದೈಹಿಕ/ಮಾನಸಿಕ ಶಿಕ್ಷೆ, ಹಿಂಸೆ/ನಿರ್ಲಕ್ಷ್ಯ/ ತಾರತಮ್ಯ ಹಾಗೂ ಲೈಂಗಿಕ ಆಧಾರಿತ ಯಾವುದೇ ರೀತಿಯ ಶೋಷಣೆಗೆ ಒಳಗಾದರೆ ತಕ್ಷಣ

## ಚೈಲ್ಡ್ ಲೈನ್‌ಗೆ ಕರೆ ಮಾಡಿ: 1098 ಅಥವಾ 112.

ಯಾವುದೇ ಮಕ್ಕಳು ಓಡಿಹೋದರೆ, ಕಾಣೆಯಾದರೆ, ಕಳ್ಳ ಸಾಗಾಣಿಕೆಗೆ ಒಳಪಟ್ಟರೆ, ದೌರ್ಜನ್ಯಕ್ಕೊಳಗಾದರೆ, ಜೀತ ಪದ್ಧತಿಯಲ್ಲಿದ್ದರೆ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿಯಲ್ಲಿದ್ದರೆ, ಬಾಲ್ಯ ವಿವಾಹದ ಸಿದ್ಧತೆ ಅಥವಾ ಬಾಲ್ಯ ವಿವಾಹ ನಡೆಸಿದಲ್ಲಿ, ಭಿಕ್ಷಾಟನೆಯಲ್ಲಿದ್ದರೆ, ಬೀದಿಯಲ್ಲಿದ್ದರೆ, ನಿರಂತರ ಶಾಲೆಗೆ ಗೈರು ಹಾಜರಾದರೆ, ಯಾವುದೇ ವಿಪತ್ತಿಗೆ ಒಳಗಾದರೆ, ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದ್ದರೆ, ಹಾಗೂ ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದರೆ ಅವರ ಸಂರಕ್ಷಣೆಗಾಗಿ

## ತಕ್ಷಣ ಕರೆ ಮಾಡಿ; 1098. ತುರ್ತು ರಕ್ಷಣೆಗಾಗಿ 112

(ಈ ದೂರವಾಣಿ ಉಚಿತ ಹಾಗೂ ದೂರು ನೀಡಿದವರ ವಿವರ ಖಂಡಿತ ಬಹಿರಂಗವಾಗುವುದಿಲ್ಲ, ಗೌಪ್ಯತೆಯನ್ನು ಕಾಪಾಡಲಾಗುವುದು).

**ಹೆಚ್ಚಿನ ಮಾಹಿತಿ ಮತ್ತು ದೂರು ನೀಡಲು ಇವರನ್ನು ಸಂಪರ್ಕಿಸಿ:**

ಜಿಲ್ಲಾ ಮಕ್ಕಳ ರಕ್ಷಣಾ ಘಟಕ:____________________ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ:______

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ:_________________

ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ:______________________

ತಾಲೂಕು ಮಕ್ಕಳ ರಕ್ಷಣಾಧಿಕಾರಿ (ಶಿಶು ಅಭಿವೃದ್ಧಿ ಯೋಜನಾಧಿಕಾರಿ):________

ತಾಲೂಕು ಕಾನೂನು ಸೇವಾ ಪ್ರಾಧಿಕಾರ:_________________

ಸಖಿ (ಮಹಿಳಾ ಸಹಾಯವಾಣಿ (ಸಾಂತ್ವನ) ಕೇಂದ್ರ):______________________

ಮುಖ್ಯೋಪಾಧ್ಯಯರು/ಪ್ರಾಂಶುಪಾಲರು/ನಿಲಯ ಪಾಲಕರು/ ಮೇಲ್ವಿಚಾರಕರು/ಮುಖ್ಯಸ್ಥರು/ಆಡಳಿತ ಮಂಡಳಿ.

ಶಿಕ್ಷಣ ಸಂಸ್ಥೆಯ/ಇಲಾಖೆಯ ಹೆಸರು:______________________________________________

***ಸೂಚನೆ:*** 1. ಮೇಲಿನಂತೆ ಮಕ್ಕಳ ಸಹಾಯವಾಣಿ 1098 ಅಥವಾ 112 ಶಾಶ್ವತ ಫಲಕವನ್ನು ಎಲ್ಲಾ ಶಾಲೆ/ವಸತಿನಿಲಯ/ಶಿಕ್ಷಣ ಸಂಸ್ಥೆ/ಪದವಿ ಪೂರ್ವ ಕಾಲೇಜ್/ ಪದವಿ ಕಾಲೇಜ್/ಅಂಗನವಾಡಿ/ಎಲ್ಲಾ ಸರಕಾರಿ/ವಿವಿಧ ಇಲಾಖೆಗಳ ಅಥವಾ ಅರೆ ಸರಕಾರಿ ಕಛೇರಿಗಳ ಮುಂಭಾಗದಲ್ಲಿ ಎಲ್ಲಾ ಸಾರ್ವಜನಿಕರಿಗೆ/ಮಕ್ಕಳಿಗೆ ಕಾಣುವಂತೆ ಟಿನ್‌ನ ಬೋರ್ಡ್‌ನಲ್ಲಿ/ ಅಥವಾ ಕಟ್ಟಡದ ಗೋಡೆಯಲ್ಲಿ ಶಾಶ್ವತವಾಗಿ ಎಲ್.ಎಮ್.ಎಲ್ ಬಣ್ಣದಲ್ಲಿ ಬರೆಸಬೇಕು.

2. ಮೇಲಿನ ಇಲಾಖೆಗಳ ದೂರವಾಣಿ ಸಂಖ್ಯೆಗಳನ್ನು ನಿಮ್ಮ ಜಿಲ್ಲಾ ವ್ಯಾಪ್ತಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿಯಿಂದ ಪಡೆಯುವುದು.

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು - 560001**

**ಸಂಖ್ಯೆ:ADM2(OTH)/270/2025-26/805223** **ದಿನಾಂಕ:26.06.2025**

## ಸುತ್ತೋಲೆ

**ವಿಷಯ:** ಶಾಲಾ ಗೋಡೆಗಳ ಮೇಲೆ ಮಕ್ಕಳ ಸಹಾಯವಾಣಿ-1098 ಬರೆದು ವ್ಯಾಪಕ ಪ್ರಚಾರ ಮಾಡುವ ಬಗ್ಗೆ

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಇಪಿ 270 ಎಸ್ ಟಿ ಬಿ ದಿ:07.12.2022

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸುವ 24*7 ಉಚಿತ ಮಕ್ಕಳ ಸಹಾಯವಾಣಿ-1098 ಕುರಿತು ಹೆಚ್ಚಿನ ಪ್ರಚಾರ ನೀಡುವ ಕುರಿತಂತೆ ಸಾರ್ವಜನಿಕರಲ್ಲಿ ಹಾಗೂ ಮಕ್ಕಳಲ್ಲಿ ಅರಿವು ಮೂಡಿಸುವ ಮೂಲಕ ಮಕ್ಕಳ ಘನತೆಯ ಬದುಕಿನ ನಿರ್ಮಾಣ ಮಾಡಬೇಕಾಗಿರುವುದರಿಂದ ಹಾಗೂ ಮಕ್ಕಳ ರಕ್ಷಣೆ ಎಲ್ಲರ ಕರ್ತವ್ಯವಾಗಿದ್ದು ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಮಕ್ಕಳ ಸಹಾಯವಾಣಿ 1098 ಕುರಿತು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ಸೂಕ್ತ ಸ್ಥಳಗಳ ಮೇಲೆ ಗೋಡೆ ಬರಹ ಬರೆಸಲು ಹಾಗೂ ಎಲ್ಲಾ ಶಾಲೆಗಳ ವೆಬ್‌ಸೈಟ್ ನಲ್ಲಿ 1098 ಕುರಿತು ಮಾಹಿತಿ ಪ್ರಕಟಿಸಲು ಬೆಳಗಿನ ಶಾಲಾ ಅಸೆಂಬ್ಲಿ ಪ್ರಾರ್ಥನೆ ಸಮಯದಲ್ಲಿ ಮಕ್ಕಳಿಗೆ ಮಾಹಿತಿ ನೀಡಲು ಮಕ್ಕಳಿಗಾಗಿ ಸಿದ್ಧಪಡಿಸುವ ಎಲ್ಲಾ ಪುಸ್ತಕ ಹಾಗೂ ನೋಟ್ ಬುಕ್‌ಗಳ ಮೇಲೆ ಹಾಗೂ ಎಲ್ಲಾ ಪುಟಗಳ ಕೆಳ ಭಾಗದಲ್ಲಿ ಲೇಬರ್ ಮೇಲೆ ಈ ಮಾಹಿತಿ ಪ್ರಕಟಿಸಲು ಉಲ್ಲೇಖಿತ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಈ ಸಂಬಂಧ ರಾಷ್ಟ್ರವ್ಯಾಪಿಯಲ್ಲಿ ಚಾಲ್ತಿಯಲ್ಲಿರುವ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸುವ 24*7 ಉಚಿತ ಮಕ್ಕಳ ಸಹಾಯವಾಣಿ-1098 ಕುರಿತು ಹೆಚ್ಚಿನ ಪ್ರಚಾರ ಮಾಡಿ ಸಂಕಷ್ಟದಲ್ಲಿ ಸಿಲುಕಿರುವ ರಕ್ಷಣೆ ಮತ್ತು ಪೋಷಣೆಗೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತುಸೇವೆಯನ್ನು ಒದಗಿಸಲು ಈ ಸಂಖ್ಯೆಗೆ ಕರೆ ಮಾಡುವ ಮೂಲಕ ನೆರವು ಪಡೆಯಬಹುದಾಗಿದೆ. ಈ ಸಂಖ್ಯೆಯು ಉಚಿತ ದೂರವಾಣಿ ಕರೆಯಾಗಿದ್ದು ಮಕ್ಕಳಾಗಲಿ ಅಥವಾ ಸಾರ್ನಜನಿಕರಾಗಲಿ ಕರೆ ಮಾಡಿ ತುರ್ತು ನೆರವು ಅಗತ್ಯವಿರುವ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಶಾಲೆಗಳ ಗೋಡೆಗಳ ಮಕ್ಕಳ ಸಹಾಯವಾಣಿ-1098 ಕುರಿತು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ಸೂಕ್ತ ಸ್ಥಳಗಳ ಮೇಲೆ ಗೋಡೆ ಬರಹ ಬರೆಸುವುದು. ಎಲ್ಲಾ ಶಾಲೆಗಳ ವೆಬ್‌ಸೈಟ್ ನಲ್ಲಿ 1098 ಕುರಿತು ಮಾಹಿತಿ ಪ್ರಕಟಿಸುವುದು ಮತ್ತು ಬೆಳಗಿನ ಶಾಲಾ ಅಸೆಂಬ್ಲಿ ಪ್ರಾರ್ಥನೆ ಸಮಯದಲ್ಲಿ ಮಕ್ಕಳಿಗೆ 1098 ಮಾಹಿತಿ ನೀಡಲು ಮಕ್ಕಳಿಗಾಗಿ ಸಿದ್ಧಪಡಿಸುವ ಎಲ್ಲಾ ಪುಸ್ತಕ ಹಾಗೂ ನೋಟ್ ಬುಕ್‌ಗಳ ಮೇಲೆ ಹಾಗೂ ಎಲ್ಲಾ ಪುಟಗಳ ಕೆಳ ಭಾಗದಲ್ಲಿ ಲೇಬಲ್ ಮೇಲೆ 1098 ಸೀಲ್ ಹಾಕಿ ವ್ಯಾಪಕ ಪ್ರಚಾರ ಮಾಡಲು ಸರ್ಕಾರಿ/ಖಾಸಗಿ ಶಾಲಾ ಮುಖ್ಯ ಶಿಕ್ಷಕರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಲು ಎಲ್ಲಾ ಅಧಿಕಾರಿಗಳಿಗೆ ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದೆ.

ಆಯುಕ್ತರು,
ಶಾಲಾ ಶಿಕ್ಷಣ ಇಲಾಖೆ

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆರವರಿಗೆ(ಆಯಾ ಉಪನಿರ್ದೇಶಕರು ಆಡಳಿತ)ರವರ ಮೂಲಕ
3. ಶಾಲಾ ಮುಖ್ಯ ಶಿಕ್ಷಕರಿಗೆ ( ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ) ಅಗತ್ಯ ಕ್ರಮಕ್ಕಾಗಿ
4. ಕಛೇರಿ ಪ್ರತಿ

**ಕರ್ನಾಟಕ ಸರಕಾರ**

**ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಸಮಾಜ ಕಲ್ಯಾಣ ಆಯುಕ್ತಾಲಯ (ಸಮಾಜ ಕಲ್ಯಾಣ ಇಲಾಖೆ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಕ್ರೀಡಾ ವಸತಿ ನಿಲಯಗಳು) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಪ್ಯಾರಾ ಮೆಡಿಕಲ್ ಕೋಚಿಂಗ್ ಕೇಂದ್ರಗಳು) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ, ಬೆಂಗಳೂರು. ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ನಿಯಂತ್ರಣ ಪ್ರಾಧಿಕಾರ, ಅರೆ ವೈದ್ಯಕೀಯ ಮಂಡಳಿ, ಅಲ್ಪಸಂಖ್ಯಾತರ ನಿರ್ದೇಶನಾಲಯ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ), ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕಾರ್ಮಿಕ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ (ಪಾಲಿಟೆಕ್ನಿಕ್ ಶಾಲೆಗಳು) ಕರ್ನಾಟಕ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಧಾರ್ಮಿಕ ಶಿಕ್ಷಣ ಸಂಸ್ಥೆಗಳು, ಖಾಸಗಿ ಸಂಘ ಸಂಸ್ಥೆಗಳು, ಕಂಪೆನಿಗಳು ಹಾಗೂ ಮೇಲಿನ ಎಲ್ಲಾ ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ 18 ವರ್ಷದೊಳಗಿರುವ ಮಕ್ಕಳಿರುವ ಎಲ್ಲರಿಗೂ ಅನ್ವಯಿಸುವ ಹಾಗೂ ಎಲ್ಲರೂ ಕಡ್ಡಾಯಾವಾಗಿ ಅನುಷ್ಠಾನಗೊಳಿಸಬೇಕಾದ ನೀತಿ.**

ಕರ್ನಾಟಕದ ಉಚ್ಚ ನ್ಯಾಯಾಲಯವು ದಿನಾಂಕ:22/07/2020 ರಂದು ರಿಟ್‌ಅರ್ಜಿ ಸಂಖ್ಯೆ: 10208/2018 ರ ಮೂಲಕ ಹೊರಡಿಸಿದ ಆದೇಶದ ಪ್ರಕಾರ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023) ರ (ಅಧ್ಯಾಯ–5 ಅನುಬಂಧ ಸಂಖ್ಯೆ–2 ಪುಟ–103 ಕ್ರ.ಸಂ: 20) ಪ್ರಕಾರ, ಈ ನೀತಿ ಹಾಗೂ ಇದರಲ್ಲಿನ ಎಲ್ಲಾ ಆಂಶಗಳು, ಸಿಬ್ಬಂದಿ ಬದ್ಧತಾ ಪತ್ರವು ಹಾಗೂ ಮಕ್ಕಳ ಬದ್ಧತಾ ಪತ್ರವು **ರಾಜ್ಯದ ವಿವಿಧ ಇಲಾಖೆಗಳಿಂದ ಹಾಗೂ ವಿವಿಧ ಸಂಸ್ಥೆಗಳಿಂದ ನಡೆಸುತ್ತಿರುವ ಪ್ರತಿಯೊಂದು ಶಾಲೆ/ಪದವಿ ಪೂರ್ವ ಕಾಲೇಜು/ಶಿಕ್ಷಣ ರಹಿತ ವಸತಿ ನಿಲಯ/ಶಿಕ್ಷಣ ಸಹಿತ ವಸತಿ ಶಾಲೆ/ ಕ್ರೀಡಾ ವಸತಿ ನಿಲಯ ಅಥವಾ ಶಾಲೆ/ ಅಂಗನವಾಡಿಗಳು/ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆ/ತೆರೆದ ತಂಗುದಾಣಗಳು/ಯಾವುದೇ ಶಿಕ್ಷಣ ಸಂಸ್ಥೆ/ವೃತ್ತಿಪರ ಕೋರ್ಸ್/ಐಟಿಐ ಕೋಚ್ಂಗ್ ಕೇಂದ್ರ/ಪಾಲಿಟೆಕ್ನಿಕ್ ಶಾಲೆ/ವಿವಿಧ ಇಲಾಖೆಗಳ ಅಡಿಯಲ್ಲಿ ಬರುವ ಡಿಪ್ಲೋಮಾ ಕೋರ್ಸ್‌ಗಳು/ಸಂಗೀತ/ಯೋಗ/ನೃತ್ಯ ಶಾಲೆಗಳು/ ಪ್ಯಾರಾ ಮೆಡಿಕಲ್ ಕೋಚಿಂಗ್ ಕೇಂದ್ರಗಳು/ಧಾರ್ಮಿಕ ಶಿಕ್ಷಣ ಕೇಂದ್ರಗಳು ಹಾಗೂ 18 ವರ್ಷದೊಳಗಿನ ಮಕ್ಕಳಿರುವ ಔಪಚಾರಿಕ ಅಥವಾ ಅನೌಪಚಾರಿಕ ಎಲ್ಲಾ ಕೇಂದ್ರಗಳಿಗೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023) ಅನ್ವಯಿಸುತ್ತದೆ.** ***(ಅವುಗಳು ಸರಕಾರಿ, ಅನುದಾನಿತ, ಅನುದಾನರಹಿತ, ಖಾಸಗಿ/ಕೇಂದ್ರಿಯ, ಸಿ.ಬಿ.ಎಸ್.ಇ ಐ.ಸಿ.ಎಸ್.ಇ, ಸೈನಿಕ ಶಾಲೆಗಳು, ಸ್ವಯಂಸೇವಾ ಸಂಸ್ಥೆಗಳು ನಡೆಸುವ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ/ ಅರೆ ಸರ್ಕಾರಿ/ಖಾಸಗಿ ಸಂಸ್ಥೆಗಳು/ಧಾರ್ಮಿಕ ಸಂಸ್ಥೆಗಳು ನಡೆಸುತ್ತಿರುವ, ಯಾವುದೇ ವ್ಯಾಪ್ತಿಯಲ್ಲಿದ್ದರೂ ಮಕ್ಕಳಿಗೆ ಸಂಬಂಧಿಸಿದ ಎಲ್ಲವೂ ಒಳಗೊಂಡಂತೆ ಇತರೇ ಯಾರಿಗೇ ಒಳಪಟ್ಟಿದ್ದರೂ 18 ವರ್ಷದೊಳಗಿನ ಮಕ್ಕಳಿದ್ದಲ್ಲಿ ಅವರೆಲ್ಲರಿಗೂ ಅನ್ವಯಿಸುತ್ತದೆ.)***

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ–2023)

## ಕರ್ನಾಟಕದಲ್ಲಿ ಹಕ್ಕು ಆಧಾರಿತ ಮಕ್ಕಳ ರಕ್ಷಣೆ.

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು (ಸಂಕ್ಷಿಪ್ತ ವಿವರ)

**ಮಾದರಿ ನೀತಿ:** **(ಈ ಕೆಳಗೆ ರಾಜ್ಯ ಮಟ್ಟದ ಮಾದರಿಯನ್ನು ಸಂಕ್ಷಿಪ್ತಗೊಳಿಸಿ ನೀಡಲಾಗಿದೆ, ಇದೇ ರೀತಿಯಲ್ಲಿ ಆಯಾ ಶಾಲೆ/ ಕಾಲೇಜು/ವಸತಿ ನಿಲಯ/ ಶಿಕ್ಷಣ ಸಂಸ್ಥೆಗಳಿಗನುಗುಣವಾಗಿ ಬದಲಾಯಿಸಿ ನಿಮ್ಮ ಮಕ್ಕಳ ರಕ್ಷಣಾ ನೀತಿಯನ್ನು ರಚಿಸಬೇಕು)**

**ಪರಿಚಯ:**

ಕರ್ನಾಟಕ ರಾಜ್ಯವು 2016ರಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೊಳಿಸಿತ್ತು. **ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಸಂಖ್ಯೆ 10208/2018ರ, ದಿನಾಂಕ 22/07/2020ರ ನಿರ್ದೇಶನದಂತೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ದಿನಾಂಕ 14.12.2023ರಲ್ಲಿ ಪರಿಷ್ಕರಿಸಿ ಜಾರಿಗೊಳಿಸಲಾಯಿತು. 18 ವರ್ಷದ ಎಲ್ಲಾ ಮಕ್ಕಳಿಗಾಗಿ** ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016ನ್ನು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತ ರಕ್ಷಣೆ) ಕಾಯ್ದೆ – 2015 ತಿದ್ದುಪಡಿ 2021 ಹಾಗೂ ಸಂಬಂಧಿಸಿದ ಇತರೇ ಕಾನೂನುಗಳಿಗೆ ಪೂರಕವಾಗಿ ಈ ನೀತಿಯನ್ನು ಪರಿಷ್ಕರಿಸಲಾಗಿದೆ. ಈ ನೀತಿಯು ಕರ್ನಾಟಕದಲ್ಲಿ ಮಕ್ಕಳ ರಕ್ಷಣೆಯ ಅಗತ್ಯಗಳಿಗೆ ಎಲ್ಲಾ ಸಮಯದಲ್ಲೂ ಪ್ರಸ್ತುತವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಕಾಲಕಾಲಕ್ಕೆ ಪರಿಶೀಲಿಸಲಾಗುವುದು. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಶಿಕ್ಷಣ ಇಲಾಖೆ, ಪೊಲೀಸ್, ಸಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ, ಜಿಲ್ಲಾಡಳಿತಗಳು ಮತ್ತು ಸಂಬಂಧಿಸಿದ ಎಲ್ಲಾ ಇಲಾಖೆಗಳು ಮತ್ತು ಸಂಸ್ಥೆಗಳು ಅಳವಡಿಸಿಕೊಳ್ಳುವುದು ಹಾಗೂ ಸಹಕಾರ ಮತ್ತು ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸುವುದು ಅತ್ಯಗತ್ಯವಾಗಿದೆ.

**ರಾಜ್ಯದ ದೃಷ್ಟಿಕೋನ:**

ಎಲ್ಲಾ ಮಕ್ಕಳ ಎಲ್ಲಾ ಹಕ್ಕುಗಳನ್ನು ಗುರುತಿಸುವುದು ಮತ್ತು ಎತ್ತಿ ಹಿಡಿಯುವುದರಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ಕರ್ನಾಟಕ ಸರ್ಕಾರವು ನಂಬುತ್ತದೆ. ಹಕ್ಕು ಆಧಾರಿತ ಪರಿಕಲ್ಪನೆಯೊಂದಿಗೆ ಮಕ್ಕಳ ರಕ್ಷಣೆಗಾಗಿ ರಾಜ್ಯವು ಬದ್ಧವಾಗಿದೆ ಮತ್ತು ಮಕ್ಕಳ ಭಾಗವಹಿಸುವ ಹಕ್ಕನ್ನೂ ಒಳಗೊಂಡಂತೆ ಅವರ ಎಲ್ಲಾ ಹಕ್ಕುಗಳು, ಸುರಕ್ಷತೆ ಮತ್ತು ಭದ್ರತೆಯನ್ನು ಕಾನೂನಿನ ಚೌಕಟ್ಟಿನೊಳಗೆ ಇರುವುದನ್ನೇ ಉತ್ತೇಜಿಸುತ್ತದೆ.

ರಾಜ್ಯದಲ್ಲಿರುವ ಪ್ರತೀ ಮಗುವೂ ಅವನ/ಅವಳ ಲಿಂಗ, ಪೌರತ್ವ, ಧರ್ಮ, ಜಾತಿ, ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಭೌಗೋಳಿಕ ಹಿಂಸೆ, ಶೋಷಣೆ, ನಿರ್ಲಕ್ಷ್ಯಗಳಿಂದ ರಕ್ಷಣೆ ಪಡೆಯುವುದು ಮತ್ತು ಮಕ್ಕಳ ರಕ್ಷಣಾ ಸೇವೆಗಳು ವಿಶೇಷವಾಗಿ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಭದ್ರತೆ ಮತ್ತು ನ್ಯಾಯ ಮುಂತಾದ ಸಾಮಾಜಿಕ ಕ್ಷೇತ್ರಗಳು ಅವರಿಗೆ ತಲುಪುವಂತೆ/ಸಿಗುವಂತೆ ಮಾಡುವುದು.

ಕರ್ನಾಟಕ ಸರ್ಕಾರವು ಎಲ್ಲಾ ಮಕ್ಕಳು ಸಮಾನತೆ, ಘನತೆ, ಭದ್ರತೆ ಮತ್ತು ಸ್ವಾತಂತ್ರ್ಯದೊಂದಿಗೆ ಬದುಕಲು ಮತ್ತು ಬೆಳೆಯಲು ಅವರ ಹಕ್ಕುಗಳ ರಕ್ಷಣೆಗಾಗಿ ಮಕ್ಕಳ ಕೇಂದ್ರಿತ ಶಾಸನ, ನೀತಿ, ಸಂಸ್ಥೆ ಮತ್ತು ಕಾರ್ಯವಿಧಾನಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸುತ್ತದೆ. ಆ ಮೂಲಕ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶದೊಂದಿಗೆ ಜೀವಿಸುವಂತೆ, ಯಾವುದೇ ಪದ್ಧತಿ, ಸಂಪ್ರದಾಯ, ಸಾಂಸ್ಕೃತಿಕ ಅಥವಾ ಧಾರ್ಮಿಕ ಆಚರಣೆಗಳು ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುವುದನ್ನು ಮತ್ತು ನಿರ್ಬಂಧಿಸುವುದನ್ನು ತಡೆಯುತ್ತದೆ.

**ರಾಜ್ಯದ ಧ್ಯೇಯ:**

ಮಕ್ಕಳ ಕಾನೂನು ಬದ್ದ ಹಕ್ಕುಗಳ ಸಂರಕ್ಷಣೆಗೆ ರಾಜ್ಯವು ಬದ್ದವಾಗಿದೆ. ಅಪಾಯದ ಹಂಚಿನಲ್ಲಿರುವ ಮಕ್ಕಳು, ಹೆಣ್ಣು ಮಕ್ಕಳು, ಲೈಂಗಿಕ ಅಲ್ಪಸಂಖ್ಯಾತ ಮಕ್ಕಳು, ವಿಶೇಷ ಚೇತನ ಮಕ್ಕಳು, ಅಲ್ಪಸಂಖ್ಯಾತ ಮಕ್ಕಳು, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು, ವಲಸೆ ಮಕ್ಕಳು, ನೈಸರ್ಗಿಕ ವಿಕೋಪಗಳಿಗೆ ಮತ್ತು ಮಾರಕ ರೋಗಗಳಿಗೆ ಬಾಧಿತರಾದ ಮಕ್ಕಳು ಮುಂತಾದ ಮಕ್ಕಳ ಬಗ್ಗೆ ವಿಶೇಷ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಮಕ್ಕಳು ತಮ್ಮ ಅಭಿಪ್ರಾಯ/ಧ್ವನಿಯನ್ನು ವ್ಯಕ್ತಪಡಿಸಲು ಸೂಕ್ತ ವ್ಯವಸ್ಥೆಗಳನ್ನು ರಾಜ್ಯವು ಕಲ್ಪಿಸುತ್ತದೆ. ಮಕ್ಕಳು ಮತ್ತು ವಯಸ್ಕರ ನಡುವೆ ಸಂವಹನವನ್ನು ಉತ್ತೇಜಿಸಲು ಕ್ರಮ ಕೈಗೊಳ್ಳುತ್ತದೆ.

ಮಕ್ಕಳ ರಕ್ಷಣೆಗಾಗಿ ಕಾನೂನು/ನೀತಿ ಸುಧಾರಣಾ ಕ್ರಮಗಳನ್ನು ಕೈಗೆತ್ತಿಕೊಳ್ಳುತ್ತದೆ ಮತ್ತು ಕೌಶಲ್ಯ ಅಭಿವೃದ್ಧಿ, ಯೋಜನೆ, ಆಯವ್ಯಯ, ಮೇಲುಸ್ತುವಾರಿಗಳಿಗಾಗಿ ಆದುನಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸುತ್ತದೆ. ಯಾವುದೇ ಮಕ್ಕಳು ಯಾವುದೇ ರೀತಿಯ ದೈಹಿಕ, ಮಾನಸಿಕ, ದೌರ್ಜನ್ಯ, ಹಿಂಸೆ, ಶೋಷಣೆ, ನಿರ್ಲಕ್ಷ್ಯಕ್ಕೆ ಒಳಗಾಗದಂತೆ ತಡೆಗಟ್ಟಲು ಮಕ್ಕಳ ರಕ್ಷಣಾ ನೀತಿಯ ಮೂಲಕ ರಾಜ್ಯವು ಕ್ರಮ ಕೈಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ:– ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿ ಪ್ರಸ್ತುತವಿರುವ ಸವಾಲುಗಳನ್ನು ಗುರುತಿಸಿ ನಿವಾರಿಸುವುದು.

– ಸಾಂಸ್ಥಿಕ ಮತ್ತು ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸುವುದು.

– ಇಲಾಖೆಗಳು, ಸಂಸ್ಥೆಗಳು, ಮತ್ತು ಬಹುಸ್ಥರ ವ್ಯವಸ್ಥೆಗಳ ನಡುವೆ ಸಹಭಾಗಿತ್ವವನ್ನು ಹೆಚ್ಚಿಸುವುದು.

**ಪ್ರಮುಖ ಸವಾಲುಗಳು:**

(a) ಮಕ್ಕಳ ರಕ್ಷಣಾ ವ್ಯವಸ್ಥೆಗಳು, ವಿವಿಧ ಭಾಗೀದಾರರ ಪಾತ್ರ, ಅಂತರಾಷ್ಟ್ರೀಯ ಒಪ್ಪಂದಗಳು ಇವುಗಳ ಬಗ್ಗೆ ಜ್ಞಾನದ ಕೊರತೆ.

(b) ಮನೆ ಮತ್ತು ಅದರ ಸುತ್ತಮುತ್ತ ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಮಾಹಿತಿಯ ಕೊರತೆ.

(c) ಮಕ್ಕಳ ವಿವಿಧ ಅವಶ್ಯಕತೆಗಳಿಗೆ ತಕ್ಕಂತೆ ಮಕ್ಕಳ ರಕ್ಷಣೆಯನ್ನು ಮಾಡಬೇಕಾಗಿದೆ ಎನ್ನುವುದನ್ನು ಗುರುತಿಸುವಲ್ಲಿ ವಿಫಲತೆ.

(d) ಮಕ್ಕಳ ಮೇಲೆ ಒದಗುವ ಅಪಾಯಗಳನ್ನು ಎದುರಿಸಲು ತಯಾರಿಲ್ಲದೇ ಇರುವುದು.

(e) ಪರಿಸರದ ವಿಪತ್ತುಗಳಿಂದ ಏರುಪೇರುಗಳಾಗಿ ಮಕ್ಕಳ ಸುರಕ್ಷತೆ, ಪೋಷಣೆ, ನೈರ್ಮಲ್ಯ ಹಾಗೂ ಒಟ್ಟಾರೆ ಸಂಯೋಜಿತ ಕ್ರಮಗಳು.

(f) ದೊಡ್ಡ ಮಟ್ಟದ ವಲಸೆ/ಗುಳೆ, ಪ್ರಾಕೃತಿಕ/ಮನುಷ್ಯ ನಿರ್ಮಿತ ವಿಕೋಪಗಳಿಂದಾಗಿ ಮಕ್ಕಳು ಮತ್ತು ಅವರ ಪರಿಸರದ ಸ್ಥಳಾಂತರ.

(g) ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿ ಅನುಭವ ಹೊಂದಿದ, ನುರಿತ, ತರಬೇತಿ ಹೊಂದಿದ ಮಾನವ ಸಂಪನ್ಮೂಲದ ಕೊರತೆ.

(h) ಅಸಮರ್ಪಕ ಸಂಪನ್ಮೂಲ ಒದಗಿಸುವುದು ಮತ್ತು ವೆಚ್ಚಗಳು.

(i) ಮಕ್ಕಳ ರಕ್ಷಣೆಗಾಗಿರುವ ಕಾನೂನುಗಳ ಅಸಮರ್ಪಕ ಮೇಲ್ವಿಚಾರಣೆ.

(j) ಮಗುಸ್ನೇಹಿ ಕಾನೂನು ವ್ಯವಸ್ಥೆಗಳ ಕೊರತೆ.

(k) ಅಂತರ್ಜಾಲ ಮತ್ತು ಡಿಜಿಟಲ್ ವ್ಯವಸ್ಥೆಗಳು ಅನಿಯಂತ್ರಿತ ಮತ್ತು ಹೆಚ್ಚಿನ ಬಳಕೆ ಮಕ್ಕಳ ಮೇಲಿನ ದೌರ್ಜನ್ಯವನ್ನು ಹೆಚ್ಚಿಸಿರುವುದು.

ರಾಜ್ಯವು ಈ ಸವಾಲುಗಳನ್ನು ಅಂತರ್ ಇಲಾಖೆಗಳ ಸಹಭಾಗಿತ್ವ ಮತ್ತು ಅಂತರ್ ಸಂಸ್ಥೆಗಳ ಜಾಲ ವ್ಯವಸ್ಥೆಗಳನ್ನು ಬಲಪಡಿಸುವ ಮೂಲಕ ನಿವಾರಿಸುತ್ತದೆ.

**ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಮೂಲ ತತ್ವಗಳು:**

1. ಪ್ರತೀ ಮಗುವೂ ಸಾರ್ವತ್ರಿಕ, ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಮಾನವ ಹಕ್ಕುಗಳನ್ನು ಹೊಂದಿದೆ.
2. ಘನತೆ ಮತ್ತು ಸ್ವಾತಂತ್ರ್ಯದ ತತ್ವ.
3. ಮಕ್ಕಳ ಹಕ್ಕುಗಳು ಪರಸ್ಪರ ಅವಲಂಬಿತ ಮತ್ತು ಸಂಬಂಧವನ್ನು ಹೊಂದಿದೆ.
4. ಪ್ರತೀ ಮಗುವಿಗೂ ಬದುಕುವ, ರಕ್ಷಣೆಯ, ಅಭಿವೃದ್ಧಿ ಹೊಂದುವ, ಮತ್ತು ಭಾಗವಹಿಸುವ ಹಕ್ಕನ್ನು ಹೊಂದಿದೆ.
5. ಈ ಹಕ್ಕುಗಳು ಭೌತಿಕ ಅಸ್ತಿತ್ವವನ್ನು ಮೀರಿ ಜಾರಿಯಾಗಬೇಕು.
6. ಮಗುವಿನ ಮಾನಸಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ಒಟ್ಟಾರೆ ನಿಭಾಯಿಸಬೇಕು.
7. ಮಕ್ಕಳೊಂದಿಗಿನ ಚಟುವಟಿಕೆಗಳು ಮತ್ತು ಅವರ ಗುರುತಿಗೆ ಸಂಬಂಧಿಸಿದ ಮಾಹಿತಿಯ ಗೌಪ್ಯತೆಯನ್ನು ಕಾಪಾಡಬೇಕು.
8. ಎಲ್ಲಾ ಮಕ್ಕಳಿಗೂ ಸಮಾನ ಹಕ್ಕುಗಳಿವೆ, ಯಾವುದೇ ತಾರತಮ್ಯ ಮಾಡುವಂತಿಲ್ಲ.
9. ಮಗುವಿನ ಉತ್ತಮ ಹಿತಾಸಕ್ತಿಯ ತತ್ವ.
10. ಮಗುವಿನ ಪೋಷಣೆಯ ಪ್ರಥಮ ಜವಾಬ್ದಾರಿ ಪೋಷಕರದ್ದೇ ಆಗಿರುತ್ತದೆ.
11. ಕುಟುಂಬ/ಕುಟುಂಬದಂತಹ ವಾತಾವರಣದಲ್ಲಿ ಮಗು ಬೆಳೆಯುವ ತತ್ವ.
12. ಮುಗ್ಧತೆಯ ತತ್ವ.
13. ಹೊಸತನದೊಂದಿಗೆ ಪ್ರಾರಂಬಿಸುವ ತತ್ವ.
14. ಸಾಂಸ್ಥೀಕರಣವು ಮಗುವಿಗೆ ಕೊನೆಯ ಆಸರೆಯ ತತ್ವ
15. ಹಕ್ಕುಗಳನ್ನು ನಿರಾಕರಿಸುವಂತಿಲ್ಲ
16. ಸುರಕ್ಷತೆ ಮತ್ತು ರಕ್ಷಣೆಗೆ ಪ್ರಥಮ ಆಧ್ಯತೆ
17. ಮಕ್ಕಳ ಭಾಗವಹಿಸುವಿಕೆಯ ತತ್ವ
18. ನೈಸರ್ಗಿಕ ನ್ಯಾಯದ ತತ್ವ
19. ಹಾನಿಕಾರಕ ಪದಗಳನ್ನು ಬಳಸುವಂತಿಲ್ಲ
20. ಎಲ್ಲಾ ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆಯ ತತ್ವ

**ಪ್ರಮುಖ ಉದ್ದೇಶಗಳು:**

**1.** ಮಗು ಕೇಂದ್ರಿತವಾಗಿ ಪರಿಣಾಮಕಾರಿ ಮಕ್ಕಳ ರಕ್ಷಣಾ ನೀತಿ/ವ್ಯವಸ್ಥೆಗಳನ್ನು ನಿರ್ಮಿಸುವುದು.
**2.** ಪರಿಣಾಮಕಾರಿ ಮತ್ತು ಮಕ್ಕಳ ಸ್ನೇಹಿ ಪೋಷಣೆ ಮತ್ತು ರಕ್ಷಣೆಯನ್ನು ಒದಗಿಸಲು ಸಂಸ್ಥೆಗಳ ಕಾನೂನು ಜಾರಿ ಮತ್ತು ರಕ್ಷಣೆ ನೀಡುವವರ ಸಾಮರ್ಥ್ಯವನ್ನು ಬಲಪಡಿಸುವುದು.
**3.** ಅಂತರ್ ಇಲಾಖೆ, ಸಂಸ್ಥೆಗಳು ಮತ್ತು ವ್ಯವಸ್ಥೆಗಳ ಸಹಭಾಗಿತ್ವ ಮತ್ತು ಪಾರದರ್ಶಕತೆಯನ್ನು ಉತ್ತೇಜಿಸುವುದು.
**4.** ಅಗತ್ಯ ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಅದರ ಸದ್ಬಳಕೆಯನ್ನು ಉತ್ತೇಜಿಸುವುದು.
**5.** ನೀತಿಯ ಅನುಷ್ಠಾನಕ್ಕಾಗಿ ಸೂಕ್ತ ತಂತ್ರಜ್ಞಾನದ ಬಳಕೆಯನ್ನು ಮಾಡುವುದು.

ಮಕ್ಕಳ ಮೇಲೆ ಯಾವುದೇ ರೀತಿಯ ಹಿಂಸೆ/ಶೋಷಣೆ/ನಿರ್ಲಕ್ಷ್ಯ/ತಾರತಮ್ಯವು ನಡೆಯದಂತೆ ತಡೆಗಟ್ಟುವ ಕ್ರಮವನ್ನು ಕೈಗೊಳ್ಳುವುದು ಸರ್ಕಾರದ ಪ್ರಥಮ ಕರ್ತವ್ಯ. ಎಲ್ಲಾ ಮಕ್ಕಳ ಸೂಕ್ತ ಸುರಕ್ಷತೆಯ ಬೇಲಿ ನಿರ್ಮಿಸುವುದನ್ನು ಉತ್ತೇಜಿಸುವುದು.

**ಮಕ್ಕಳ ರಕ್ಷಣಾ ನೀತಿಯ ವ್ಯಾಪ್ತಿ:**

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯು 18 ವರ್ಷದೊಳಗಿನ ಮಕ್ಕಳೊಂದಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಕೆಲಸ ಮಾಡುವ ಸರ್ಕಾರಿ, ಅರೆಸರ್ಕಾರಿ ಇಲಾಖೆ, ಅಧಿಕಾರಿ, ಸಿಬ್ಬಂದಿ ವ್ಯಕ್ತಿ, ಸಂಸ್ಥೆ, ಕಾನೂನು ಬದ್ಧ ವ್ಯವಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಇತರೇ ಎಲ್ಲರಿಗೂ ಅನ್ವಯಿಸುತ್ತದೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯು ಸರ್ಕಾರದ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವವನ್ನು ಒಳಗೊಂಡಿದ್ದು, ಇದರನ್ವಯ ಎಲ್ಲಾ ಮಕ್ಕಳ ಅಂದರೆ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆ/ಶೈಕ್ಷಣಿಕ ಕೇಂದ್ರದಲ್ಲಿರುವ ಅಥವಾ ಯಾವುದೇ ಸ್ಥಿತಿಯಲ್ಲಿರುವ ಮಕ್ಕಳ ಸುರಕ್ಷತೆ ಮತ್ತ ರಕ್ಷಣೆಯ ಜವಾಬ್ದಾರಿಯು ಸರ್ಕಾರದ್ದಾಗಿದೆ.

**ಮಕ್ಕಳ ರಕ್ಷಣೆಗಾಗಿ ನೀತಿಯ ಚೌಕಟ್ಟು:**

- ಕುಟುಂಬದಲ್ಲಿರುವ ಮಗುವಿನ ಪೋಷಣಾ ಮತ್ತು ರಕ್ಷಣಾ ಅಂಶಗಳು.
- ಶೈಕ್ಷಣಿಕ ಸಂಸ್ಥೆಯಲ್ಲಿರುವ ಮಕ್ಕಳ ಪೋಷಣೆ ಮತ್ತು ರಕ್ಷಣಾ ಅಂಶಗಳು: 1. ಎಲ್ಲಾ ಮಕ್ಕಳಿಗೂ ಗುಣಮಟ್ಟದ, ಉಚಿತ, ಸಮಾನ ಶಿಕ್ಷಣ ಒದಗಿಸುವುದರ ಕುರಿತಾದ ಕ್ರಮಗಳು. 2. ತಾರತಮ್ಯ, ಹಿಂಸೆ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯ ಕ್ರಮಗಳು
- ಸಮುದಾಯ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳ ಪೋಷಣೆ ಮತ್ತು ರಕ್ಷಣಾ ಅಂಶಗಳು.
- ಮಕ್ಕಳಿಗೆ ನ್ಯಾಯ ವ್ಯವಸ್ಥೆಯನ್ನು ಬಲಪಡಿಸುವುದು. ಮಕ್ಕಳು ಮತ್ತು ಮಾಧ್ಯಮ
- ರಕ್ಷಿಸಲ್ಪಟ್ಟ ಮಕ್ಕಳಿಗೆ ಪುನರ್ವಸತಿ ಮತ್ತು ಸಾಮಾಜಿಕ ಪುನರ್ಮಿಲನ
- ವಿಕೋಪಗಳಿಗೆ ಮತ್ತು ಸಂಘರ್ಷಕ್ಕೆ ಸಿಲುಕಿರುವ ಮಕ್ಕಳು.
- ವಿಶೇಷ ಚೇತನ ಮಕ್ಕಳು ಮತ್ತು ಮಾರಣಾಂತಿಕ ರೋಗಗಳಿಗೆ ಒಳಗಾಗಿರುವ ಮಕ್ಕಳು
- ಮನೆ ಕಳೆದುಕೊಂಡ/ಇಲ್ಲದ ಮಕ್ಕಳು.
- ಮಕ್ಕಳ ಲಿಂಗಸ್ವಾಮ್ಯ ಹಕ್ಕುಗಳು.
- ಬಾಲ್ಯವಿವಾಹಕ್ಕೆ ಒಳಗಾದ/ಒಳಗಾಗಬಹುದಾದ ಮಕ್ಕಳು
- ಸಾರ್ವಜನಿಕ ನೀತಿಗಳಲ್ಲಿ ಮಕ್ಕಳು ಮತ್ತು ಮಕ್ಕಳ ರಕ್ಷಣೆ ಮತ್ತು ತಂತ್ರಜ್ಞಾನ.

**ಅನುಸರಣೆ: ಆಡಳಿತದಲ್ಲಿ ಮಗು ಸ್ನೇಹಿ ಪ್ರಕ್ರಿಯೆ ಮಾತ್ರ ಮಕ್ಕಳ ರಕ್ಷಣೆಯ ಕಾರ್ಯತಂತ್ರವಾಗಬೇಕು.**

- **ಉತ್ತರದಾಯಿತ್ವ: ನೀತಿಯ ಅನುಷ್ಠಾನವನ್ನು *ಅನುಸರಿಸದಿದ್ದರೆ, ನಿರ್ಲಕ್ಷಿಸಿದರೆ ಕ್ರಮಗಳು: ಮುಖ್ಯವಾಗಿ ದಂಡದೊಂದಿಗೆ ಶಾಲಾ/ವಸತಿನಿಲಯ/ಶಿಕ್ಷಣ ಸಂಸ್ಥೆಯ/ಕೇಂದ್ರದ ಅನುಮತಿಯನ್ನು ರದ್ದುಪಡಿಸುವುದು ಮತ್ತು ಕಾನೂನು ಕ್ರಮಗಳನ್ನು ಜಾರಿಗೊಳಿಸುವುದು.***
- ***ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ರಚನೆಯಾದ ಶಿಕ್ಷಣ ಸಂಸ್ಥೆಗಳಿಗಾಗಿ ರೂಪಿಸಲಾದ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳ ಅನುಷ್ಠಾನವನ್ನು 6 ತಿಂಗಳಿಂದ 1 ವರ್ಷದೊಳಗೆ ನೀತಿಯನ್ನು ಅನುಷ್ಠಾನಗೊಳಿಸಬೇಕು. ವಿಫಲರಾದರೆ ಅಂತಹ ಶಿಕ್ಷಣ ಸಂಸ್ಥೆಗಳ ಅನುಮತಿಯನ್ನು ರದ್ದುಪಡಿಸಬಹುದಾಗಿದೆ / ಕಾನೂನು ಕ್ರಮಗಳನ್ನು ಜಾರಿಗೊಳಿಸುವುದು.***

---

***ಸೂಚನೆ: ಹೆಚ್ಚಿನ ವಿವರ, ಸ್ಪಷ್ಟತೆ ಹಾಗೂ ಮಾಹಿತಿಗಾಗಿ 2016 ರ ಮೂಲ ನೀತಿಯ ಭಾಗ 1ರ ಪರ್ಯಾಯವಾಗಿ ಪರಿಷ್ಕೃತ ನೀತಿ 2023 ರ ಪೂರ್ಣ ದಾಖಲೆ (38 ಪುಟ ಇದೆ) ಹಾಗೂ ಅನುಷ್ಠಾನಕ್ಕಾಗಿ, ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನವನ್ನು 2016 ರ ಮೂಲ ದಾಖಲೆ ಪುಟ 17 ರಿಂದ 168 ರ ತನಕ ಓದಿ ಅರ್ಥೈಸಿಕೊಂಡು ಕಾರ್ಯರೂಪಕ್ಕೆ ತರುವುದು.***

***ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಪರಿಷ್ಕರಣೆ 2023) ರ ಪ್ರಕಾರ ಆಯಾ ಸಂಸ್ಥೆಯ ಪರಿಚಯ, ನೀತಿಯ ದೃಷ್ಟಿಕೋನ, ನೀತಿಯ ಧ್ಯೇಯ, ಪ್ರಮುಖ ಸವಾಲುಗಳು, ಮಕ್ಕಳ ರಕ್ಷಣಾ ನೀತಿಯ ತತ್ವಗಳು, ಪ್ರಮುಖ ಉದ್ದೇಶಗಳು ಮತ್ತು ವ್ಯಾಖ್ಯಾನ, ಬದ್ಧತೆಯ ವ್ಯಾಖ್ಯಾನ, ಮಕ್ಕಳ ಹಕ್ಕುಗಳ ಹಾಗೂ ಸುರಕ್ಷತೆಯ ವ್ಯಾಖ್ಯಾನ ಹಾಗೂ ಅವುಗಳ ಉಲ್ಲಂಘನೆಯ ಗಮನಿಸುವಿಕೆಯ ಪಟ್ಟಿ, ಮಕ್ಕಳ ರಕ್ಷಣಾ ನೀತಿಯ ವ್ಯಾಪ್ತಿ, ಮಕ್ಕಳ ರಕ್ಷಣೆಗಾಗಿ ನೀತಿಯ ಚೌಕಟ್ಟು, ಮೇಲುಸ್ತುವಾರಿ ಮತ್ತು ಮೌಲ್ಯ ಮಾಪನ, ಸಂಪನ್ಮೂಲ ಒದಗಿಸುವುದು ಮತ್ತು ಬಳಕೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆ, ನೀತಿಯ ಪರಾಮರ್ಶೆ ಮತ್ತು ಅನುಸರಣೆಯ ಅಂಶಗಳನ್ನು ಒಳಗೊಂಡ ನೀತಿಯನ್ನು ರಚಿಸಿ, ಕಡತ ಮೂಲಕ ಆಯಾ ತಾಲ್ಲೂಕಿನ ಅಥವಾ ಆಯಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಮುಖಾಂತರ ಅನುಮೋದನೆ ಪಡೆದು ಅನುಷ್ಠಾನಕ್ಕೆ ತರಬೇಕು.***

ನಂತರ ಅವರವರ ನೀತಿಯನ್ವಯ ಈ ಕೆಳಗಿನ ಸದಸ್ಯರನ್ನೊಳಗೊಂಡ **ಮಕ್ಕಳ ರಕ್ಷಣಾ ಸಮಿತಿ–ಸಿಪಿಸಿ (CPC-Child Protection Committee)** ಯನ್ನು ರಚಿಸಿ ಅನುಷ್ಠಾನಕ್ಕೆ ತರಬೇಕು. ಈ ಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ (ವರ್ಷಕ್ಕೆ 4 ಸಲ) ಎಲ್ಲಾ ರೀತಿಯಲ್ಲಿ ಮಕ್ಕಳ ಮೂಲಭೂತ ಶಿಕ್ಷಣ, ಮೂಲಭೂತ ಸೌಲಭ್ಯ/ಸೌಕರ್ಯ, ಸುರಕ್ಷತೆ ಮತ್ತು ಸುಭ್ರದತೆಯ ಕುರಿತು ಕಾರ್ಯಸೂಚಿ ಇಟ್ಟು ಚರ್ಚಿಸಿ ಸೂಕ್ತ ಕ್ರಮ ಕೈಗೊಂಡು ನಡಾವಳಿ ನಡೆಸಿ/ಕಡತ ನಿರ್ವಹಿಸಬೇಕು.

**ಮಕ್ಕಳ ರಕ್ಷಣಾ ಸಮಿತಿ ಸದಸ್ಯರುಗಳ ವಿವರ (CPC- Child Protection Committee Members)**

| ಕ್ರ.ಸ | ಸದಸ್ಯರುಗಳು | ಸಂಖ್ಯೆ | ಪದನಾಮ |
|---|---|---|---|
| 1. | ಮುಖ್ಯಸ್ಥರು/ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರು/ ವಸತಿ ನಿಲಯ ಮೇಲ್ವಿಚಾರಕರು/ವ್ಯವಸ್ಥಾಪಕರು/ನಿಲಯ ಪಾಲಕರು ಇತರೆ | 1 | ಸಮಿತಿ ಅಧ್ಯಕ್ಷರು |
| 2. | ಒಬ್ಬರು ಮಹಿಳಾ ಶಿಕ್ಷಕಿ | 1 | ಸದಸ್ಯರು |
| 3. | 3 ಪೋಷಕರು (ಒಬ್ಬರು ಮಹಿಳೆ ಕಡ್ಡಾಯ) | 3 | ಸದಸ್ಯರು |
| 4. | ಎಸ್.ಡಿ.ಎಮ್.ಸಿ/ಆಡಳಿತ ಮಂಡಳಿಯ/ **PTS or CDC or SBC** ನ ಅಧ್ಯಕ್ಷರು ಅಥವಾ ಯಾವುದೇ ಒಬ್ಬರು ಸದಸ್ಯರು | 1 | ಸದಸ್ಯರು |
| 5. | ಹಿರಿಯ ತರಗತಿಯ 2 ಮಕ್ಕಳು. (1 ವಿದ್ಯಾರ್ಥಿ 1 ವಿದ್ಯಾರ್ಥಿನಿ. ಒಂದೇ ಗುಂಪಿನ ಮಕ್ಕಳಿದ್ದಲ್ಲಿ 2 ಮಕ್ಕಳು ಕಡ್ಡಾಯ) | 2 | ಸದಸ್ಯರು |
| 6. | ಭದ್ರತಾ ಸಿಬ್ಬಂದಿ/ಕಾವಲುಗಾರ/ಗೇಟ್ ಕೀಪರ್ ಇತರೆ | 1 | ಸದಸ್ಯರು |
| 7. | ನಿಮ್ಮ ಕೇತ್ರ ವ್ಯಾಪ್ತಿಯ ಮಕ್ಕಳ ಹಕ್ಕು ಹಾಗೂ ಸಂರಕ್ಷಣೆಯ ಒಬ್ಬರು ತಜ್ಞರು (ಮಹಿಳೆಗೆ ಆದ್ಯತೆ) | 1 | |
| 8. | ಒಬ್ಬರು ಶಿಕ್ಷಕರು/ಉಪನ್ಯಾಸಕರು/ಹಿರಿಯ ಅನುಭವಿ ಸಿಬ್ಬಂದಿ (ಇವರೇ ಸಮಿತಿಯ ಎಲ್ಲಾ ಕಡತ ನಿರ್ವಹಣೆ/ಸಭೆ ವ್ಯವಸ್ಥೆ/ನಡಾವಳಿಗಳನ್ನು ನಿರ್ವಹಿಸಬೇಕು) **Child Protection Officer: CPO** | 1 | ಮಕ್ಕಳ ರಕ್ಷಣಾಧಿಕಾರಿ **CPO** |
| *ಮಕ್ಕಳು ಹಾಗೂ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಸಮಿತಿ ಸಭೆಯಲ್ಲಿ ಸೂಕ್ತ ನಡಾವಳಿ ಮಾಡಿ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳಬಹುದು. (ಅದು ಬೆಸ ಸಂಖ್ಯೆಯಲ್ಲಿರುವಂತೆ ನೋಡುವುದು.* | | | |
| ಈ ನೀತಿಯನ್ವಯ ಸಮಸ್ತ ಸಿಬ್ಬಂದಿಯವರಿಂದ ಬದ್ಧತಾ ಸ್ವೀಕಾರ ಪತ್ರಕ್ಕೆ ಪ್ರತ್ಯೇಕ, ಪ್ರತ್ಯೇಕವಾಗಿ ಸಹಿ ಪಡೆದು ಕಡತವನ್ನು ಮುಖ್ಯಸ್ಥರು ನಿರ್ವಹಿಸಬೇಕು. ಪ್ರತಿ 2 ವರ್ಷಕ್ಕೊಮ್ಮೆ ಹೊಸ ಬದ್ಧಾತಾ ಪ್ರತಕ್ಕೆ ಸಹಿ ಪಡೆಯಬೇಕು. | | | |

# ಮಕ್ಕಳ ಬದ್ಧತಾ ಸ್ವೀಕಾರ ಪತ್ರ

**ಶಾಲೆ/ಕಾಲೇಜು/ವಸತಿ ನಿಲಯ/ಶಿಕ್ಷಣ ಸಂಸ್ಥೆಯ ಹೆಸರು/ವಿಳಾಸ:________________________________**

**1**. ಭಾರತದ ಸಂವಿಧಾನ ಕಲಂ 12 ರಿಂದ 35 ರವರೆಗೆ ಹೇಳಿರುವ ಮೂಲಭೂತ ಹಕ್ಕುಗಳ ಬಗ್ಗೆ ನಾನು ಅರಿತುಕೊಂಡಿದ್ದೇನೆ/ಕೊಳ್ಳುತ್ತೇನೆ. ಅವುಗಳು ನನಗೂ ಸಂಬಂಧಿಸಿದ್ದು ಹಾಗೂ ನಾನು ಅವುಗಳನ್ನು ಅನುಭವಿಸಲೇಬೇಕು, ಅದಕ್ಕೆ ಸಿದ್ಧನಿದ್ದೇನೆ. ***ಇಂದಿನ ಮಕ್ಕಳು ಇಂದಿನ ಪ್ರಜೆಗಳು*** (ಸಂವಿಧಾನ ಕಲಂ: 5) ಎಂಬ ಸತ್ಯದ ಅರಿವು ನನಗಿದೆ.

2. ಭಾರತದ ಸಂವಿಧಾನ ಕಲಂ 36 ರಿಂದ 51 ರವರೆಗೆ ಹೇಳಿರುವ ರಾಜ್ಯ ನಿರ್ದೇಶಾತ್ಮಕ ತತ್ವಗಳ ಬಗ್ಗೆ ನಾನು ಅರಿತುಕೊಂಡಿದ್ದೇನೆ/ಕೊಳ್ಳುತ್ತೇನೆ ಮತ್ತು ಕಲಂ 51 ಎ ರಿಂದ 51 ಕೆ ರವರೆಗೆ ಹೇಳಿದ ಮೂಲಭೂತ ಕರ್ತವ್ಯಗಳ ಬಗ್ಗೆ ನಾನು ಅರಿತುಕೊಂಡಿದ್ದೇನೆ/ಕೊಳ್ಳುತ್ತೇನೆ ಹಾಗೂ ನಾನು ಅವುಗಳನ್ನು ಸದಾ ಪಾಲಿಸುತ್ತೇನೆ.

**3. ನವೆಂಬರ್ 20, 1989** ರಂದು ವಿಶ್ವಸಂಸ್ಥೆಯು ಜಾರಿಗೆ ತಂದಿರುವ **ವಿಶ್ವಸಂಸ್ಥೆಯ ಮಕ್ಕಳ ಒಡಂಬಡಿಕೆಗೆ ಭಾರತ ಡಿಸೆಂಬರ್ 11, 1992 ರಂದು ಸಹಿ ಮಾಡಿದಂತೆ,** ಒಡಂಬಡಿಕೆಯಲ್ಲಿ ಹೇಳಿರುವ ಎಲ್ಲಾ ಮಕ್ಕಳ ಹಕ್ಕುಗಳನ್ನು, ಪ್ರಮುಖವಾಗಿ, ನಾಲ್ಕು ಮಕ್ಕಳ ಹಕ್ಕುಗಳ ಗುಂಪುಗಳಾದ ***ಬದುಕುವ ಹಕ್ಕುಗಳು, ರಕ್ಷಣೆಯ ಹಕ್ಕುಗಳು, ಅಭಿವೃದ್ಧಿ ಹೊಂದುವ ಹಕ್ಕುಗಳು ಹಾಗೂ ಭಾಗವಹಿಸುವ ಹಕ್ಕುಗಳನ್ನು*** ನಾನು, ಅರಿತುಕೊಂಡು ಅನುಭವಿಸುತ್ತೇನೆ ಅದರಂತೆ ಪಾಲಿಸುತ್ತೇನೆ.

4. ಶಿಕ್ಷಣ, ನಮ್ಮ ಬದುಕಿನ ಜೀವನದುದ್ದಕ್ಕೂ ಕಲಿಯುವ ಒಂದು ನಿರಂತರ ಪ್ರಕ್ರಿಯೆ. ಶಿಕ್ಷಣದಿಂದಾಗಿ ನನ್ನ, ನನ್ನ ಕುಟುಂಬ ಹಾಗೂ ನಾನು ಓದಿದ ಶಾಲೆಯ ಅಥವಾ ಶಿಕ್ಷಣ ಸಂಸ್ಥೆಯ ಘನತೆ ಎತ್ತರಕ್ಕೆ ಹೋಗುತ್ತೆ ಹಾಗೂ ಶಿಕ್ಷಣದಿಂದ ನನ್ನ ಹಾಗೂ ನನ್ನ ಕುಟುಂಬ ಅಭಿವೃದ್ಧಿಯಾಗುತ್ತದೆ ಎಂಬುದನ್ನು ಅರಿತುಕೊಂಡಿದ್ದೇನೆ.

5. ಶಿಕ್ಷಣ ಇರುವುದು ಕೇವಲ ಉದ್ಯೋಗ ಪಡೆದು ದುಡ್ಡು ಸಂಪಾದನೆ ಮಾಡೊದ್ದಕ್ಕೆ ಅಲ್ಲಾ!!. ***ಶಿಕ್ಷಣ ಸಮಾಜದಲ್ಲಿ ಅನ್ಯಾಯ, ಶೋಷಣೆ, ಹಿಂಸೆ, ದೌರ್ಜನ್ಯ, ಅಸಮಾನತೆ, ತಾರತಮ್ಯ, ನಿರ್ಲಕ್ಷ್ಯ, ಮೋಸ ಹಾಗೂ ವಂಚನೆಗಳಿಗೆ ಬಲಿಯಾಗದೆ, ಸಮಾಜದಲ್ಲಿ ಶ್ರೇಷ್ಠ ನಾಗರಿಕರಾಗಿ, ಯಾವುದೇ ವೃತ್ತಿಯನ್ನು ಘನತೆಯಿಂದ ಮಾಡುತ್ತಾ, ಸಮಾಜಕ್ಕೆ ಕೊಡುಗೆ ನೀಡುತ್ತಾ, ಸ್ವಾತಂತ್ರ್ಯ, ಸಮಾನತೆಯೊಂದಿಗೆ, ಘನತೆಯಿಂದ, ಸ್ವಾಭಿಮಾನದಿಂದ ಕುಟುಂಬದೊಂದಿಗೆ ಬದುಕಿ, ಅಭಿವೃದ್ಧಿ ಹೊಂದುವುದಕ್ಕೆ*** ಎಂಬುದು ನನಗೆ ಗೊತ್ತಿದೆ.

6. ನಾನು ಎಲ್ಲಾ ರೀತಿಯ ಶೋಷಣೆ, ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳ ವಂಚನೆ, ಮಾದಕ ವ್ಯಸನಗಳಿಂದ ಮುಕ್ತವಾಗಿರುತ್ತೇನೆ. ನಾನು ಸೈಬರ್ ಮೋಸಗಳಿಗೆ ಮತ್ತು ಎಲ್ಲಾ ರೀತಿಯ ಜಾಲತಾಣ ಹಾಗೂ ಇತರೇ ಬೆದರಿಸುವ ಕೃತ್ಯಗಳಿಗೆ ಬಲಿಯಾಗುವುದಿಲ್ಲ ಅವುಗಳಿಂದ ದೂರವಿದ್ದು ಸುರಕ್ಷತೆಯನ್ನು ಅರಿತು, ಅವುಗಳನ್ನು ಎದುರಿಸುವ ಜ್ಞಾನ ಹಾಗೂ ಕೌಶಲ್ಯ ಪಡೆದು, ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುತ್ತೇನೆ.

7. ನನಗೆ ಮತ್ತು ನನ್ನ ಕುಟುಂಬದಲ್ಲಿ ಯಾವುದೇ **ಬಾಲ್ಯ ವಿವಾಹದ** ಯೋಚನೆ, ಸಿದ್ಧತೆ ಅಥವಾ ಯೋಜಿಸಿದಲ್ಲಿ ನಾನು ಅದನ್ನು ವಿರೋಧಿಸುತ್ತೇನೆ. ನನ್ನ ಕುಟುಂಬದವರಿಗೆ, ಪೋಷಕರಿಗೆ, ಸಮುದಾಯಕ್ಕೆ ಬಾಲ್ಯ ವಿವಾಹದ ಪರಿಣಾಮಗಳ ಬಗ್ಗೆ ಹಾಗೂ ಬಾಲ್ಯ ವಿವಾಹ ನೀಷೇಧ ಕಾಯ್ದೆ 2006 ರ ಬಗ್ಗೆ ಅರಿವು ಮೂಡಿಸುತ್ತೇನೆ. ಯಾವುದೇ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಿಸಿದವರಿಗೆ ಅಥವಾ ಮಕ್ಕಳ ಸಹಾಯವಾಣಿ 1098 ಕ್ಕೆ ಧೈರ್ಯವಾಗಿ ದೂರು ನೀಡುತ್ತೇನೆ. ***(ಮದುವೆಗೆ, ಹೆಣ್ಣಿಗೆ 18 ವರ್ಷ ಹಾಗೂ ಗಂಡಿಗೆ 21 ವರ್ಷ ಪೂರ್ಣಗೊಂಡಿರಬೇಕು. ಬಾಲ್ಯ ವಿವಾಹ ಮಾಡಿದ ತಂದೆ–ತಾಯಿ, ಪೋಷಕರು/ಮಾಡಿಸಿದ/ಮಾಡಿದ/ಸಹಕರಿಸಿದ/ಬೆಂಬಲಿಸಿದ/ಮದುವೆ ಕಾಗದ ಮುದ್ರಿಸಿದವರು/ ಅಡುಗೆಯವರು/ಪೂಜಾರಿ/ಮಂಟಪದವರು/ವಾಲಗದವರು/ಶಾಮಿಯಾನದವರು/ಮೈಕ್ ಸೆಟ್‌ನವರು/ಫೋಟೊ–ವಿಡಿಯೋದವರು/ ಭಾಗವಹಿಸಿದವರು/ಹಾಜರಾದವರೆಲ್ಲರಿಗೂ "ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಹಾಗೂ ಕರ್ನಾಟಕ ತಿದ್ದುಪಡಿ–2016 ರ ಪ್ರಕಾರ ರೂ. 1 ಲಕ್ಷ ತನಕ ದಂಡ ಹಾಗೂ ಕನಿಷ್ಟ 1 ವರ್ಷ ದಿಂದ 2 ವರ್ಷದ ತನಕ ಜೈಲು ಶಿಕ್ಷೆ ಇದೆ.)***

**8. ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯಂತಹ** ಯಾವುದೇ ಅಭಿವೃದ್ಧಿ ಮಾರಕ ಪಿಡುಗುಗಳಿಗೆ ನಾನು ಒಳಗಾಗುವುದಿಲ್ಲ. ನನ್ನ ಕುಟುಂಬದಲ್ಲಿ ಅದಕ್ಕೆ ಅವಕಾಶ ನೀಡುವುದಿಲ್ಲ. ಒಂದುವೇಳೆ ಪ್ರಕರಣಗಳು ಕಂಡುಬಂದರೆ ಸಂಬಂಧಿಸಿದವರಿಗೆ ಅಥವಾ ಮಕ್ಕಳ ಸಹಾಯವಾಣಿ 1098 ಕ್ಕೆ ಧೈರ್ಯವಾಗಿ ದೂರು ನೀಡುತ್ತೇನೆ. ***(14 ವರ್ಷದೊಳಗಿನ ಮಕ್ಕಳನ್ನು, ಯಾವುದೇ ಕ್ಷೇತ್ರದಲ್ಲಿ ತಂದೆ/ತಾಯಿ/ಪೋಷಕರೂ ಸೇರಿದಂತೆ ಯಾರೂ ಕೂಡಾ ದುಡಿಸಿಕೊಳ್ಳುವುದು ಸಂಪೂರ್ಣ ನಿಷೇಧ. 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದು ಕೂಡಾ ಸಂಪೂರ್ಣ ನಿಷೇಧ. ಹದಿನೆಂಟು (18) ವರ್ಷದೊಳಗಿನ ಮಕ್ಕಳನ್ನು ದುಡಿಸಿದಲ್ಲಿ "ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986, ತಿದ್ದುಪಡಿ–2016" ರ ಪ್ರಕಾರ ರೂ. 50 ಸಾವಿರ ದಂಡ ಹಾಗೂ 2 ವರ್ಷ ಜೈಲು ಶಿಕ್ಷೆ ಇದೆ.)***

9. ಮಕ್ಕಳ ಮೇಲೆ ನಡೆಯುವ ಯಾವುದೇ ರೀತಿಯ ಹಿಂಸೆ, ಶೋಷಣೆ, ದೌರ್ಜನ್ಯ, ತಾರತಮ್ಯ, ನಿರ್ಲಕ್ಷ್ಯ, **ಲೈಂಗಿಕ ಶೋಷಣೆಗಳ** ಬಗ್ಗೆ ನಾನು ಜಾಗೃತನಾಗಿರುತ್ತೇನೆ ಹಾಗೂ ಅವುಗಳಿಗೆ ಬಲಿಯಾಗುವುದಿಲ್ಲ. ನನ್ನ **ಸ್ವ ರಕ್ಷಣೆಯ** ಹಿನ್ನೆಲೆಯಲ್ಲಿ **ಸುರಕ್ಷಿತ ಸ್ಪರ್ಶ ಹಾಗೂ ಅಸುರಕ್ಷಿತ ಸ್ಪರ್ಶದ** ಬಗ್ಗೆ ಅರಿತುಕೊಳ್ಳುತ್ತೇನೆ. ಎಲ್ಲಿಯಾದರೂ ಕಂಡುಬಂದರೆ ಸಂಬಂಧಿಸಿದವರಿಗೆ ಅಥವಾ ಮಕ್ಕಳ ಸಹಾಯವಾಣಿ 1098 ಕ್ಕೆ ಧೈರ್ಯವಾಗಿ ದೂರು ನೀಡುತ್ತೇನೆ. **(18 ವರ್ಷದೊಳಗಿನ ಮಕ್ಕಳ ಮೇಲೆ ಲೈಂಗಿಕ ಶೋಷಣೆ/ಅಪರಾಧ ಮಾಡಿದಲ್ಲಿ "ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012, ತಿದ್ದುಪಡಿ 2019"ರ (POCSO Act) ಪ್ರಕಾರ ಕನಿಷ್ಠ 10 ರಿಂದ 20 ವರ್ಷ ಜೈಲು ಅಥವಾ ಗಲ್ಲು ಶಿಕ್ಷೆ ಇದೆ.)**

**ತಂದೆ/ತಾಯಿ/ಪೋಷಕರ ಸಹಿ:**______________________ **ಮಗುವಿನ ಸಹಿ:**______________

ತಂದೆ/ತಾಯಿ/ಪೋಷಕರ ಹೆಸರು:____________________ ಹೆಸರು:____________________

ದಿನಾಂಕ:______________ **ತರಗತಿ:**__________

**ತಂದೆ/ತಾಯಿ/ಪೋಷಕರ** ವಿಳಾಸ ಹಾಗೂ ದೂರವಾಣಿ ಸಂಖ್ಯೆ:________________________________

________________________________________________________________

––:ಸೂಚನೆಗಳು:––

**1. ಕರ್ನಾಟಕ ರಾಜ್ಯ ಸರಕಾರದ ವಿವಿಧ ಇಲಾಖೆಗಳಿಂದ ಹಾಗೂ ವಿವಿಧ ಸಂಸ್ಥೆಗಳಿಂದ ನಡೆಸುತ್ತಿರುವ ಪ್ರತಿಯೊಂದು ಶಾಲೆ/ಪದವಿ ಪೂರ್ವ ಕಾಲೇಜು/ಶಿಕ್ಷಣ ರಹಿತ ವಸತಿ ನಿಲಯ/ಶಿಕ್ಷಣ ಸಹಿತ ವಸತಿ ಶಾಲೆ/ ಕ್ರೀಡಾ ವಸತಿ ನಿಲಯ ಅಥವಾ ಶಾಲೆ/ ಅಂಗನವಾಡಿಗಳು/ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆ/ತೆರೆದ ತಂಗುದಾಣಗಳು/ಯಾವುದೇ ಶಿಕ್ಷಣ ಸಂಸ್ಥೆ/ವೃತ್ತಿಪರ ಕೋರ್ಸ್/ಕೋಚಿಂಗ್ ಕೇಂದ್ರ/___ಐಟಿಐ ಕೋರ್ಸ್‌ಗಳು/ಪಾಲಿಟೆಕ್ನಿಕ್ ಕೋರ್ಸ್/ವಿವಿಧ ಇಲಾಖೆಯಡಿಯಲ್ಲಿನ ಡಿಪ್ಲೊಮಾ ಕೋರ್ಸ್‌ಗಳು/ಸಂಗೀತ/ಯೋಗ/ನೃತ್ಯ ಶಾಲೆಗಳು/ ಪ್ಯಾರಾ ಮೆಡಿಕಲ್ ಕೋಚಿಂಗ್ ಕೇಂದ್ರಗಳು/ಧಾರ್ಮಿಕ ಶಿಕ್ಷಣ ಕೇಂದ್ರಗಳು ಹಾಗೂ 18 ವರ್ಷದೊಳಗಿನ ಮಕ್ಕಳಿರುವ ಔಪಚಾರಿಕ ಅಥವಾ ಅನೌಪಚಾರಿಕ ಎಲ್ಲಾ ಕೇಂದ್ರಗಳಿಗೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023) ಅನ್ವಯಿಸುತ್ತದೆ.**_*(ಅವುಗಳು ಸರಕಾರಿ, ಅನುದಾನಿತ, ಅನುದಾನರಹಿತ, ಖಾಸಗಿ/ಕೇಂದ್ರಿಯ, ಸಿ.ಬಿ.ಎಸ್.ಇ ಐ.ಸಿ.ಎಸ್.ಇ, ಸೈನಿಕ ಶಾಲೆಗಳು, ಸ್ವಯಂಸೇವಾ ಸಂಸ್ಥೆಗಳು ನಡೆಸುವ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ/ ಅರೆ ಸರ್ಕಾರಿ/ಖಾಸಗಿ ಸಂಸ್ಥೆಗಳು /ಧಾರ್ಮಿಕ ಸಂಸ್ಥೆಗಳು ನಡೆಸುತ್ತಿರುವ, ಯಾವುದೇ ವ್ಯಾಪ್ತಿಯಲ್ಲಿದ್ದರೂ ಮಕ್ಕಳಿಗೆ ಸಂಬಂಧಿಸಿದ ಎಲ್ಲವೂ ಒಳಗೊಂಡಂತೆ ಇತರೇ ಯಾರಿಗೇ ಒಳಪಟ್ಟಿದ್ದರೂ 18 ವರ್ಷದೊಳಗಿನ ಮಕ್ಕಳಿದ್ದಲ್ಲಿ ಅವರೆಲ್ಲರಿಗೂ ಅನ್ವಯಿಸುತ್ತದೆ.)*

*2. ಈ ಬದ್ಧತಾ ಪತ್ರವನ್ನು ನಿಮ್ಮ ಶಾಲೆ/ಶಿಕ್ಷಣ ಸಂಸ್ಥೆ/ವಸತಿ ನಿಲಯ/ಪಿ.ಯು. ಕಾಲೇಜು ಅಥವಾ ಯಾವುದೇ 18 ವರ್ಷದೊಳಗಿನ ಮಕ್ಕಳಿರುವ ಶಿಕ್ಷಣ ಕೇಂದ್ರದ ಮಕ್ಕಳಿಗೆ ಓದಿ ತಿಳಿಸಿ, ಈ ಬಗ್ಗೆ ಒಂದು ದಿನ ತರಬೇತಿ ನೀಡಿ ದ್ವಿಪ್ರತಿಯಲ್ಲಿ ನೀಡಬೇಕು. ಎರಡೂ ಪ್ರತಿಯನ್ನು ಮಕ್ಕಳು ಮನೆಗೆ ತೆಗೆದುಕೊಂಡು ಹೋಗಿ ಕುಟುಂಬದಲ್ಲಿ ಓದಿಸಿ, ಎರಡೂ ಪ್ರತಿಗೆ ತಂದೆ/ತಾಯಿ ಅಥವಾ ಪೋಷಕರಿಂದ ಸಹಿ ಮಾಡಿಸಿ, ಮಕ್ಕಳೂ ಸಹಿ ಮಾಡಿ, ಒಂದು ಪ್ರತಿಯನ್ನು ಮನೆಯಲ್ಲಿ ಜೋಪಾನವಾಗಿ ಇಡಬೇಕು, ಇನ್ನೊಂದು ಪ್ರತಿಯನ್ನು ಮರು ದಿವಸ ಶಾಲೆಯ/ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಿಗೆ ನೀಡಬೇಕು.*

*3. ಈ ಬದ್ಧತಾ ಪತ್ರವನ್ನು 6ನೇ ತರಗತಿಯಿಂದ (11 ವರ್ಷ ಮೇಲ್ಪಟ್ಟ) ದ್ವಿತೀಯ ವರ್ಷದ ಪಿ.ಯು.ಸಿ ಯ ವಿದ್ಯಾರ್ಥಿಗಳವರೆಗೆ, ಅಂದರೆ 18 ವರ್ಷದೊಳಗಿನ ಎಲ್ಲಾ ಮಕ್ಕಳಿಂದ ಆಯಾ ಸಂಸ್ಥೆಯ ಮುಖ್ಯಸ್ಥರು ಕಡ್ಡಾಯವಾಗಿ ಪಡೆದುಕೊಳ್ಳುವ ಮೂಲಕ ಮಕ್ಕಳಲ್ಲಿ ಜಾಗೃತಿ/ಅರಿವು/ ಎಚ್ಚರಿಕೆ ಮೂಡಿಸಬೇಕು. (1 ರಿಂದ 5ನೇ ತರಗತಿ ಮಕ್ಕಳಿಗೆ ಶಿಕ್ಷಕರೇ ಓದಿ ಮಕ್ಕಳಿಗೆ ಸಂಕ್ಷಿಪ್ತವಾಗಿ ಅರ್ಥೈಸಿದ ನಂತರ, ಪೋಷಕರ ಹಾಗೂ ಮಕ್ಕಳ ಸಹಿ ಪಡೆಯಲು ಕ್ರಮ ಕೈಗೊಳ್ಳುವುದು ಅಥವಾ ಪ್ರತ್ಯೇಕ ಸರಳ ಕ್ರಮ ಅನುಸರಿಸುವುದು)*

**ಅಡಕ–5**

**ಮಕ್ಕಳ ರಕ್ಷಣಾ ನೀತಿ, ಮಕ್ಕಳ ಹಕ್ಕುಗಳು, ಮಕ್ಕಳ ಸಂರಕ್ಷಣೆ, ಹಾಗೂ ಮಕ್ಕಳ ಅಭಿವೃದ್ಧಿಗಾಗಿ ನಾನು ಬರೆದು ಕೊಟ್ಟ ಬದ್ಧತಾ ಸ್ವೀಕಾರ:**

**ಶಾಲೆ/ಕಾಲೇಜು/ವಸತಿ ನಿಲಯ/ಶಿಕ್ಷಣ ಸಂಸ್ಥೆಯ ಹೆಸರು ಮತ್ತು ವಿಳಾಸ:______________**

______________________________________________

1. **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023)** ರ ಪ್ರಕಾರ ರಾಜ್ಯದ ಎಲ್ಲಾ 18 ವರ್ಷದೊಳಗಿನ ಮಕ್ಕಳಿರುವ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಹಾಗೂ ನಾನು ಸೇವೆ ಸಲ್ಲಿಸುವ/ ಕಾರ್ಯನಿರ್ವಹಿಸುವ ಸಂಸ್ಥೆಯ **ಮಕ್ಕಳ ರಕ್ಷಣಾ** ನೀತಿಯನ್ನು ನಾನು ಸಂಪೂರ್ಣವಾಗಿ ಪಾಲಿಸಿ ಅನುಸರಿಸುತ್ತೇನೆ.
2. **ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ** ಹೊರತಂದಿರುವ ಮಕ್ಕಳ ಮೇಲೆ ದೈಹಿಕ ಶಿಕ್ಷೆ (ಮನೋದೈಹಿಕ ದಂಡನೆ) ನಿಷೇಧ ಹಾಗೂ ತಡೆಗಟ್ಟುವ ಕುರಿತಾದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುತ್ತೇನೆ ಹಾಗೂ **ಮಕ್ಕಳಿಗೆ ಯಾವುದೇ ರೀತಿಯ ದೈಹಿಕ, ಮಾನಸಿಕ ಮತ್ತು ಶೋಷಣೆ, ನಿರ್ಲಕ್ಷ್ಯ, ತಾರತಮ್ಯತೆ ಆಧಾರಿತ ಯಾವುದೇ ರೀತಿಯ ಶಿಕ್ಷೆ/ದಂಡನೆ/ಪೀಡನೆ ನೀಡುವುದಿಲ್ಲ,** ನಮ್ಮಲ್ಲಿ ನಾನು ಅದಕ್ಕೆ ಅವಕಾಶ ನೀಡುವುದಿಲ್ಲ ಹಾಗೂ ಅಂತಹ ಯಾವುದೇ ಪ್ರಕರಣ ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆ ಆಗದಂತೆ ನೋಡಿಕೊಳ್ಳುತ್ತೇನೆ. ***(ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ–2009, ಕಲಂ 17(1)(2). ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 (ತಿದ್ದುಪಡಿ 2021 ರ ಕಲಂ: 75 ಮತ್ತು ಕಲಂ: 82 ಒಳಗೊಂಡಂತೆ).***
3. **ನವೆಂಬರ್ 20, 1989** ರಂದು ವಿಶ್ವಸಂಸ್ಥೆಯು ಜಾರಿಗೆ ತಂದಿರುವ **ವಿಶ್ವಸಂಸ್ಥೆಯ ಮಕ್ಕಳ ಒಡಂಬಡಿಕೆಗೆ ಭಾರತ ಡಿಸೆಂಬರ್ 11, 1992 ರಂದು ಸಹಿ ಮಾಡಿದಂತೆ** ಒಡಂಬಡಿಕೆಯಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ನಾನು, ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಎಲ್ಲಾ 18 ವರ್ಷದೊಳಗಿನ ಮಕ್ಕಳು ಅನುಭವಿಸುವಂತೆ ಖಾತ್ರಿಪಡಿಸಲು ಸರ್ವ ಪ್ರಯತ್ನ ಮಾಡುತ್ತೇನೆ.
4. ನಾನು **ಮಕ್ಕಳ ಹಕ್ಕುಗಳನ್ನು ಗೌರವಿಸುತ್ತೇನೆ** ಹಾಗೂ ಯಾವುದೇ ಕಾರಣಕ್ಕೂ ನಾನು ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ, ನನ್ನ ಮನೆ, ಕುಟುಂಬ ಹಾಗೂ ಸಮಾಜದಲ್ಲಿ ಎಲ್ಲೂ ಕೂಡಾ ಯಾವುದೇ ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ. ಮಕ್ಕಳ ಗುಣಾತ್ಮಕ ಅಂಶಗಳನ್ನು ಎತ್ತಿ ಹಿಡಿದು ಅವರ ಅಭಿವೃದ್ಧಿಗೆ ಶ್ರಮಿಸುತ್ತೇನೆ.
5. **ಮಕ್ಕಳ ಹಕ್ಕುಗಳ ಉಲ್ಲಂಘನೆ ಹಾಗೂ ಮಕ್ಕಳ ಸಂರಕ್ಷಣೆಗೆ** ಸಂಬಂದಿಸಿದ ಯಾವುದೇ ರೀತಿಯ ಪ್ರಕರಣಗಳು ಎಲ್ಲೇ ಕಂಡು ಬಂದರೂ ನಾನು ತಕ್ಷಣ ಸಂಬಂಧಿಸಿದ ಇಲಾಖೆಗಳಿಗೆ ಅಥವಾ **ಚೈಲ್ಡ್ ಹೆಲ್ಪ್‌ಲೈನ್ (ಮಕ್ಕಳ ಸಹಾಯವಾಣಿ) 1098/112** ಕ್ಕೆ ದೂರು ನೀಡುತ್ತೇನೆ ಅಥವಾ ಕರೆ ಮಾಡುತ್ತೇನೆ. (ಬಾಲ್ಯ ವಿವಾಹ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿ, ಗುಳೆ/ವಲಸೆ, ಮಕ್ಕಳ ಕಳ್ಳ ಸಾಗಾಣಿಕೆ ಹಾಗೂ ಮಾರಾಟ, ಭಿಕ್ಷಾಟನೆ, ಬೀದಿ ಮಕ್ಕಳು, ವಿಪತ್ತು ಅವಗಡಗಳಿಗೆ ಒಳಗಾದ ಮಕ್ಕಳು, ಲೈಂಗಿಕ ಶೋಷಣೆ, ಪೋಷಣೆ ಮತ್ತು ರಕ್ಷಣೆ ಅಗತ್ಯವುಳ್ಳ ಮಕ್ಕಳು, ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದ ಮಕ್ಕಳು, ಇತ್ಯಾದಿ, ಯಾವುದೇ 18 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಸಂಕಷ್ಟದಲ್ಲಿರುವುದು/ ತೊಂದರೆಗೆ ಒಳಗಾಗುವುದು ಕಂಡು ಬಂದಲ್ಲಿ ತಕ್ಷಣ ಸ್ಪಂದಿಸಿ ಮಕ್ಕಳ ಸಂರಕ್ಷಣೆಗೆ ಮುಂದಾಗುತ್ತೇನೆ.

6. ಮಕ್ಕಳಿಗೆ ಸಂಬಂಧಿಸಿದ **ವಿವಿಧ ಕಾನೂನುಗಳನ್ನು ನಾನು ಅರಿತುಕೊಂಡು** ಅವುಗಳನ್ನು ನಮ್ಮ ಶಾಲೆ/ಸಂಸ್ಥೆಯಲ್ಲಿ ಮತ್ತು ನಮ್ಮ ಕಾರ್ಯವ್ಯಾಪ್ತಿಯ ಸಮುದಾಯದಲ್ಲಿ ಅರಿವು ಮೂಡಿಸಲು ಸರ್ವ ಪ್ರಯತ್ನ ಮಾಡುತ್ತೇನೆ. ***(1.ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015. (ತಿದ್ದುಪಡಿ 2021) 2. ಬಾಲ್ಯವಿವಾಹ ನಿಷೇಧ ಕಾಯ್ದೆ–2006. 3. ಬಾಲ್ಯವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ–2016. 4. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012. 5. ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ–1986 (2016ರ ತಿದ್ದುಪಡಿ) 6. ಅನೈತಿಕ ಮಾನವ ಕಳ್ಳಸಾಗಾಣಿಕೆ ತಡೆ ಕಾಯ್ದೆ–1956–1986. 7. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ–2005. 8. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ–2009).*** 9. ವಿಪತ್ತು ಕಾರ್ಯ ನಿರ್ವಹಣೆ.
7. **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023)** ರ ಪ್ರಕಾರ ನಮ್ಮಲ್ಲಿ **"ಮಕ್ಕಳ ರಕ್ಷಣಾ ಸಮಿತಿ"** ಯನ್ನು ರಚಿಸಿ ಅನುಷ್ಠಾನಕ್ಕೆ ತರಲು ಆಡಳಿತ ಮಂಡಳಿಗೆ ಎಲ್ಲಾ ರೀತಿಯ ಸಹಕಾರ ಮತ್ತು ಬೆಂಬಲ ನೀಡಿ ಇತರರಿಂದ ಬೆಂಬಲ ಪಡೆದು ಅದನ್ನು ಕಾರ್ಯರೂಪಕ್ಕೆ ತರಲು ಸರ್ವ ಪ್ರಯತ್ನ ಮಾಡಿ ಅನುಷ್ಠಾನಕ್ಕೆ ತರುತ್ತೇನೆ.
8. ಇಲಾಖೆಯ ಆದೇಶದಂತೆ ನಮ್ಮಲ್ಲಿ **ಮಕ್ಕಳ ಹಕ್ಕುಗಳ ಕ್ಲಬ್** ರಚನೆಗೆ ಹಾಗೂ ಅದನ್ನು ಕಾರ್ಯರೂಪಕ್ಕೆ ತರಲು ಸಂಪೂರ್ಣ ಸಹಕಾರ ಮತ್ತು ಬೆಂಬಲ ನೀಡಿ ಅನುಷ್ಠಾನಕ್ಕೆ ತರುತ್ತೇನೆ. (ಸುತ್ತೋಲೆ ಸಂಖ್ಯೆ: ಎಡಿಎಂ–2(2) ಅನುಮತಿ 03/2015/16 ದಿನಾಂಕ: 07–09–2015, ಆಯುಕ್ತರು ಸಾ.ಶಿ.ಇ– ಶಾಲೆಗಳಲ್ಲಿ **ಮಕ್ಕಳ ಹಕ್ಕುಗಳ ಕ್ಲಬ್** ರಚನೆ).
9. ನಾನು ನಮ್ಮ ಎಲ್ಲಾ **ಮಕ್ಕಳ ಸುರಕ್ಷತೆಗಾಗಿ** ಹಾಗೂ **ಮಕ್ಕಳ ಸುಭದ್ರತೆಗೆ** ಎಲ್ಲ ರೀತಿಯಲ್ಲಿ ಪ್ರಯತ್ನಿಸುತ್ತೇನೆ. ನಾನು ಮಕ್ಕಳಿಗೆ ಎಲ್ಲಾ ರೀತಿಯ ಶೋಷಣೆ, ದೌರ್ಜನ್ಯ, ಹಿಂಸೆ, ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳ ವಂಚನೆ, ಮಾದಕ ವ್ಯಸನಗಳಿಂದ ಮುಕ್ತರಾಗಿ ಮತ್ತು ಸ್ವ ಹಿತಾರಕ್ಷಣೆ ಮಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಮಕ್ಕಳಿಗೆ ಬೆಂಬಲಿಸಿ ಅವರಲ್ಲಿ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಶ್ರಮಿಸುತ್ತೇನೆ.
10. ನಾನು ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ವಿವಿಧ ಅಗತ್ಯ ಮಕ್ಕಳಿಗೆ, ವಿವಿಧ ಇಲಾಖೆಗಳಿಂದ ದೊರಕಬೇಕಾದ, **ವಿವಿಧ ಸೌಲಭ್ಯಗಳು ನಿಯಮಾನುಸಾರ ಲಭ್ಯವಾಗಲು** ಸಕಾಲಕ್ಕೆ ಬೆಂಬಲ ನೀಡುತ್ತೇನೆ.
11. ನಾನು ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಎಲ್ಲಾ ಮಕ್ಕಳಿಗೆ ವಿವಿಧ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ/ಕಾರ್ಯಕ್ರಮಗಳಲ್ಲಿ **ಭಾಗವಹಿಸಲು ಅವಕಾಶ** ನೀಡಿ ಪ್ರೋತ್ಸಾಹಿಸುತ್ತೇನೆ.
12. ನಾನು, ನಮ್ಮಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ **ಮಕ್ಕಳ ಅಭಿಪ್ರಾಯ ಪಡೆದು ಅವರ ಅಭಿಪ್ರಾಯಗಳನ್ನು ಗೌರವಿಸಿ** ಅವುಗಳಿಗೆ ಮನ್ನಣೆ ನೀಡಿ, **ಮಕ್ಕಳ ಭಾಗವಹಿಸುವಿಕೆಯನ್ನು ಎತ್ತಿ ಹಿಡಿದು ಅನುಷ್ಠಾನಕ್ಕೆ ತರುತ್ತೇನೆ.**
13. ಮಕ್ಕಳ ಪ್ರಮುಖ ಹಕ್ಕುಗಳ ಗುಂಪುಗಳಾದ **ಬದುಕುವ ಹಕ್ಕುಗಳು, ರಕ್ಷಣೆಯ ಹಕ್ಕುಗಳು, ಅಭಿವೃದ್ಧಿ ಹೊಂದುವ ಹಕ್ಕುಗಳು ಹಾಗೂ ಭಾಗವಹಿಸುವ ಹಕ್ಕು**ಗಳನ್ನು ನಾನು ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಎಲ್ಲಾ ಮಕ್ಕಳು ಅನುಭವಿಸುವಂತಹ ವಾತಾವರಣ ನಿರ್ಮಾಣ ಮಾಡುತ್ತೇನೆ.
14. ಒಂದು ವೇಳೆ ನಾನು ಮಕ್ಕಳ ಹಕ್ಕಿನ ಉಲ್ಲಂಘನೆ, ಮಕ್ಕಳಿಗೆ ದೈಹಿಕ ಶಿಕ್ಷೆ/ದಂಡನೆ/ಪೀಡನೆ ನೀಡಿದಲ್ಲಿ, ಮಕ್ಕಳ ಮೇಲೆ ಯಾವುದೇ ರೀತಿಯ ಶೋಷಣೆ ಮಾಡಿದಲ್ಲಿ ಅಥವಾ ಮಕ್ಕಳ ಕಾನೂನಿಗೆ ವಿರುದ್ಧವಾಗಿ ನಾನು ನಡೆದುಕೊಂಡಲ್ಲಿ **ನನ್ನ ಮೇಲೆ ಯಾವುದೇ ರೀತಿಯ ಕಾನೂನಿನ ಕ್ರಮ** ಕೈಗೊಳ್ಳಬಹುದಾಗಿದೆ, ನಾನು **ಯಾವುದೇ ತರಹದ ಅಥವಾ ರೀತಿಯ ಒತ್ತಡ, ಅಡೆ–ತಡೆ ಮಾಡುವುದಿಲ್ಲ ಹಾಗೂ ತರುವುದಿಲ್ಲ.**
15. ನಾನು ಯಾವುದೇ ಮಕ್ಕಳ ಮತ್ತು ಅವರ ಕುಟುಂಬದ ವೈಯಕ್ತಿಕ ಮಾಹಿತಿ, ಗೌಪ್ಯತೆಗೆ ಸಂಬಂದಿಸಿದ ಮಾಹಿತಿಗಳ ಗೌಪ್ಯತೆಯನ್ನು ಕಾಪಾಡುತ್ತೇನೆ ಮತ್ತು **ಮಕ್ಕಳ ಹಾಗೂ ಅವರ ಕುಟುಂಬದ ಘನತೆ**ಯನ್ನು ಎತ್ತಿ ಹಿಡಿಯುತ್ತೇನೆ.

16. ನಾನು ನಮ್ಮ ಪರಿಸರವನ್ನು **"ಮಕ್ಕಳಿಗೆ ಸುರಕ್ಷಿತ ಮತ್ತು ವಿಶೇಷ ಸಾಮರ್ಥ್ಯವುಳ್ಳ ಮಕ್ಕಳಿಗೆ ಅಡೆತಡೆ ಮುಕ್ತ ಹಾಗೂ ಮಕ್ಕಳ ಸ್ನೇಹಿ"** ಯನ್ನಾಗಿ ಮಾಡಲು ಸಂಪೂರ್ಣವಾಗಿ ಶ್ರಮಿಸುತ್ತೇನೆ.
17. ನಾನು ನಮ್ಮ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯತಿಯಲ್ಲಿ ಪ್ರತಿ ವರ್ಷ ನಡೆಯುವ **'ಮಕ್ಕಳ ಹಕ್ಕುಗಳ ಗ್ರಾಮ ಸಭೆ'** ಯಲ್ಲಿ ಮಕ್ಕಳಿಗೆ ಭಾಗವಹಿಸಲು ಅವಕಾಶ ಮಾಡಿಕೊಡುತ್ತೇವೆ. ಅದೇ ರೀತಿಯಲ್ಲಿ ಗ್ರಾಮ ಪಂಚಾಯತಿಯಲ್ಲಿರುವ **ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯಲ್ಲಿ** (ವರ್ಷಕ್ಕೆ 4 ಸಲ ನಡೆಯುವ) ಎಲ್ಲಾ ಮಕ್ಕಳಿಗೂ ಅವರವರ ಅಭಿಪ್ರಾಯ, ಸಮಸ್ಯೆ, ದೂರುಗಳನ್ನು ಹೇಳಲು ಮತ್ತು ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತೇನೆ.
18. ನಾನು ನಮ್ಮ ಮಕ್ಕಳಿಗೆ ಸ್ಥಳೀಯ ಪೊಲೀಸ್ ಠಾಣೆ ಮುಖಾಂತರ **ತೆರೆದ ಮನೆ** ಕಾರ್ಯಕ್ರಮ ಮಾಡಿಸಿ ಮಕ್ಕಳ ಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಗಟ್ಟಿ ಮಾಡುತ್ತೇನೆ. ಹಾಗೂ ಮಕ್ಕಳ ಎಲ್ಲಾ ಸಮಸ್ಯೆಗೆ ಸ್ಪಂದಿಸಿ ತಕ್ಷಣ ಪ್ರತಿಕ್ರಿಯೆ ನೀಡಿ ನ್ಯಾಯ ಒದಗಿಸಲು ಎಲ್ಲಾ ಇಲಾಖೆಗಳಿಗೆ/ವ್ಯವಸ್ಥೆಗಳಗೆ ಸ್ಪಂದಿಸುತ್ತೇನೆ, ತನ್ಮೂಲಕ **ಮಕ್ಕಳ ಸಂರಕ್ಷಣೆಗೆ** ಮುಂದಾಗುತ್ತೇನೆ.
19. ಮಕ್ಕಳ ಹಿತದೃಷ್ಠಿಯಿಂದ ನಮ್ಮ ವಾರ್ಡ್/ಗ್ರಾಮ ಪಂಚಾಯಿತಿ/ಗ್ರಾಮ ಆಡಾಳಿತಾಧಿಕಾರಿಗಳು/ ನಗರ ಸಭೆ/ ಜಿಲ್ಲಾ ಮಕ್ಕಳ ರಕ್ಷಣಾ ಘಟಕ/ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ/1098/ಮಕ್ಕಳ ವಿಶೇಷ ಪೊಲೀಸ್ ಘಟಕ, ಆರೋಗ್ಯ ಇಲಾಖೆ, **ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ** ಹಾಗೂ ಇತರ ಇಲಾಖೆ/ವ್ಯವಸ್ಥೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಸಂದರ್ಭಾನುಸಾರ ಆ ಎಲ್ಲಾ ಇಲಾಖೆಗಳ ಸಹಕಾರ ಪಡೆದು ಮಕ್ಕಳ ಸಂರಕ್ಷಣಾ ಕಾರ್ಯಕ್ರಮಗಳ ಅನುಷ್ಠಾನ ಮಾಡಲು ಬೆಂಬಲ ನೀಡುತ್ತೇನೆ.
20. ಸಮಾಜದ ಮತ್ತು ಪ್ರತಿಯೊಂದು ಕುಟುಂಬದ ಎಲ್ಲಾ ಮಕ್ಕಳ ಹಕ್ಕುಗಳನ್ನು ಕಾಪಾಡುವ, ಗೌರವಿಸುವ ಹಾಗೂ ಅವರು ಅದನ್ನು ಅನುಭವಿಸುವಂತಾಗಲು ಸರ್ವ ಪ್ರಯತ್ನ ಮಾಡುತ್ತೇನೆ. ಮಕ್ಕಳ ಹಿತದೃಷ್ಠಿಯಿಂದ **ಮಕ್ಕಳ ಸಮಾನತೆ, ಸ್ವಾತಂತ್ರ್ಯ, ಸ್ವಾಭಿಮಾನ, ಗೌಪ್ಯತೆ, ಘನತೆಗೆ** ಎಲ್ಲಿಯೂ ಚ್ಯುತಿಬಾರದಂತೆ ನೋಡಿಕೊಳ್ಳುತ್ತೇನೆ.

***ನಾನು ಇದನ್ನು ಓದಿ, ಅರ್ಥಮಾಡಿಕೊಂಡು ಮತ್ತು ನೀತಿ ಸಂಹಿತೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಅನುಸರಿಸಿ ಪಾಲಿಸಲು ಒಪ್ಪಿರುತ್ತೇನೆ. ನಮ್ಮ ಮಕ್ಕಳ ಸುರಕ್ಷತೆ, ಸುಭದ್ರತೆ ಹಾಗೂ ಮಕ್ಕಳ ಸಂರಕ್ಷಣೆ ಮತ್ತು ಯೋಗಕ್ಷೇಮದ ಬಗ್ಗೆ ನನ್ನ ಬದ್ಧತೆಗಳು ಮತ್ತು ಜವಾಬ್ದಾರಿಗಳ ಬಗ್ಗೆ ನನಗೆ ಅರಿವಿರುತ್ತದೆ ಮತ್ತು ನನ್ನ ವೃತ್ತಿ ಕ್ಷೇತ್ರ ಹಾಗೂ ಶಿಕ್ಷಣ ಸಂಸ್ಥೆಯ ಒಳಗೆ ಹಾಗೂ ಹೊರಗೆ ವೃತ್ತಿಪರ ನೈತಿಕತೆಗೆ ಬದ್ಧನಾಗಿರುತ್ತೇನೆ.***

***ಈ ಮೇಲಿನ ಎಲ್ಲಾ ಅಂಶಗಳನ್ನು ನಾನು ಸಂಪೂರ್ಣವಾಗಿ ಪಾಲಿಸಿ, ಅನುಸರಿಸಿ. ಕಾರ್ಯರೂಪಕ್ಕೆ ತರುವ ಮೂಲಕ ಅನುಷ್ಠಾನಕ್ಕೆ ತರುತ್ತೇನೆಂದು ನನ್ನ ಆತ್ಮಸಾಕ್ಷಿಯಾಗಿ ಒಪ್ಪಿ, ಧೃಡೀಕರಿಸಿ ಈ ಬದ್ಧತಾ ಪತ್ರಕ್ಕೆ ಸಹಿ ಮಾಡಿ, ನೀಡಿರುತ್ತೇನೆ.***

1. **ಶಿಕ್ಷಕರ/ನೌಕರರ/ಸಿಬ್ಬಂದಿಯ ಪೂರ್ಣ ಹೆಸರು:**______________________________
2. **ಹುದ್ದೆ/ಪದನಾಮ:**______________________________________________
3. **ಸೇರಿದ ದಿನಾಂಕ/ತಿಂಗಳು/ವರ್ಷ:**______________________________
4. **ಸಿಬ್ಬಂದಿಯ ಪೂರ್ಣ ವಿಳಾಸ/ ದೂರವಾಣಿ ಸಂಖ್ಯೆ:**_________________________

______________________________________________________________

5. **ಸಹಿ;**______________________________________________________
6. ದಿನಾಂಕ;____________________________________________________

1098

CHILD

HELPLINE

24X7

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023) ಹಾಗೂ ನಮ್ಮ ಮಕ್ಕಳ ರಕ್ಷಣಾ ನೀತಿಯಂತೆ ಮಕ್ಕಳ ಹಕ್ಕುಗಳು, ಮಕ್ಕಳ ಸಂರಕ್ಷಣೆ ಹಾಗೂ ಮಕ್ಕಳ ಅಭಿವೃದ್ಧಿಗಾಗಿ ನಮ್ಮ ಬದ್ಧತೆಗಳು;

**ಶಿಕ್ಷಣ ಸಂಸ್ಥೆ/ಶಾಲೆ/ಕಾಲೇಜು/ವಸತಿ ನಿಲಯ/ಶಿಕ್ಷಣ ಕೇಂದ್ರದ ಹೆಸರು ಮತ್ತು ವಿಳಾಸ:______**

1. **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023)** ರ ಪ್ರಕಾರ ಹಾಗೂ ರಾಜ್ಯದ ಎಲ್ಲಾ 18 ವರ್ಷದೊಳಗಿನ ಮಕ್ಕಳಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಮಕ್ಕಳ ರಕ್ಷಣಾ ನೀತಿ, ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳನ್ನು ನಾವು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದು, ಅನುಷ್ಠಾನ ಮಾಡಿ ಅನುಸರಿಸುತ್ತೇವೆ.
2. **ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ** ಹೊರತಂದಿರುವ ಮಕ್ಕಳ ಮೇಲೆ ದೈಹಿಕ ಶಿಕ್ಷೆ (ಮನೋದೈಹಿಕ ದಂಡನೆ) ನಿಷೇಧ ಹಾಗೂ ತಡೆಗಟ್ಟುವ ಕುರಿತಾದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುತ್ತೇವೆ. **ಮಕ್ಕಳಿಗೆ ಯಾವುದೇ ರೀತಿಯ ದೈಹಿಕ, ಮಾನಸಿಕ ಹಾಗೂ ಶೋಷಣೆ, ನಿರ್ಲಕ್ಷ್ಯ, ತಾರತಮ್ಯತೆ ಆಧಾರಿತ ಯಾವುದೇ ರೀತಿಯ ಶಿಕ್ಷೆ/ದಂಡನೆ/ಪೀಡನೆ ನೀಡುವುದಿಲ್ಲ**, ನಮ್ಮಲ್ಲಿ ನಾವು ಅದಕ್ಕೆ ಅವಕಾಶ ನೀಡುವುದಿಲ್ಲ. ಅಂತಹ ಯಾವುದೇ ಪ್ರಕರಣ ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆ ಆಗದಂತೆ ನೋಡಿಕೊಳ್ಳುತ್ತೇವೆ. ***(ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ–2009, ಕಲಂ 17(1)(2). ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 (ತಿದ್ದುಪಡಿ 2021 ರ ಕಲಂ: 75 ಮತ್ತು ಕಲಂ: 82 ಒಳಗೊಂಡಂತೆ).***
3. **ನವೆಂಬರ್ 20, 1989** ರಂದು ವಿಶ್ವಸಂಸ್ಥೆಯು ಜಾರಿಗೆ ತಂದಿರುವ **ವಿಶ್ವಸಂಸ್ಥೆಯ ಮಕ್ಕಳ ಒಡಂಬಡಿಕೆಗೆ ಭಾರತ ಡಿಸೆಂಬರ್ 11, 1992 ರಂದು ಸಹಿ ಮಾಡಿರುವಂತೆ** ಒಡಂಬಡಿಕೆಯಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ನಾವು, ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಎಲ್ಲಾ ಮಕ್ಕಳು ಅನುಭವಿಸುವಂತೆ ಖಾತ್ರಿಪಡಿಸಲು ಸರ್ವ ಪ್ರಯತ್ನ ಮಾಡುತ್ತೇವೆ.
4. **ಮಕ್ಕಳ ಹಕ್ಕುಗಳನ್ನು ಗೌರವಿಸುತ್ತೇವೆ** ಹಾಗೂ ಯಾವುದೇ ಕಾರಣಕ್ಕೂ ನಾವು ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಮನೆ, ಕುಟುಂಬ ಹಾಗೂ ನಮ್ಮ ಕುಟುಂಬ ಮತ್ತು ಸಮಾಜದಲ್ಲಿ ಎಲ್ಲೂ ಕೂಡಾ ನಾವು ಯಾವುದೇ ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ.
5. **ಮಕ್ಕಳ ಹಕ್ಕುಗಳ ಉಲ್ಲಂಘನೆ ಹಾಗೂ ಮಕ್ಕಳ ಸಂರಕ್ಷಣೆಗೆ** ಸಂಬಂಧಿಸಿದ ಯಾವುದೇ ರೀತಿಯ ಪ್ರಕರಣಗಳು ಎಲ್ಲೇ ಕಂಡು ಬಂದರೂ ನಾವು ತಕ್ಷಣ ಸಂಬಂಧಿಸಿದ ಇಲಾಖೆಗಳಿಗೆ ಅಥವಾ **ಚೈಲ್ಡ್ ಹೆಲ್ಪ್‌ಲೈನ್ (ಮಕ್ಕಳ ಸಹಾಯವಾಣಿ) 1098 ಕ್ಕೆ ಅಥವಾ ತುರ್ತು ಇದ್ದಾಗ 112** ಕ್ಕೆ ದೂರು ನೀಡುತ್ತೇವೆ ಅಥವಾ ಕರೆ ಮಾಡುತ್ತೇವೆ. (ಬಾಲ್ಯ ವಿವಾಹ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿ, ಗುಳೆ/ವಲಸೆ, ಮಕ್ಕಳ ಕಳ್ಳ ಸಾಗಾಣಿಕೆ ಹಾಗೂ ಮಾರಾಟ, ಭಿಕ್ಷಾಟನೆ, ಬೀದಿ ಮಕ್ಕಳು, ವಿಪತ್ತು ಅವಘಡಗಳಿಗೆ ಒಳಗಾದ ಮಕ್ಕಳು, ಲೈಂಗಿಕ ಶೋಷಣೆ, ಪೋಷಣೆ ಮತ್ತು ರಕ್ಷಣೆ ಅಗತ್ಯವುಳ್ಳ ಮಕ್ಕಳು, ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದ ಮಕ್ಕಳು ಇತ್ಯಾದಿ ಯಾವುದೇ 18 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಸಂಕಷ್ಟದಲ್ಲಿರುವುದು/ ತೊಂದರೆಗೆ ಒಳಗಾಗುವುದು ಕಂಡು ಬಂದಲ್ಲಿ ತಕ್ಷಣ ಸ್ಪಂದಿಸಿ ಮಕ್ಕಳ ಸಂರಕ್ಷಣೆಗೆ ಮುಂದಾಗುತ್ತೇವೆ.

6. ಮಕ್ಕಳಿಗೆ ಸಂಬಂಧಿಸಿದ **ವಿವಿಧ ಕಾನೂನುಗಳನ್ನು ನಾವು ಅರಿತುಕೊಂಡು** ಅವುಗಳನ್ನು ನಮ್ಮಲ್ಲಿ ಮತ್ತು ನಮ್ಮ ಕಾರ್ಯವ್ಯಾಪ್ತಿಯ ಸಮುದಾಯದಲ್ಲಿ ಅರಿವು ಮೂಡಿಸಲು ಸರ್ವ ಪ್ರಯತ್ನ ಮಾಡುತ್ತೇವೆ. ***(1.ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015. (ತಿದ್ದುಪಡಿ 2021) 2. ಬಾಲ್ಯವಿವಾಹ ನಿಷೇಧ ಕಾಯ್ದೆ–2006. 3. ಬಾಲ್ಯವಿವಾಹ ನಿಷೇಧ (ಕರ್ನಾಟಕ) ತಿದ್ದುಪಡಿ ಕಾಯ್ದೆ–2016. 4. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012, ತಿದ್ದುಪಡಿ 2019, 5. ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ–1986 (2016ರ ತಿದ್ದುಪಡಿ) 6. ಅನೈತಿಕ ಮಾನವ ಕಳ್ಳಸಾಗಾಣಿಕೆ ತಡೆ ಕಾಯ್ದೆ–1956–1986. 7. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ–2005. 8. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ–2009.*** **9. ವಿಪತ್ತು ಕಾರ್ಯ ನಿರ್ವಹಣೆ 10. ಕಾನೂನು ಬದ್ಧ ದತ್ತು ಪ್ರಕ್ರಿಯೆ ಇತ್ಯಾದಿ)**
7. **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ 2023) ರ** ಪ್ರಕಾರ ನಮ್ಮಲ್ಲಿ **"ಮಕ್ಕಳ ರಕ್ಷಣಾ ಸಮಿತಿ"** ಯನ್ನು ರಚಿಸಿ ಅನುಷ್ಠಾನಕ್ಕೆ ತಂದು ಅದನ್ನು ಕಾರ್ಯರೂಪಕ್ಕೆ ತರುತ್ತೇವೆ.
8. **ಮಕ್ಕಳ ಹಕ್ಕುಗಳ ಕ್ಲಬ್ ನ್ನು** ರಚಸಿ, ಕಾರ್ಯರೂಪಕ್ಕೆ ತಂದು ಅನುಷ್ಠಾನಕ್ಕೆ ತರುತ್ತೇವೆ. (ಸುತ್ತೋಲೆ ಸಂಖ್ಯೆ: ಎಡಿಎಂ–2(2) ಅನುಮತಿ 03/2015/16 ದಿನಾಂಕ: 07–09–2015, ಆಯುಕ್ತರು ಸಾ.ಶಿ.ಇ– ಶಾಲೆಗಳಲ್ಲಿ **ಮಕ್ಕಳ ಹಕ್ಕುಗಳ ಕ್ಲಬ್** ರಚನೆ).
9. ಎಲ್ಲಾ **ಮಕ್ಕಳ ಸುರಕ್ಷತೆಗಾಗಿ** ಹಾಗೂ **ಮಕ್ಕಳ ಸುಭದ್ರತೆಗೆ** ಎಲ್ಲಾ ರೀತಿಯಲ್ಲಿ ಪ್ರಯತ್ನಿಸುತ್ತೇವೆ. ನಾವು ಮಕ್ಕಳಿಗೆ ಎಲ್ಲಾ ರೀತಿಯ ಶೋಷಣೆ, ದೌರ್ಜನ್ಯ, ಹಿಂಸೆ, ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳ ವಂಚನೆ, ಮಾದಕ ವ್ಯಸನಗಳಿಂದ ಮುಕ್ತರಾಗಿ ಮತ್ತು ಸ್ವ ಹಿತರಕ್ಷಣೆ ಮಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಮಕ್ಕಳಿಗೆ ಬೆಂಬಲಿಸಿ ಅವರಲ್ಲಿ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಶ್ರಮಿಸುತ್ತೇವೆ.
10. ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ವಿಶೇಷ ಸಾಮರ್ಥ್ಯದ ಮಕ್ಕಳು ಹಾಗೂ ವಿವಿಧ ಅಗತ್ಯವುಳ್ಳ ಮಕ್ಕಳಿಗೆ, ವಿವಿಧ ಇಲಾಖೆಗಳಿಂದ ದೊರಕಬೇಕಾದ, **ವಿವಿಧ ಸೌಲಭ್ಯಗಳನ್ನು ನಿಯಮಾನುಸಾರ** ಸಕಾಲಕ್ಕೆ ಒದಗಿಸುತ್ತೇವೆ.
11. ನಾವು ನಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಎಲ್ಲಾ ಮಕ್ಕಳಿಗೆ ಪೊಲೀಸ್ ಠಾಣೆಯಲ್ಲಿ ನಡೆಯುವ **ತೆರೆದ ಮನೆ** ಕಾರ್ಯಕ್ರಮಕ್ಕೆ ಕಡ್ಡಾಯ ಅವಕಾಶ ಕಲ್ಪಿಸಿ, ನಮ್ಮ ಎಲ್ಲಾ ಮಕ್ಕಳಿಗೆ ವಿವಿಧ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ/ಕಾರ್ಯಕ್ರಮಗಳಲ್ಲಿ **ಭಾಗವಹಿಸಲು ಅವಕಾಶ** ನೀಡಿ ಪ್ರೋತ್ಸಾಹಿಸುತ್ತೇವೆ.
12. ನಮ್ಮಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ **ಮಕ್ಕಳ ಅಭಿಪ್ರಾಯ ಪಡೆದು ಅವರ ಅಭಿಪ್ರಾಯಗಳನ್ನು ಗೌರವಿಸಿ** ಅವುಗಳಿಗೆ ಮನ್ನಣೆ ನೀಡಿ, ಮಕ್ಕಳ ಭಾಗವಹಿಸುವಿಕೆಯ ಮೂಲಕವೇ ಅನುಷ್ಠಾನಕ್ಕೆ ತರುತ್ತೇವೆ.
13. ಮಕ್ಕಳ ಪ್ರಮುಖ ಹಕ್ಕುಗಳ ಗುಂಪುಗಳಾದ **ಬದುಕುವ ಹಕ್ಕುಗಳು, ರಕ್ಷಣೆಯ ಹಕ್ಕುಗಳು, ಅಭಿವೃದ್ಧಿ ಹೊಂದುವ ಹಕ್ಕುಗಳು ಹಾಗೂ ಭಾಗವಹಿಸುವ ಹಕ್ಕು**ಗಳನ್ನು ಎಲ್ಲಾ ಮಕ್ಕಳು ಅನುಭವಿಸುವಂತಹ ವಾತಾವರಣ ನಿರ್ಮಾಣ ಮಾಡಿ, ಅದನ್ನು ಖಾತ್ರಿ ಪಡಿಸುತ್ತೇವೆ.
14. ಒಂದು ವೇಳೆ ನಾವು ಮಕ್ಕಳ ಹಕ್ಕಿನ ಉಲ್ಲಂಘನೆ, ಮಕ್ಕಳಿಗೆ ದೈಹಿಕ ಶಿಕ್ಷೆ/ದಂಡನೆ/ಪೀಡನೆ ನೀಡಿದಲ್ಲಿ, ಮಕ್ಕಳ ಮೇಲೆ ಯಾವುದೇ ರೀತಿಯ ಶೋಷಣೆ ಮಾಡಿದಲ್ಲಿ ಅಥವಾ ಮಕ್ಕಳ ಕಾನೂನಿಗೆ ವಿರುದ್ಧವಾಗಿ ನಾವು ನಡೆದುಕೊಂಡಲ್ಲಿ **ನಮ್ಮ ಮೇಲೆ ಯಾವುದೇ ರೀತಿಯ ಕಾನೂನಿನ ಕ್ರಮ** ಕೈಗೊಳ್ಳಬಹುದಾಗಿದೆ, ನಾವು **ಯಾವುದೇ ತರಹದ ಅಥವಾ ರೀತಿಯ ಒತ್ತಡ, ಅಡೆ–ತಡೆ ಮಾಡುವುದಿಲ್ಲ ಹಾಗೂ ತರುವುದಿಲ್ಲ.**
15. ಯಾವುದೇ ಮಕ್ಕಳ ಮತ್ತು ಅವರ ಕುಟುಂಬದ ವೈಯಕ್ತಿಕ ಮಾಹಿತಿ, ಗೌಪ್ಯತೆಗೆ ಸಂಬಂಧಿಸಿದ ಮಾಹಿತಿಗಳ ಗೌಪ್ಯತೆಯನ್ನು ನಾವು ಕಾಪಾಡುತ್ತೇವೆ ಮತ್ತು **ಮಕ್ಕಳ ಹಾಗೂ ಅವರ ಕುಟುಂಬದ ಘನತೆ** ಯನ್ನು ನಾವು ಎತ್ತಿ ಹಿಡಿಯುತ್ತೇವೆ.

16. ನಮ್ಮ ಪರಿಸರವನ್ನು **"ಮಕ್ಕಳಿಗೆ ಸುರಕ್ಷಿತ ಮತ್ತು ವಿಶೇಷ ಸಾಮರ್ಥ್ಯವುಳ್ಳ ಮಕ್ಕಳಿಗೆ ಅಡೆ–ತಡೆ ಮುಕ್ತ ಹಾಗೂ ಮಕ್ಕಳ ಸ್ನೇಹಿ"** ಯನ್ನಾಗಿ ಮಾಡಲು ನಾವು ಪ್ರಯತ್ನಿಸುತ್ತೇವೆ. ಮಕ್ಕಳ ಗುಣಾತ್ಮಕ ಅಂಶಗಳನ್ನು ಎತ್ತಿ ಹಿಡಿದು ಅವರು ಸಂಪೂರ್ಣವಾಗಿ ಬೆಳವಣಿಗೆ ಹೊಂದಿ, ಅಭಿವೃದ್ಧಿಯಾಗಲು ನಾವು ಶ್ರಮಿಸುತ್ತೇವೆ.
17. ನಮ್ಮ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯತಿಯಲ್ಲಿ ಪ್ರತಿ ವರ್ಷ ನಡೆಯುವ **'ಮಕ್ಕಳ ಹಕ್ಕುಗಳ ಗ್ರಾಮ ಸಭೆ'** ಯಲ್ಲಿ ಮಕ್ಕಳಿಗೆ ಭಾಗವಹಿಸಲು ಅವಕಾಶ ಮಾಡಿಕೊಡುತ್ತೇವೆ. ಅದೇ ರೀತಿಯಲ್ಲಿ ಗ್ರಾಮ ಪಂಚಾಯತಿಯಲ್ಲಿರುವ **ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯಲ್ಲಿ** (ವರ್ಷಕ್ಕೆ 4 ಸಲ ನಡೆಯುವ) ಎಲ್ಲಾ ಮಕ್ಕಳಿಗೂ ಅವರವರ ಅಭಿಪ್ರಾಯ, ಸಮಸ್ಯೆ, ದೂರುಗಳನ್ನು ಹೇಳಲು ಮತ್ತು ಹಂಚಿಕೊಳ್ಳಲು ನಾವು ಅವಕಾಶ ಕಲ್ಪಿಸಿಕೊಡುತ್ತೇವೆ.
18. ನಮ್ಮ ಎಲ್ಲಾ ಮಕ್ಕಳ ಸಮಸ್ಯೆಗೆ ಸ್ಪಂದಿಸಿ, ತಕ್ಷಣ ಪ್ರತಿಕ್ರಿಯೆ ನೀಡಿ, ನ್ಯಾಯ ಒದಗಿಸಲು ಎಲ್ಲಾ ಇಲಾಖೆ/ವ್ಯವಸ್ಥೆಗಳೊಂದಿಗೆ ನಾವು ಸ್ಪಂದಿಸುತ್ತೇವೆ, ತನ್ಮೂಲಕ **ಮಕ್ಕಳ ಸಂರಕ್ಷಣೆಗೆ** ಮುಂದಾಗುತ್ತೇವೆ.
19. ಮಕ್ಕಳ ಹಿತದೃಷ್ಠಿಯಿಂದ ನಮ್ಮ ವಾರ್ಡ್/ಗ್ರಾಮ ಪಂಚಾಯಿತಿ/ಗ್ರಾಮ ಆಡಳಿತಾಧಿಕಾರಿಗಳು/ ನಗರ ಸಭೆ/ಪುರಸಭೆ/ಮಹಾನಗರ ಪಾಲಿಕೆ/ ಜಿಲ್ಲಾ ಮಕ್ಕಳ ರಕ್ಷಣಾ ಘಟಕ/ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ/1098/ಮಕ್ಕಳ ವಿಶೇಷ ಪೊಲೀಸ್ ಘಟಕ, ಆರೋಗ್ಯ ಇಲಾಖೆ, **ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ** ಹಾಗೂ ಇತರ ಇಲಾಖೆ/ವ್ಯವಸ್ಥೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಸಂದರ್ಭಾನುಸಾರ ಆ ಎಲ್ಲಾ ಇಲಾಖೆಗಳ ಸಹಕಾರ ಮತ್ತು ಬೆಂಬಲ ಪಡೆದು ಮಕ್ಕಳ ಸಂರಕ್ಷಣಾ ಕಾರ್ಯಕ್ರಮಗಳ ಅನುಷ್ಠಾನ ಮಾಡುತ್ತೇವೆ.
20. ಪ್ರತಿಯೊಂದು ಕುಟುಂಬದ ಮತ್ತು ಸಮಾಜದ ಎಲ್ಲಾ ಮಕ್ಕಳ ಹಕ್ಕುಗಳನ್ನು ಕಾಪಾಡುವ, ಗೌರವಿಸುವ ಹಾಗೂ ಅವರು ಅದನ್ನು ಅನುಭವಿಸುವಂತಾಗಲು ಸರ್ವ ಪ್ರಯತ್ನ ಮಾಡುತ್ತೇವೆ. ಮಕ್ಕಳ ಹಿತದೃಷ್ಠಿಯಿಂದ **ಮಕ್ಕಳ ಹಕ್ಕುಗಳು, ಮಕ್ಕಳ ಸಂರಕ್ಷಣೆ, ಮಕ್ಕಳ ಅಭಿವೃದ್ಧಿ, ಸಮಾನತೆ, ಸ್ವಾತಂತ್ರ್ಯ, ಸ್ವಾಭಿಮಾನ, ಗೌಪ್ಯತೆ, ಘನತೆಗೆ** ಎಲ್ಲಿಯೂ ಧಕ್ಕೆ ಹಾಗೂ ಚ್ಯುತಿಬಾರದಂತೆ ನೋಡಿಕೊಳ್ಳುತ್ತೇವೆ.

**ಮುಖ್ಯೋಪಾಧ್ಯಯರು/ಪ್ರಾಂಶುಪಾಲರು/ನಿಲಯ ಪಾಲಕರು/ ಮೆಲ್ವಿಚಾರಕರು/ಮುಖ್ಯಸ್ಥರು/ಆಡಳಿತ ಮಂಡಳಿ**

**ಶಿಕ್ಷಣ ಸಂಸ್ಥೆಯ ಹೆಸರು:**____________________________________

---

**ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016, ಪರಿಷ್ಕರಣೆ 2023 ರಂತೆ ರಾಜ್ಯದ ಪ್ರತಿಯೊಂದು ಶಾಲೆ/ಪದವಿ ಪೂರ್ವ ಕಾಲೇಜು/ವಸತಿ ನಿಲಯ/ ಶಿಕ್ಷಣ ಸಂಸ್ಥೆ/ಯಾವುದೇ 18 ವರ್ಷದೊಳಗಿನ ಮಕ್ಕಳಿರುವ ಕೇಂದ್ರಗಳಲ್ಲಿ, ಭಿತ್ತರಿಸಲೇಬೇಕಾದ ಮಕ್ಕಳ ಹಕ್ಕು, ಸಂರಕ್ಷಣೆ ಹಾಗೂ ಮಕ್ಕಳ ಅಭಿವೃದ್ಧಿಗಾಗಿ ಶಿಕ್ಷಣ ಸಂಸ್ಥೆಯ ಬದ್ಧತೆಗಳ ಗೋಡೆ ಬರಹದ ಮಾದರಿ.**

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ– ನವೆಂಬರ್ 20, 1989; ಭಾರತ ಸರ್ಕಾರ 1992 ಡಿಸೆಂಬರ್ 11ರಂದು ಸಹಿ ಮಾಡಿದೆ.

ಪರಿಚ್ಛೇಧ 1 : 18 ವರ್ಷದೊಳಗಿನ ಎಲ್ಲಾ ಮನುಷ್ಯ ಜೀವಿಗಳು ಮಗು ಅಥವಾ ಮಕ್ಕಳು.
ಪರಿಚ್ಛೇಧ 2 : ಮಕ್ಕಳಲ್ಲಿ ಯಾವುದೇ ತಾರತಮ್ಯ ತರಬಾರದು.
ಪರಿಚ್ಛೇಧ 3 : ಮಕ್ಕಳ ಹಿತಾಸಕ್ತಿ ಕಾಪಾಡಬೇಕು.
ಪರಿಚ್ಛೇಧ 4 : ಮಕ್ಕಳ ಹಕ್ಕುಗಳನ್ನು ಸರ್ಕಾರ ಪ್ರಾಮಾಣಿಕವಾಗಿ ಜಾರಿಗೆ ತರಬೇಕು.
ಪರಿಚ್ಛೇಧ 5 : ಮಕ್ಕಳ ಶ್ರೇಯೋಭಿವೃದ್ಧಿಗೆ ಸಹಕರಿಸುವ ಪೋಷಕರಿಗೆ ಸರ್ಕಾರದ ಮನ್ನಣೆ.
ಪರಿಚ್ಛೇಧ 6 : ಜೀವಿಸುವ ಹಕ್ಕು.
ಪರಿಚ್ಛೇಧ 7 : ಹೆಸರು ಮತ್ತು ರಾಷ್ಟ್ರೀಯತೆಯನ್ನು ಪಡೆಯುವ ಹಕ್ಕು.
ಪರಿಚ್ಛೇಧ 8 : ಮಕ್ಕಳ ಅನನ್ಯತೆಯನ್ನು ಕಾಪಾಡುವುದು. (ಹೆಸರು,ಜಾತಿ, ವರ್ಗ, ಪರಿಸ್ಥಿತಿ, ಕೌಟುಂಬಿಕ ಸಂಬಂಧ ಉಳಿಸಿಕೊಳ್ಳುವುದು.)
ಪರಿಚ್ಛೇಧ 9 : ಪೋಷಕರಿಂದ ರಕ್ಷಣೆಯ ಹಕ್ಕು. (ಪೋಷಕರೊಂದಿಗೆ ರಕ್ಷಣೆ ಇಲ್ಲ ಎಂದಲ್ಲಿ ಮಾತ್ರ)
ಪರಿಚ್ಛೇಧ 10 : ಪೋಷಕರೊಂದಿಗಿರುವ ಹಕ್ಕು
ಪರಿಚ್ಛೇಧ 11 : ಸ್ಥಳಾಂತರದಿಂದ ರಕ್ಷಣೆ ಪಡೆಯುವ ಹಕ್ಕು.
ಪರಿಚ್ಛೇಧ 12 : ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು.
ಪರಿಚ್ಛೇಧ 13 : ಮಾಹಿತಿ ಪಡೆಯುವ ಹಕ್ಕು.
ಪರಿಚ್ಛೇಧ 14 : ಆತ್ಮಸಾಕ್ಷಿ ಮತ್ತು ಧರ್ಮದ ಅನುಸರಣೆ, ಧಾರ್ಮಿಕ ಹಕ್ಕು.
ಪರಿಚ್ಛೇಧ 15 : ಸಂಘಟಿತರಾಗುವ ಹಕ್ಕು.
ಪರಿಚ್ಛೇಧ 16 : ವೈಯಕ್ತಿಕ ರಕ್ಷಣೆಯ ಹಕ್ಕು.
ಪರಿಚ್ಛೇಧ 17 : ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದ ಮಾಹಿತಿ ಪಡೆಯುವ ಹಕ್ಕು.
ಪರಿಚ್ಛೇಧ 18 : ಹೆತ್ತವರ/ಪೋಷಕರ ಪೋಷಣೆ, ಲಾಲನೆ ಪಡೆಯುವ ಹಕ್ಕು.
ಪರಿಚ್ಛೇಧ 19 : ದುರುಪಯೋಗದಿಂದ ರಕ್ಷಣೆಯ ಹಕ್ಕು.
ಪರಿಚ್ಛೇಧ 20 : ಕುಟುಂಬ ವಾತಾವರಣದಿಂದ ವಂಚಿತ ಮಕ್ಕಳಿಗೆ ಪರ್ಯಾಯ ವ್ಯವಸ್ಥೆ ಪಡೆಯುವ ಹಕ್ಕು.
ಪರಿಚ್ಛೇಧ 21 : ದತ್ತು ನೀಡುವಾಗ ಅನ್ಯಾಯವಾಗದ ಹಾಗೆ ರಕ್ಷಿಸುವ ಹಕ್ಕು.
ಪರಿಚ್ಛೇಧ 22 : ನಿರಾಶ್ರಿತ, ನಿರ್ವಸಿತರಾಗುವುದರಿಂದ ರಕ್ಷಣೆ ಹಕ್ಕು,
ಪರಿಚ್ಛೇಧ 23 : ಅಂಗವಿಕಲ ಮಕ್ಕಳಿಗೆ ರಕ್ಷಣೆಯ ಹಕ್ಕು.
ಪರಿಚ್ಛೇಧ 24 : ಉತ್ತಮ ಆರೋಗ್ಯ ಹೊಂದುವ ಹಕ್ಕು.
ಪರಿಚ್ಛೇಧ 25 : ಎಲ್ಲಾ ಮಕ್ಕಳ ಪಾಲನೆ ಕೇಂದ್ರಗಳಲ್ಲಿ ನಿಯಮಿತ ಅವಧಿಗಳಲ್ಲಿ ಪುನರ್ವಿಮರ್ಶೆ.
ಪರಿಚ್ಛೇಧ 26 : ಸಾಮಾಜಿಕ ಭದ್ರತೆಯನ್ನು ಪಡೆಯುವ ಹಕ್ಕು.
ಪರಿಚ್ಛೇಧ 27 : ಸೂಕ್ತ ಜೀವನ ಮಟ್ಟಪಡೆಯುವ ಹಕ್ಕು .
ಪರಿಚ್ಛೇಧ 28 : ಶಿಕ್ಷಣದ ಹಕ್ಕು.
ಪರಿಚ್ಛೇಧ 29 : ಮಕ್ಕಳು ಸ್ವಾವಲಂಬಿಯಾಗಿ ಬದುಕಲು ಪೂರಕವಾಗಿರುವಂತಹ ಶಿಕ್ಷಣದ ಹಕ್ಕು.
ಪರಿಚ್ಛೇಧ 30 : ಅಲ್ಪಸಂಖ್ಯಾತ ಸಮುದಾಯಗಳಿಗೆ ಅವರ ಸಂಸ್ಕೃತಿಯಲ್ಲಿ ಜೀವಿಸುವ ಹಕ್ಕು
ಪರಿಚ್ಛೇಧ 31 : ಭಾಗವಹಿಸುವ ಹಕ್ಕು .
ಪರಿಚ್ಛೇಧ 32 : ಬಾಲಕಾರ್ಮಿಕ ಪದ್ಧತಿಯಿಂದ ರಕ್ಷಣೆಯ ಹಕ್ಕು. (ಬಾಲಕಾರ್ಮಿಕತೆ ನಿಷೇಧ).
ಪರಿಚ್ಛೇಧ 33 : ಮಾದಕದ್ರವ್ಯಗಳಿಂದ ರಕ್ಷಣೆಯ ಹಕ್ಕು.
ಪರಿಚ್ಛೇಧ 34 : ಲೈಂಗಿಕ ಶೋಷಣೆಯಿಂದ ರಕ್ಷಣೆಯ ಹಕ್ಕು.
ಪರಿಚ್ಛೇಧ 35 : ಮಕ್ಕಳ ಮಾರಾಟ ಮಾಡುವ ಮತ್ತು ಅಕ್ರಮ ಬಂಧನದಲ್ಲಿಡುವುದರ ವಿರುದ್ಧ ರಕ್ಷಣೆಯ ಹಕ್ಕು.
ಪರಿಚ್ಛೇಧ 36 : ಇನ್ನಿತರ ಶೋಷಣೆಗಳ ವಿರುದ್ದ ರಕ್ಷಣೆಯ ಹಕ್ಕು.
ಪರಿಚ್ಛೇಧ 37 : ಚಿತ್ರಹಿಂಸೆ ಮತ್ತು ಮರಣದಂಡನೆಯಿಂದ ರಕ್ಷಣೆಯ ಹಕ್ಕು.
ಪರಿಚ್ಛೇಧ 38 : ಯುದ್ಧ/ಸಶಸ್ತ್ರ ಸಂಘರ್ಷದಿಂದ ರಕ್ಷಣೆಯ ಹಕ್ಕು.
ಪರಿಚ್ಛೇಧ 39 : ಯಾವುದೇ ರೀತಿಯಲ್ಲಿ ವಂಚಿತರಾಗಿದ್ದರೆ, ತಕ್ಷಣ ಪುನರ್ವಸತಿ ವ್ಯವಸ್ಥೆ.
ಪರಿಚ್ಛೇಧ 40 : ಪರಿಸ್ಥಿತಿಗನುಗುಣವಾಗಿ ಸಮಸ್ಯೆಗೊಳಗಗಿದ್ದರೆ ಮಕ್ಕಳಿಗೆ ನ್ಯಾಯ ದೊರಕಿಸಿಕೊಡುವ ಹಕ್ಕು.
ಪರಿಚ್ಛೇಧ 41 : ಮಕ್ಕಳ ಪರವಾದ ಕಾನೂನನ್ನು ಎತ್ತಿಹಿಡಿಯುವ ಹಕ್ಕು.
ಪರಿಚ್ಛೇಧ 42 : ಸರಕಾರ ಮಕ್ಕಳ ಹಕ್ಕುಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡಬೇಕು.
ಪರಿಚ್ಛೇಧ 43 : ಮಕ್ಕಳ ಹಕ್ಕುಗಳ ಬಗ್ಗೆ ಒಪ್ಪಿ ವಿವಿಧ ಹಂತದಲ್ಲಿ, ವಿವಿಧ ಸಮಿತಿಗಳನ್ನು ರಚಿಸಿ ಪ್ರಗತಿ ಪಡಿಸಬೇಕು.
ಪರಿಚ್ಛೇಧ 44 : ಮಕ್ಕಳ ಹಕ್ಕುಗಳ ಜಾರಿ ಕುರಿತ ವರದಿಯನ್ನು ವಿಮರ್ಶೆ ಮಾಡಿ ವಿಶ್ವಸಂಸ್ಥೆಗೆ ಒಪ್ಪಿಸುವುದು.
ಪರಿಚ್ಛೇಧ 45 : ಪರ್ಯಾಯ ವರದಿಗಳನ್ನು ಇತರ ಸಂಘಸಂಸ್ಥೆಗಳ ಸಹಕಾರದಿಂದ ಸಲಹೆ ಪಡೆದು ವಿಶ್ವಸಂಸ್ಥೆಗೆ ಕಳುಹಿಸುವುದು.
ಪರಿಚ್ಛೇಧ 46 : ಮಕ್ಕಳ ಹಕ್ಕುಗಳ ಈ ಅಂತರಾಷ್ಟ್ರೀಯ ಒಡಂಬಡಿಕೆ ಸಹಿ ಹಾಕಲು ಎಲ್ಲಾ ದೇಶಗಳಿಗೆ ಅವಕಾಶವಿದೆ.
ಪರಿಚ್ಛೇಧ 47 : ಒಡಂಬಡಿಕೆಯನ್ನು ಒಪ್ಪಿದ ಮೇಲೆ ಆ ಪ್ರತಿಯು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಬಳಿ ಇಡಲ್ಪಡುತ್ತದೆ.
ಪರಿಚ್ಛೇಧ 48 : ಎಲ್ಲಾ ರಾಷ್ಟ್ರಗಳಿಗೆ ಈ ಒಡಂಬಡಿಕೆಯನ್ನು ತಿಳಿದು ಒಪ್ಪಲು ಸ್ವಾತಂತ್ರ್ಯವಿದೆ.
ಪರಿಚ್ಛೇಧ 49 : ಯಾವುದೇ ರಾಷ್ಟವು ಈ ಒಡಂಬಡಿಕೆಯನ್ನು ಒಪ್ಪಿ ಸಹಿ ಮಾಡಿ ನೀಡಿದ 30 ದಿನಗಳ ನಂತರ ಅದು ಜಾರಿಗೆ ಬರುತ್ತದೆ.
ಪರಿಚ್ಛೇಧ 50 : ಈ ಒಡಂಬಡಿಕೆಗೆ ಸೂಕ್ತ ತಿದ್ದುಪಡಿ ಸೂಚಿಸಲು ಎಲ್ಲಾ ಸದಸ್ಯ ರಾಷ್ಟಗಳಿಗೆ ಅವಕಾಶವಿದೆ.
ಪರಿಚ್ಛೇಧ 51 : ಈ ಒಡಂಬಡಿಕೆಗೆ ತಕರಾರು ಇದ್ದಲ್ಲಿ, ಒಪ್ಪಿಗೆಯಾಗದಿದ್ದಲ್ಲ ವಿಶ್ವಸಂಸ್ಥೆಗೆ ತಿಳಿಸಬೇಕು.
ಪರಿಚ್ಛೇಧ 52 : ಯಾವುದಾದರೂ ರಾಷ್ಟ್ರ ಸದಸ್ಯತ್ವದಿಂದ ರಾಜೀನಾಮೆ ನೀಡುವುದಿದ್ದರೆ ಪ್ರಧಾನ ಕಾರ್ಯದರ್ಶಿಗಳಿಗೆ ತಿಳಿಸಬೇಕು.
ಪರಿಚ್ಛೇಧ 53 : ಒಡಂಬಡಿಕೆಯ ಮುಖ್ಯಪ್ರತಿ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಗಳ ಬಳಿ ಇರುತ್ತದೆ. ಅವರೇ ಇದರ ಮೇಲ್ವಿಚಾರಕರು.
ಪರಿಚ್ಛೇಧ 54 : ಒಡಂಬಡಿಕೆಯು ಅರೇಬಿಕ್,ಚೈನೀಸ್, ಇಂಗ್ಲೀಷ್, ಫ್ರೆಂಚ್, ರಷ್ಯನ್ ಮತ್ತು ಸ್ಪ್ಯಾನೀಷ್ ಭಾಷೆಯಲ್ಲಿ ವಿಶ್ವಸಂಸ್ಥೆಯಲ್ಲಿ ಇದೆ.

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ :ಎಡಿಎಂ2(2) ಅನುಮತಿ03/2015-16 ದಿನಾಂಕ: 07.09.2015

**-:: ಸುತ್ತೋಲೆ ::-**

ವಿಷಯ: ರಾಜ್ಯದಾದ್ಯಂತ ಎಲ್ಲಾ ಸರಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಹಕ್ಕುಗಳ ಕ್ಲಬ್" ರಚಿಸಿ ಕಾರ್ಯರೂಪಕ್ಕೆ ತರುವ ಕುರಿತು.

ಉಲ್ಲೇಖ:1) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು, ಇವರ ಸುತ್ತೋಲೆ ಸಂಖ್ಯೆ: ಅ2(2) ಶಾ.ಮ.ದ್ದೆ.ಶಿ.ನಿ. -1/2007-08, ದಿನಾಂಕ: 30.08.2009 ರ ಸೂಚನೆ: 8 ರಲ್ಲಿ ತಿಳಿಸಿದಂತೆ.

2) ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ, ಕರ್ನಾಟಕ, ಇವರ ಪತ್ರ ಸಂಖ್ಯೆ: ಸಶಿಅ/ಒಬಿಎಸ್‌ಸಿ/ಮಕ್ಕಳ ಹಕ್ಕು/2009-10, ದಿನಾಂಕ: 23.02.2009 ಸುತ್ತೋಲೆಯಲ್ಲಿ ಪ್ರತಿ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ಸ್ಥಾಪಿಸುವ ಕುರಿತು ವಿವರವಾಗಿ ತಿಳಿಸಿದಂತೆ.

3) ದಿನಾಂಕ: 30.06.2011 ರಂದು ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಸನ್ಮಾನ್ಯ ಶ್ರೀ.ಶಿವರಾಜ ಪಾಟೀಲ್, ಇವರ ನೇತೃತ್ವದ ಸಮುದಾಯಿಕ (ಕೋರ್) ಸಮಿತಿ, ಬಾಲ್ಯ ವಿವಾಹ ತಡೆ ಕುರಿತು ಸಲ್ಲಿಸಿದ ವರದಿಯಂತೆ ಕರ್ನಾಟಕ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಗೆ ಸೂಚಿಸಿದ ಶಿಫಾರಸ್ಸು ಅಧ್ಯಾಯ(5)ರ ಸಂಖ್ಯೆ 2-2ರ (9)ರಲ್ಲಿ ಪುಟ 123, 146 ಸೂಚಿಸಿದಂತೆ ಹಾಗೂ ಭಾಗ-2 ಕ್ರಿಯಾಯೋಜನೆಯ ಕ್ರ.ಸಂ.16ರಲ್ಲಿ (ಪುಟ 159)ರಲ್ಲಿ ಸೂಚಿಸಿದಂತೆ.

**************

ಮಕ್ಕಳು ಯಾವುದೇ ದೇಶದ ಅತ್ಯಂತ ಅಮೂಲ್ಯ ಸಂಪತ್ತು. ಎಲ್ಲಾ ಮಕ್ಕಳನ್ನೂ ಶಾಲೆಗೆ ದಾಖಲಿಸಿ ಹತ್ತನೇ ತರಗತಿಯವರೆಗೆ ನಿರಂತರ ಶಾಲಾ ಶಿಕ್ಷಣ ಪಡೆಯುವಂತೆ ಮಾಡಬೇಕು. ಮಕ್ಕಳ ಶಿಕ್ಷಣ ದೇಶದ ಅಭಿವೃದ್ಧಿಯ ಪ್ರಮುಖ ಸೂಚ್ಯಂಕ. 2013ರ "ರಾಷ್ಟ್ರೀಯ ಮಕ್ಕಳ ನೀತಿ"ಯಲ್ಲಿ ತಿಳಿಸಿರುವಂತೆ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಬೇಕು. ನಮ್ಮ ದೇಶ, ನಮ್ಮ ರಾಜ್ಯ ಹಾಗೂ ಜಿಲ್ಲೆಯಲ್ಲಿ ಹುಟ್ಟಿದ ಪ್ರತಿಯೊಂದು ಮಗು 18 ವರ್ಷ ತುಂಬುವ ತನಕ ತಮ್ಮ ಹಕ್ಕುಗಳನ್ನು ಅನುಭವಿಸುವಂತಾಗಬೇಕು. ಇದರಲ್ಲಿ ಸಮಾಜದ ಪ್ರತಿಯೊಬ್ಬ ನಾಗರಿಕ, ಶಿಕ್ಷಕ, ಪೋಷಕ, ಅಧಿಕಾರಿ, ಪ್ರಜಾಪ್ರತಿನಿಧಿ, ನಾಗರಿಕ ಸಂಘ ಸಂಸ್ಥೆ ಮತ್ತು ಶಾಲೆಯ ಪಾತ್ರ ಬಹಳ ಪ್ರಮುಖವಾದದ್ದು. ಮಕ್ಕಳು ಅವರ ಹಕ್ಕುಗಳನ್ನು ಅನುಭವಿಸಿದಾಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಹೊಂದಲು ಸಾಧ್ಯ.

ಈ ಹಿನ್ನೆಲೆಯಲ್ಲಿ **"ಮಕ್ಕಳ ಹಕ್ಕುಗಳ ಒಡಂಬಡಿಕೆ"**ಗೆ ವಿಶ್ವಸಂಸ್ಥೆಯು 1989 ನವೆಂಬರ್ 20ರಂದು ಅಂಗೀಕಾರ ಪಡೆದು 165 ರಾಷ್ಟ್ರಗಳ ಒಪ್ಪಿಗೆ ಪಡೆದಿದೆ. ಭಾರತ ಸರ್ಕಾರವು 1992 ಡಿಸೆಂಬರ್ 11ರಂದು ಈ ಒಡಂಬಡಿಕೆಗೆ ಸಹಿ ಮಾಡಿದೆ. ಇದರಂತೆ ಭಾರತದಲ್ಲಿ ಹುಟ್ಟಿದ ಪ್ರತಿಯೊಂದು ಮಗು **"ತನ್ನ ಹಕ್ಕುಗಳನ್ನು ಅನುಭವಿಸುವಂತಾಗಲು"** ಎಲ್ಲಾ ಅವಕಾಶದೊಂದಿಗೆ ಸೂಕ್ತ ರೀತಿಯಲ್ಲಿ ಕಾನೂನು ತಿದ್ದುಪಡಿಯೊಂದಿಗೆ ಕ್ರಮ ಕೈಗೊಳ್ಳುತ್ತೇವೆ ಎಂದು ಒಪ್ಪಿಕೊಂಡಿದೆ. ಪ್ರಸ್ತುತ 196 ರಾಷ್ಟ್ರಗಳು ಈ ಒಡಂಬಡಿಕೆಯನ್ನು ಒಪ್ಪಿ ಅನುಷ್ಠಾನ ಮಾಡುತ್ತಿವೆ. ಅದರಂತೆ ನಮ್ಮ ದೇಶದಲ್ಲಿ ಮಕ್ಕಳ ನ್ಯಾಯ ಕಾಯಿದೆ, ಬಾಲ್ಯವಿವಾಹ, ಜೀತಪದ್ಧತಿ ನಿಷೇಧ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಮುಂತಾದ ಹಲವಾರು ಕಾನೂನುಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ ಮಕ್ಕಳಿಗೆ ಹಲವು ಹಕ್ಕುಗಳನ್ನು ನೀಡಿದೆ. ಅದರಲ್ಲಿ ಮಕ್ಕಳಿಗೆ ಅಗತ್ಯವಾಗಿ ನೀಡಲೇಬೇಕಾದ 4 ಪ್ರಮುಖ ಹಕ್ಕುಗಳು ಇಂತಿವೆ. 1)ಬದುಕುವ ಹಕ್ಕು 2) ರಕ್ಷಣೆಯ ಹಕ್ಕು 3)ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು 4) ಭಾಗವಹಿಸುವ ಹಕ್ಕು.

ಮಕ್ಕಳು ಶಾಲೆಯ ಕಲಿಕೆಯಿಂದ ವಂಚಿತರಾಗಬಾರದು. ಸಂವಿಧಾನದ ವಿಧಿ 21 'ಎ'ರಂತೆ 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕಿದೆ. 2009 ಶಿಕ್ಷಣ ಮೂಲಭೂತ ಹಕ್ಕಿನ ಕಾಯ್ದೆಯ ಆಶಯದಂತೆ 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳು ಕಡ್ಡಾಯವಾಗಿ ಶಾಲಾ ಶಿಕ್ಷಣ ಪಡೆಯಲೇಬೇಕು. ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ **ಇಂದಿನ ಮಕ್ಕಳನ್ನು ಇಂದಿನ ಪ್ರಜೆಗಳೆಂದೇ ಕಾಣಬೇಕು**. ದೇಶದ ಎಲ್ಲ ಪ್ರಜೆಗಳಿಗಿದ್ದಂತೆ ಅವರಿಗೂ ಸಂವಿಧಾನದಲ್ಲಿ ಹೇಳಿರುವ ಎಲ್ಲಾ ಹಕ್ಕುಗಳನ್ನು ಕೊಡಮಾಡಬೇಕಾದ ಕರ್ತವ್ಯ ಸರ್ಕಾರ ಮತ್ತು ಸರ್ಕಾರವನ್ನು ಪ್ರತಿನಿಧಿಸುವ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರದ್ದು. ಈ ಮಕ್ಕಳ ಶೈಕ್ಷಣಿಕ ಹಕ್ಕುಗಳನ್ನು ಜಾರಿಮಾಡುವ ಜೊತೆಜೊತೆಯಲ್ಲಿಯೇ ಮಕ್ಕಳ ಇತರ ಹಕ್ಕುಗಳನ್ನು ಮಾನ್ಯ ಮಾಡುವ ಮೂಲಕ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್‌ಗಳಿಗೆ, ಶಿಕ್ಷಕವೃಂದ, ಎಸ್.ಡಿ.ಎಮ್.ಸಿ, ಗ್ರಾಮ ಪಂಚಾಯತಿ, ಪೋಷಕರು ಮತ್ತು ಸಮುದಾಯಕ್ಕೆ ಪ್ರಮುಖವಾದ ಸ್ಥಾನವಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಸಾಧಿಸಲು ಹಾಗೂ ಬಾಲಕಾರ್ಮಿಕ ಪದ್ಧತಿ, ಜೀತ ಪದ್ಧತಿ, ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟವನ್ನು ನಿರ್ಮೂಲನೆ ಮಾಡಲು ಸರ್ವ ಶಿಕ್ಷಣ ಅಭಿಯಾನ, ಕಾರ್ಮಿಕ ಇಲಾಖೆ ಹಾಗೂ ಇತರ ಇಲಾಖೆಗಳೊಂದಿಗೆ ಸಮನ್ವಯತೆ ಹಾಗೂ ಸಹಭಾಗಿತ್ವ ಸಾಧಿಸಿ ಪರಸ್ಪರ ಕಾರ್ಯಕ್ರಮ ಹಮ್ಮಿಕೊಳ್ಳಲು ಎಲ್ಲಾ ಹಂತದಲ್ಲಿ ಸಮಿತಿಯನ್ನು ರಚಿಸಲು ತಿಳಿಸಿದೆ. ಶಾಲಾಮಟ್ಟದಲ್ಲಿ 'ಮಕ್ಕಳ ಹಕ್ಕುಗಳ ಕ್ಲಬ್' ರಚನೆ ಇದರಲ್ಲಿ ಪ್ರಮುಖವಾದುದು.

**ಮಕ್ಕಳ ಹಕ್ಕುಗಳ ಕ್ಲಬ್: "ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳೇ ರಚಿಸಿ ನಡೆಸುವ ಮಕ್ಕಳ ಸಮಿತಿ".**
**"ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್" ಅತಿ ಅವಶ್ಯಕ**

**ಗುರಿ: "ಪ್ರತಿ ಶಾಲೆಯಲ್ಲಿ 100% ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಖಾತ್ರಿಪಡಿಸಿ ಶಾಲೆ ಮತ್ತು ಸಮುದಾಯವನ್ನು "ಮಕ್ಕಳ ಸ್ನೇಹಿ" ಯನ್ನಾಗಿ ಪರಿವರ್ತಿಸಿ, ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯನಿರ್ವಹಿಸುವುದು".**

**ಉದ್ದೇಶ:** (1) ವಿದ್ಯಾರ್ಥಿಗಳಲ್ಲಿ ಮಕ್ಕಳ ಹಕ್ಕು ಕರ್ತವ್ಯಗಳ ಅರಿವು ಮೂಡಿಸುವುದು ಹಾಗೂ ಅವು ದೊರೆಯುವ ವಾತಾವರಣ ನಿರ್ಮಾಣ ಮಾಡುವುದು.

(2) ಶಿಕ್ಷಕ ಹಾಗೂ ಶಿಕ್ಷಕೇತರ ವರ್ಗದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮತ್ತು ಮಕ್ಕಳ ಹಕ್ಕುಗಳಿಗೆ ಬದ್ಧರಾಗಲು ಕ್ರಮ ಕೈಗೊಳ್ಳುವುದು.

(3) ಎಲ್ಲಾ ಮಕ್ಕಳಿಗೂ ಅವರ ಹಕ್ಕುಗಳು ಸಂಪೂರ್ಣ ಪ್ರಮಾಣದಲ್ಲಿ ದೊರಕುವಂತಹ ವಾತಾವರಣ ಸೃಷ್ಟಿಸುವುದು.

(4) ಮಕ್ಕಳಲ್ಲಿ ನಾಯಕತ್ವ ಬೆಳವಣಿಗೆ.

(5) ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಮತ್ತು ಪಂಚಾಯತಿಗಳಿಗೆ, ಶಾಲೆ ಹಾಗೂ ವಿದ್ಯಾರ್ಥಿಗಳ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡುವ ಹಾಗೂ ಸೂಕ್ತ ಕ್ರಮಗಳಿಗೆ ಒತ್ತಾಯಿಸುವ ಕೊಂಡಿಯಾಗುವುದು.

**ಮಕ್ಕಳ ಹಕ್ಕುಗಳ ಕ್ಲಬ್‌ಗಳ ರಚನೆ :-**

ಶಾಲೆ ಮತ್ತು ಸಮುದಾಯ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಹಲವು ಕಾರ್ಯಕ್ರಮ ನಡೆಸುವುದು. ಇದರ ಉಪಯೋಗವನ್ನು ಅರ್ಥ ಮಾಡಿಕೊಂಡು ಮಕ್ಕಳ ಮತ್ತು ಸಮುದಾಯದ ಒಪ್ಪಿಗೆ ಪಡೆದು ಮಕ್ಕಳ ಹಕ್ಕುಗಳ ಕ್ಲಬ್ ರಚಿಸುವುದು.

4ನೇ ತರಗತಿಯಿಂದ ಪ್ರಾರಂಭಿಸಿ ಪ್ರತಿ ತರಗತಿಯಿಂದ ಇಬ್ಬರು ಪ್ರತಿನಿಧಿಗಳ (ಗಂಡು ಮತ್ತು ಹೆಣ್ಣು ಮಕ್ಕಳು ಇದ್ದಲ್ಲಿ ಒಬ್ಬ ಹುಡುಗ ಮತ್ತು ಒಬ್ಬ ಹುಡುಗಿಯ) ಆಯ್ಕೆ ಕಡ್ಡಾಯ. ಈ ಕ್ಲಬ್‌ಗೆ 4 ಮಕ್ಕಳನ್ನು ನಿರ್ದೇಶಕರನ್ನಾಗಿ

ಮಕ್ಕಳೇ ಆಯ್ಕೆ ಮಾಡಬೇಕು. ಅವರು ಪ್ರತಿ 2 ತಿಂಗಳಿಗೊಮ್ಮೆ ಬದಲಾಗಬೇಕು. ಕ್ಲಬ್ ನಡೆಸುವ ಸಂಪೂರ್ಣ ಜವಾಬ್ದಾರಿ ಈ ನಿರ್ದೇಶಕರದು. ಕ್ರಿಯಾಶೀಲ ಶಿಕ್ಷಕರೊಬ್ಬರನ್ನು ಇದರ ಸಂಚಾಲಕರಾಗಿ, ಮುಖ್ಯ ಶಿಕ್ಷಕರು ಮತ್ತು ಮಕ್ಕಳು ಸೇರಿ ಆಯ್ಕೆ ಮಾಡಬೇಕು. ಕ್ಲಬ್‌ನ ಪ್ರಮುಖ ಸದಸ್ಯರಾಗಿ ಪ್ರತಿ ತರಗತಿಯಿಂದ ಇಬ್ಬರು ಅಥವಾ ನಾಲ್ಕು ಮಕ್ಕಳನ್ನು (ಶಾಲೆಯಲ್ಲಿ ಒಟ್ಟು 25 ರಿಂದ 30 ಮಕ್ಕಳು) ಆಯಾ ತರಗತಿಯ ಮಕ್ಕಳೇ ಆಯ್ಕೆ ಮಾಡುವುದು. ಶಾಲೆಯ ಇತರ ಎಲ್ಲಾ ಮಕ್ಕಳು ಕ್ಲಬ್‌ನ ಸಾಮಾನ್ಯ ಸದಸ್ಯರಾಗಿರುತ್ತಾರೆ. ಶಾಲಾ ಮುಖ್ಯೋಪಾಧ್ಯಾಯರು, ಎಸ್.ಡಿ.ಎಮ್.ಸಿ. ಅಧ್ಯಕ್ಷರು ಹಾಗೂ ಒಬ್ಬರು ಪೋಷಕರು ಪ್ರೋತ್ಸಾಹಕ ಸದಸ್ಯರಾಗಿ ಕಾರ್ಯನಿರ್ವಹಿಸುವುದು.

**ಮಕ್ಕಳ ಹಕ್ಕುಗಳ ಕ್ಲಬ್ ನ ಚಟುವಟಿಕೆಗಳು :-**

ಆಯಾ ಶಾಲೆಗೆ ಸಂಬಂಧಿಸಿದ ಸಮುದಾಯ, ಪರಿಸರ, ಚರಿತ್ರೆ ಮತ್ತು ಪ್ರಗತಿ ಆಧರಿಸಿ ಕ್ಲಬ್‌ಗಳು ವಿವಿಧ ಚಟುವಟಿಕೆಗಳನ್ನು ನಿರ್ಧರಿಸಿ ನಡೆಸುವುದು. ಕೆಲವು ಸೂಚಿತ ಚಟುವಟಿಕೆಗಳು ಇಂತಿವೆ.

1) ಪ್ರತಿ ವಿದ್ಯಾರ್ಥಿಗೂ ಮಕ್ಕಳ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮ ಮಾಡುವುದು.
2) ಮಕ್ಕಳಿಗೆ ಶಾಲೆಯಲ್ಲಿ ಮತ್ತು ಹೊರಗೆ ತಮ್ಮ ಮೇಲಾಗುವ ಅನ್ಯಾಯ, ದೌರ್ಜನ್ಯ, ಹಿಂಸೆ, ಶೋಷಣೆ, ಮೋಸ, ಒಟ್ಟಿನಲ್ಲಿ ತಮ್ಮ ಹಕ್ಕುಗಳ ಉಲ್ಲಂಘನೆಯಾದಲ್ಲಿ ಅದನ್ನು ಗುರುತಿಸಲು, ಸೂಕ್ತ ವಿಧಾನದಲ್ಲಿ ಪ್ರತಿಭಟಿಸಲು, ದೂರು ದಾಖಲು ಮಾಡಲು ಅರಿವು ಮೂಡಿಸುವುದು.
3) ಮಕ್ಕಳಿಗೆ ತಮ್ಮ ಮೇಲಲ್ಲದೆ ಇತರರ ಮೇಲೆ ಇಂತಹ ಹಕ್ಕುಗಳ ಉಲ್ಲಂಘನೆಯಾದಾಗ ಅದನ್ನು ಗುರುತಿಸಿ, ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಲು ಪೋಷಕವಾಗುವ ಚಟುವಟಿಕೆಗಳು.
4) ಶಾಲೆಯಲ್ಲಿ ದೂರು ಪೆಟ್ಟಿಗೆ, ಪ್ರಶ್ನೆಪೆಟ್ಟಿಗೆ ಸ್ಥಾಪಿಸಲು ಮತ್ತು ಅಲ್ಲಿ ಬರುವ ಪ್ರಶ್ನೆ ದೂರುಗಳನ್ನು ಸೂಕ್ತ ವಿಧಾನದಲ್ಲಿ ಮುಖ್ಯೋಪಾಧ್ಯಾಯರು ಪರೀಕ್ಷಿಸಲು ಮತ್ತು ಕ್ರಮ ಕೈಗೊಳ್ಳಲು ಕ್ಲಬ್ ಸಹಕರಿಸುವುದು.
5) ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಕೆಲಸ ಮಾಡಿದ ಶಿಕ್ಷಕರನ್ನು ಗುರುತಿಸಿ ಗೌರವಿಸುವುದು.
6) ಶಾಲೆಗೆ ಬಾರದ / ಸೇರದ / ಹಾಜರಾಗದ ಮಕ್ಕಳನ್ನು ಗುರುತಿಸಿ ಸೂಕ್ತ ಅಂಕಿ ಸಂಖ್ಯೆಯನ್ನು ಇಟ್ಟುಕೊಳ್ಳುವುದು. ಮತ್ತು ಆ ಮಕ್ಕಳನ್ನು ಶಿಕ್ಷಣಕ್ಕೆ ಕರೆತರುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು. ಯಾವುದಾದರೂ ಕುಟುಂಬ ಶಾಲೆಗೆ ಹೋಗುತ್ತಿರುವ ಮಕ್ಕಳನ್ನು ಕರೆದುಕೊಂಡು ಕೆಲಸ ಹುಡುಕಿಕೊಂಡು ವಲಸೆ ಹೋಗುವ ಆ ಮೂಲಕ ಮಕ್ಕಳ ಶಿಕ್ಷಣ ತಪ್ಪಿಸುವ ಸೂಚನೆ ಕಂಡುಬಂದಲ್ಲಿ ಅದನ್ನು ಸಂಬಂಧ ಪಟ್ಟವರ ಗಮನಕ್ಕೆ ತಂದು ಆ ಕುರಿತು ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದು.
7) ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ಪದ್ಧತಿ ಹಾಗೂ ದೇವದಾಸಿ ಆಚರಣೆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಸಂಬಂಧಿಸಿದವರ ಮನವೊಲಿಸಿ, ಅಗತ್ಯವೆನಿಸಿದಾಗ ಆಡಳಿತ, ಶಿಕ್ಷಣ ಇಲಾಖೆಗೆ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಗೂ ಪಂಚಾಯತಿಗೆ ದೂರು ನೀಡಲು ಪ್ರೇರಣೆ ನೀಡುವ ವಾತಾವರಣ ನಿರ್ಮಾಣ ಮಾಡುವುದು.
8) ಮಕ್ಕಳನ್ನು ಜೀತ / ಕೆಲಸ / ದುಡಿಮೆಗೆ ತಳ್ಳಿದ ಅಥವಾ ತಳ್ಳುವ ಪ್ರಸಂಗಗಳ ಬಗ್ಗೆ ತಕ್ಷಣ ಸಂಬಂಧಿಸಿದವರಿಗೆ ಮಾಹಿತಿ ರವಾನಿಸುವುದು.
9) ಮಕ್ಕಳಿಗಾಗಿ ಶಾಲೆಯಲ್ಲಿರುವ ವ್ಯವಸ್ಥೆಗಳಾದ ಗ್ರಂಥಾಲಯ, ಪ್ರಯೋಗಾಲಯ, ರೇಡಿಯೋ, ಆಟದ ಸಾಮಗ್ರಿಗಳು, ಶಾಲಾ ಕೊಠಡಿಗಳು, ಶಾಲಾ ಆವರಣ, ಶೌಚಾಲಯ ಇತ್ಯಾದಿಗಳ ದುರುಪಯೋಗ ಅಥವಾ ಅಸಮರ್ಪಕ ನಿರ್ವಹಣೆ, ವ್ಯವಸ್ಥೆಯಲ್ಲಿ ಕೊರತೆ ಕಂಡುಬಂದಲ್ಲಿ ಅದನ್ನು ಸಂಬಂಧಿಸಿದವರ ಗಮನಕ್ಕೆ ತರುವುದು.
10) ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪ್ರತಿವರ್ಷ ಮಕ್ಕಳ ಹಕ್ಕುಗಳ ಅನುಷ್ಠಾನದ ಬಗ್ಗೆ ವಿಶ್ಲೇಷಿಸಲೆಂದೇ ನಡೆಯುವ ಮಕ್ಕಳ ಗ್ರಾಮಸಭೆಯಲ್ಲಿ ಶಾಲಾ ಮಕ್ಕಳು ಭಾಗವಹಿಸಿ, ತಮ್ಮ ಸಮುದಾಯದಲ್ಲಿ ಮಕ್ಕಳಿಗೆ ತೊಂದರೆಯಾಗಿರುವ ವಿಚಾರ, ಸಂದರ್ಭಗಳ ಬಗ್ಗೆ ಪಂಚಾಯತಿಯವರ ಗಮನ ಸೆಳೆದು ಸೂಕ್ತ ಕ್ರಮಕ್ಕೆ ಆಗ್ರಹಿಸುವುದು.
11) ಮಕ್ಕಳ ಹಕ್ಕು ಸಂಬಂಧಿತ ಮೇಳ / ಚರ್ಚೆ, ಪ್ರಬಂಧ ರಚನೆ, ಭಿತ್ತಿಪತ್ರ ರಚನೆ, ಸಂಗೀತ ಸ್ಪರ್ಧೆಗಳು, ಸಾರ್ವಜನಿಕ ಸಭೆ, ಬೀದಿನಾಟಕ, ಮಕ್ಕಳ ಸಭೆ ಇತ್ಯಾದಿ ಸ್ಪರ್ಧೆಗಳ ಏರ್ಪಾಡು ಮಾಡುವುದು.
12) ಪ್ರತಿ ತಿಂಗಳಿಗೊಮ್ಮೆ ಎಸ್.ಡಿ.ಎಮ್.ಸಿ. ಸಭೆ ಆಗುವಂತೆ ನೋಡಿಕೊಳ್ಳುವುದು.

13) ಬಾಲಕಾರ್ಮಿಕ ಮತ್ತು ಬಾಲ್ಯವಿವಾಹ ಮುಕ್ತ ಸಮುದಾಯವನ್ನಾಗಿ ಮಾಡುವುದು.
14) ಪೊಲೀಸ್ ಇಲಾಖೆಗಳಲ್ಲಿ ನಡೆಯುವ 'ತೆರೆದ ಮನೆ' ಕಾರ್ಯಕ್ರಮಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ಹಾಗೂ ಇತರ ಮಕ್ಕಳೂ ಭಾಗವಹಿಸುವಂತೆ ನೋಡಿಕೊಳ್ಳುವುದು.
15) ತಮ್ಮ ಶಾಲಾ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ, ಗ್ರಾಮ ಪಂಚಾಯತ್, ಪೊಲೀಸ್ ಠಾಣೆ, ಮಹಿಳಾ ಸಂಘ, ಸ್ವ-ಸಹಾಯ ಸಂಘ, ಯುವಕ ಸಂಘಗಳಿಗೆ ಭೇಟಿ ನೀಡಿ ಮಾಹಿತಿ ಪಡೆದು ಶಾಲಾ ಅಭಿವೃದ್ಧಿಗೆ ಸಹಭಾಗಿತ್ವ ಪಡೆಯುವುದು.
16) ಮಕ್ಕಳು ಶಾಲೆ ಬಿಡುವುದನ್ನು (10ನೇ ತರಗತಿವರೆಗೆ) ಸಂಪೂರ್ಣ ತಡೆಗಟ್ಟುವುದು.

**ಕಾರ್ಯಕ್ರಮ ಸಂಘಟನೆ :-**

1) ಮಾರ್ಗದರ್ಶಕ ಶಿಕ್ಷಕರೊಂದಿಗೆ ಚರ್ಚಿಸಿ, ಕ್ಲಬ್‌ಗೆ ಮಕ್ಕಳ ಆಯ್ಕೆ ಮಾಡಲು ಕ್ರಮ ಕೈಗೊಳ್ಳುವುದು. ಸಂಚಾಲಕರು ವಾರ್ಷಿಕ ಯೋಜನೆಯನ್ನು ತಯಾರು ಮಾಡಲು ಮಾರ್ಗದರ್ಶನ ನೀಡುವುದು.
2) ಶಾಲಾ ಅನುದಾನದಲ್ಲಿ ಸ್ವಲ್ಪ ಹಣ ಅಥವಾ ಎನ್.ಪಿ.ಇ.ಜಿ.ಎಲ್. ನಲ್ಲಿ ಈ ಕಾರ್ಯತಂತ್ರ ಅಳವಡಿಸಿ ಸಂಪುಟ ಚಟುವಟಿಕೆಗೆ ಈ ಹಣ ಬಳಸುವುದು.
3) ವರ್ಷದ ಕೊನೆಗೆ ಮಕ್ಕಳ ಹಕ್ಕುಗಳ ಕ್ಲಬ್ ನಿರ್ವಹಿಸಿದ ಕಾರ್ಯದ ವರದಿಯನ್ನು ಸಿದ್ಧಪಡಿಸಿ, ಶಾಲಾ ಮ್ಯಾಗ್‌ಜಿನ್‌ನಲ್ಲಿ ಅಳವಡಿಸುವುದು.
4) ವಿಶೇಷವಾದ ಚಟುವಟಿಕೆಗಳು / ಸಾಧನೆಗಳನ್ನು ತಮ್ಮ ನಿಕಟ ಮೇಲಧಿಕಾರಿಗಳಿಗೆ ವರದಿ ಮಾಡುವುದು.

"ಮಕ್ಕಳ ಹಕ್ಕುಗಳ ಕ್ಲಬ್"ನಿಂದ ವಿವಿಧ ರೀತಿಯ ಚಟುವಟಿಕೆ/ಕಾರ್ಯಕ್ರಮ ಅಥವಾ ಯೋಜನೆಗಳನ್ನು ಹಮ್ಮಿಕೊಂಡು ಈ ಕೆಳಗಿನ ಅಂಶಗಳನ್ನು ಅಥವಾ "ಗುರಿ"ಯನ್ನು ಮುಟ್ಟುವುದು.

1. ಶಾಲೆಯಲ್ಲಿ ಎಲ್ಲಾ ಮಕ್ಕಳಿಗೆ/ಶಿಕ್ಷಕರಿಗೆ/ಪೋಷಕರಿಗೆ/ಸಿಬ್ಬಂದಿಯವರಿಗೆ/ಎಸ್.ಡಿ.ಎಮ್.ಸಿ./ ಸಮುದಾಯ/ ಗ್ರಾಮ ಪಂಚಾಯತಿಗಳಿಗೆ "ಮಕ್ಕಳ ಹಕ್ಕುಗಳು" ಮತ್ತು ಅದರ ಹಿನ್ನೆಲೆಯನ್ನು ಸಂಪೂರ್ಣವಾಗಿ ಪರಿಚಯಿಸುವುದು ಹಾಗೂ ಅದು ಅನುಷ್ಠಾನದಲ್ಲಿರುವಂತೆ ಮಾಡುವುದು.
2. ತಮ್ಮ ಶಾಲೆಯಲ್ಲಿ 100% ದಾಖಲಾತಿ ಮತ್ತು 100% ಹಾಜರಾತಿ ಆಗುವಂತೆ ಮಾಡುವುದು.
3. ಮಕ್ಕಳು ಶಾಲೆ ಬಿಡುವುದನ್ನು 100% ನಿಲ್ಲುವಂತೆ ಮಾಡುವುದು.
4. ಎಲ್ಲಾ ಶಾಲೆಗಳನ್ನು 'ಮಕ್ಕಳ ಸ್ನೇಹಿ' ಶಾಲೆಗಳಾಗಿ ಪರಿವರ್ತಿಸಿ ಶಾಲೆಯ ಎಲ್ಲಾ ಚಟುವಟಿಕೆ, ಸಮಾರಂಭಗಳು "ಮಕ್ಕಳ ಹಕ್ಕುಗಳ ಕ್ಲಬ್" ಮುಖಾಂತರ ಕಾರ್ಯ ನಿರ್ವಹಿಸುವಂತೆ ಮಾಡುವುದು.
5. ತಮ್ಮ ಶಾಲಾ ವ್ಯಾಪ್ತಿಯಲ್ಲಿ ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯವಿವಾಹ ಸಂಪೂರ್ಣವಾಗಿ ನಿಲ್ಲುವಂತೆ ಮಾಡುವುದು.
6. ಶಾಲೆ/ ಎಸ್.ಡಿ.ಎಮ್.ಸಿ./ಗ್ರಾಮ ಪಂಚಾಯತಿ/ ನಾಗರಿಕ ಸಂಘ ಸಂಸ್ಥೆಗಳು/ಯುವಕ ಸಂಘ/ಮಹಿಳಾ ಸಂಘ/ಇತರ ಎಲ್ಲಾ ಸ್ಥಳೀಯ ಇಲಾಖೆಗಳು ಒಂದಾಗಿ "ಶಾಲೆ" ಮತ್ತು "ಶಿಕ್ಷಣದ" ಜವಾಬ್ದಾರಿಯನ್ನು ಪಡೆದು ಸಮನ್ವಯತೆಯಿಂದ ಕೆಲಸ ಮಾಡುವುದು.
7. ಪ್ರತಿ ಶಾಲೆಯಲ್ಲಿ ಎಲ್ಲಾ ಮಕ್ಕಳು ಅವರ ಹಕ್ಕುಗಳನ್ನು ಅನುಭವಿಸಿ ಅಭಿವೃದ್ಧಿ ಹೊಂದಲು ಶಾಲೆ ಮತ್ತು ಮಕ್ಕಳ ಹಕ್ಕುಗಳ ಕ್ಲಬ್ ಪ್ರಮುಖ ವೇದಿಕೆಯಾಗುವುದನ್ನು ಖಾತ್ರಿಪಡಿಸುವುದು.

ಈ ಎಲ್ಲಾ ಕ್ರಮಗಳ ಮುಖಾಂತರ ರಾಜ್ಯದ ಎಲ್ಲಾ ಸರಕಾರಿ/ಖಾಸಗಿ/ಅನುದಾನಿತ /ಅನುದಾನರಹಿತ/ಶಾಲೆಗಳಲ್ಲಿ ಕಡ್ಡಾಯವಾಗಿ 'ಮಕ್ಕಳ ಹಕ್ಕುಗಳ ಕ್ಲಬ್' ಗಳನ್ನು ರಚಿಸಲು ಈ ಮೂಲಕ ಸೂಚಿಸಲಾಗಿದೆ. ಅಲ್ಲದೆ ಎಲ್ಲಾ ಬಿಇಓ, ಬಿಆರ್‌ಸಿ, ಸಿಆರ್‌ಪಿ ಮುಖ್ಯಶಿಕ್ಷಕರು, ಶಿಕ್ಷಕರುಗಳಿಗೆ ಪ್ರತ್ಯೇಕ ಆದೇಶ

ಹೊರಡಿಸಿ ತಪ್ಪದೇ ಪ್ರತಿ ಶಾಲೆಯಲ್ಲಿ 'ಮಕ್ಕಳ ಹಕ್ಕುಗಳ ಕ್ಲಬ್' ರಚಿಸಿ, ಅದೇ ರೀತಿಯಲ್ಲಿ ಅನುಷ್ಠಾನಕ್ಕೆ ತಂದು ಕಾರ್ಯಪ್ರವೃತ್ತರಾಗುವಂತೆ ಮಾಡಲು ಈ ಮೂಲಕ ಸೂಚಿಸಿದೆ. ಬಿಇಓ, ಬಿಆರ್‌ಸಿ, ಬಿಆರ್‌ಪಿ, ಸಿಆರ್‌ಸಿಯವರು ಮತ್ತು ಇಲಾಖೆಯ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಇದನ್ನು ಅವರ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಅನುಸರಣೆ ಮಾಡಲು ಸೂಚಿಸುವುದು ಹಾಗೂ ಕಡ್ಡಾಯವಾಗಿ ಪ್ರಗತಿ ಪರಿಶೀಲನೆ ಮಾಡುವುದು. ಇಲಾಖೆ ವ್ಯಾಪ್ತಿಯಲ್ಲಿ ನಡೆಯುವ ಸಭೆ ಅಥವಾ ಇತರ ಸಭೆಯಲ್ಲಿ ಎಲ್ಲಾ ಮುಖ್ಯಶಿಕ್ಷಕರು ತಮ್ಮ ಶಾಲೆಯಲ್ಲಿನ "ಮಕ್ಕಳ ಹಕ್ಕುಗಳ ಕ್ಲಬ್"ನ ಕಾರ್ಯ ಚಟುವಟಿಕೆಗಳ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವಂತೆ ಸೂಚಿಸಿದೆ.

ಮಕ್ಕಳ ಹಕ್ಕುಗಳ ಅನುಷ್ಠಾನ ಒಂದು ರಾಷ್ಟ್ರೀಯ ಕಾರ್ಯಕ್ರಮ. ವಿವಿಧ ಇಲಾಖೆಗಳು ಶಾಲಾ ಮಟ್ಟದಲ್ಲಿ ರಚಿಸಲು ತಿಳಿಸಿದ ಹಲವು ಸಮಿತಿಗಳನ್ನು ಅಂದರೆ ಸಾಂಸ್ಕೃತಿಕ ಕ್ಲಬ್, ಪರಿಸರ ಕ್ಲಬ್, ಮೀನಾ ತಂಡ, ಕಾನೂನು ಅರಿವು ಕ್ಲಬ್, ಗ್ರಾಹಕರ ವೇದಿಕೆ, ಕನ್ನಡ ಕ್ಲಬ್, ಗಣಿತ ಕ್ಲಬ್, ವಿಜ್ಞಾನ ಕ್ಲಬ್, ಸಮಾಜ ವಿಜ್ಞಾನ ಕ್ಲಬ್ ಮುಂತಾದುವನ್ನು "ಮಕ್ಕಳ ಹಕ್ಕುಗಳ ಕ್ಲಬ್"ನ ಅಡಿಯಲ್ಲಿ ತರಲು ಈ ಮೂಲಕ ಸೂಚಿಸಿದೆ. ಎಲ್ಲಾ ಸಮಿತಿಗಳು ಮಕ್ಕಳ ಹಕ್ಕುಗಳ ಭಾಗವಾದ್ದರಿಂದ ಮಕ್ಕಳ ಪಾರ್ಲಿಮೆಂಟನ್ನು ಹೊರತುಪಡಿಸಿ ಶಾಲಾ ಮಟ್ಟದಲ್ಲಿರುವ ವಿವಿಧ ಸಮಿತಿಗಳನ್ನು "ಮಕ್ಕಳ ಹಕ್ಕುಗಳ ಕ್ಲಬ್"ನ ಅಡಿಯಲ್ಲಿ ಉಪಸಮಿತಿಗಳನ್ನಾಗಿ ಮಾಡಿ **"ಮಕ್ಕಳ ಹಕ್ಕುಗಳ ಕ್ಲಬ್" ಅನ್ನು ಸಮಗ್ರವಾಗಿ ಮುಖ್ಯ ಸಮಿತಿಯಾಗಿ ರಚಿಸಲು ಸೂಚಿಸಿದೆ.**

**<u>ಮೇಲೆ ತಿಳಿಸಿದ ಮೂರು ಉಲ್ಲೇಖಗಳಲ್ಲಿ ಈಗಾಗಲೇ ಸೂಚಿಸಿರುವಂತೆ ಹಾಗೂ ಮೇಲಿನ ಗುರಿಮುಟ್ಟಲು ಕಡ್ಡಾಯವಾಗಿ ಪ್ರತಿ ಶಾಲೆಯಲ್ಲಿ "ಮಕ್ಕಳ ಹಕ್ಕುಗಳ ಕ್ಲಬ್"ರಚಿಸಲು ಸೂಚಿಸಿದ್ದು,</u>** ಪ್ರತಿ 2 ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ ವರದಿ ನೀಡಿ, ಜಿಲ್ಲಾ ಮಟ್ಟದ ಕ್ರೋಢೀಕೃತ ವರದಿಯನ್ನು ಉಪನಿರ್ದೇಶಕರು ಸಾ.ಶಿ.ಇ. ಇವರು ಈ ಕಛೇರಿಗೆ ಹಾಗೂ ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ಇವರಿಗೆ ನೀಡಲು ಈ ಮೂಲಕ ಸೂಚಿಸಿದೆ.

22/9/15
(ಕೆ.ಎಸ್ ಸತ್ಯಮೂರ್ತಿ)
ಆಯುಕ್ತರು
(ಸಾರ್ವಜನಿಕ ಶಿಕ್ಷಣ ಇಲಾಖೆ)

<u>ಇವರಿಗೆ:- ತಕ್ಷಣ ಕ್ರಮವಹಿಸಿ ಅನುಷ್ಠಾನ ಮಾಡಲು</u>

1) ರಾಜ್ಯದ ಎಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಆಡಳಿತ ಹಾಗೂ ಅಭಿವೃದ್ಧಿ) ಇವರಿಗೆ.
2) ರಾಜ್ಯದ ಎಲ್ಲಾ ಜಿಲ್ಲೆಯ ಉಪಸಮನ್ವಯಾಧಿಕಾರಿಗಳು, ಸರ್ವಶಿಕ್ಷಣ ಅಭಿಯಾನ.
3) ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರುಗಳಿಗೆ
4) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.

<u>ಪ್ರತಿ ಇವರಿಗೆ: ಮುಂದಿನ ಸೂಕ್ತ ಪ್ರತ್ಯೇಕ ಆದೇಶ ಹೊರಡಿಸಿ ಕಾಲಕಾಲಕ್ಕೆ ವರದಿ ತರಿಸಿ, ಪ್ರಗತಿ ಪರಿಶೀಲನೆ ಕೈಗೊಳ್ಳಲು.</u>

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ಬೆಂಗಳೂರು
2. ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಯಾ ಜಿಲ್ಲಾಮಟ್ಟದಲ್ಲಿ ಸೂಕ್ತ ಸಹಕಾರಕ್ಕೆ ಹಾಗೂ ಎಲ್ಲಾ ಜಿಲ್ಲೆಯ ಉಪನಿರ್ದೇಶಕರುಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸೂಚನೆ ನೀಡಲು.
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ.
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
5. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ.

**ಸಮಗ್ರ ಶಿಕ್ಷಣ ಕರ್ನಾಟಕ**

**ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ ನೃಪತುಂಗ ರಸ್ತೆ, ಬೆಂಗಳೂರು 01**

ಸಂಖ್ಯೆ: 190/ಸಶಿಕ/SCPCR/ಸುತ್ತೋಲೆ/2025-26 ದಿನಾಂಕ: 06.09.2025

# ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ -2016 (ಪರಿಷ್ಕರಣೆ 2023) ನ್ನು ಕಟ್ಟು ನಿಟ್ಟಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಪತ್ರ ಸಮಸಂಖ್ಯೆಯ ದಿನಾಂಕ: 02-06-2025

2. ಸದಸ್ಯರು , ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗ ಇವರ ಪತ್ರ ದಿನಾಂಕ: 02-08-2025

*******************

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದಲ್ಲಿನ ಮಕ್ಕಳ ರಕ್ಷಣೆಯ ಹಿತದೃಷ್ಟಿಯಿಂದ 2016 ರಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೊಳಿಸಿತು, ಅದರ ಪರಾಮರ್ಶೆ ಹಾಗೂ ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಸಂಖ್ಯೆ: 10208/2018 ರ ತನ್ನ ಆದೇಶ ದಿನಾಂಕ: 22/07/2020 ನಿರ್ದೇಶನದಂತೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಪರಷ್ಕರಿಸಿ ದಿನಾಂಕ: 14/12/2023 ರಲ್ಲಿ ಜಾರಿಗೊಳಿಸಲಾಯಿತು. ಸದರಿ ನೀತಿಯ ಅನುಷ್ಠಾನವು ಮಕ್ಕಳ ರಕ್ಷಣೆಯ ಹಿನ್ನಲೆಯಲ್ಲಿ ಮಹತ್ವದ ಪಾತ್ರವಹಿಸಲಿದ್ದು, ಈ ಸಂಬಂಧ ಪರಿಷ್ಕೃತ **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ -2016 (ಪರಿಷ್ಕರಣೆ 2023)"** ನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ಅಡಕದಲ್ಲಿರುವಂತೆ, ಅನುದಾನ ರಹಿತ /ಅನುದಾನಿತ/ಸರ್ಕಾರಿ ಮತ್ತು ರಾಜ್ಯ ಪಠ್ಯಕ್ರಮ, ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಶಾಲೆ/ ಸೈನಿಕ ಶಾಲೆ/ವಸತಿಶಾಲೆಗಳನ್ನೂ ಒಳಗೊಂಡಂತೆ ಕಟ್ಟುನಿಟ್ಟಾಗಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಉಪನಿರ್ದೇಶಕರು (ಆಡಳಿತ) ಮತ್ತು ಉಪ ನಿರ್ದೇಶಕರು (ಅಭಿವೃದ್ಧಿ) ರವರು ಕ್ರಮ ವಹಿಸಲು ಹಾಗೂ ಕಾಲ ಕಾಲಕ್ಕೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ.

ಎಲ್ಲಾ ವೃಂದದ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಶಾಲಾ ಭೇಟಿ ವರದಿಯಲ್ಲಿ ಅನುಪಾಲನೆ ಬಗ್ಗೆ ದಾಖಲು ಮಾಡಿ ಸೂಕ್ತ ಸಲಹೆ ಮಾರ್ಗದರ್ಶನ ನೀಡುವುದು. ಕ್ಲಸ್ಟರ್, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಹಂತದ ಪ್ರಗತಿ ಪರಿಶೀಲನಾ ಸಭೆಯಲ್ಲಿ "ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ -2016" (ಪರಿಷ್ಕರಣೆ 2023 ) ಅನುಷ್ಠಾನದ ಬಗ್ಗೆ ಪುನರಾವಲೋಕನ ಮಾಡುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

**ಸೂಕ್ತ ಕ್ರಮಕ್ಕಾಗಿ:**

1 ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ ರವರಿಗೆ.

2 ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ, ರವರಿಗೆ ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ರವರ ಮುಖಾಂತರ.

3 ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕರುಗಳಿಗೆ ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ.

**ಪ್ರತಿ: ಗೌರವಪೂರಕವಾಗಿ,**

- ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು ರವರಿಗೆ.
- ಸದಸ್ಯರು , ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು ರವರಿಗೆ.

## ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016, ಪರಿಷ್ಕರಣೆ–2023ನ್ನು ಅನುಷ್ಠಾನಗೊಳಿಸಿರುವ ವರದಿ.(2024–25)

| | |
|---|---|
| ರಿಗೆ,<br>ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು<br>ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ<br>______________________ಜಿಲ್ಲೆ<br>ಈ ವರದಿ ಸಲ್ಲಿಸಿದ<br>ದಿನಾಂಕ:__________ | ಮೂಲಕ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು<br>__________________ಜಿಲ್ಲೆ, ಹಾಗೂ<br>ಆಯಾ ಇಲಾಖೆಯ ತಾಲೂಕು ಅಥವಾ ಜಿಲ್ಲಾ ಮಟ್ಟದ ಅಧಿಕಾರಿಗಳ<br>ಮುಖಾಂತರ, ರಿಗೆ:__________________<br>ತಾಲೂಕು________________ಜಿಲ್ಲೆ__________<br>ವರದಿ ಅವಧಿ:____________ನಿಂದ:____________ವರೆಗೆ. |
| ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು/ಶಿಕ್ಷಣ ಸಂಸ್ಥೆಯ ಹೆಸರು/ ವಿಳಾಸ | |
| ತಾಲೂಕು ಹಾಗೂ ಜಿಲ್ಲೆಯ ಹೆಸರು | |
| ಡೈಸ್ (ಡಿ.ಐ,ಎಸ್,ಇ) ಸಂಖ್ಯೆ. (ಇದ್ದಲ್ಲಿ) | |
| ಮುಖ್ಯೋಪಾಧ್ಯಾಯರ/ಪ್ರಾಂಶುಪಾಲರ/ ನಿಲಯ ಪಾಲಕರ ಹೆಸರು ಮತ್ತು ದೂರವಾಣಿ ಸಂಖ್ಯೆ | |
| ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು/ ಶಿಕ್ಷಣ ಸಂಸ್ಥೆಯಲ್ಲಿ ರಚಿಸಿದ "ಮಕ್ಕಳ ರಕ್ಷಣಾ ಸಮಿತಿ" ಯ ಮಕ್ಕಳ ರಕ್ಷಣಾಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ | |

ವಿ.ಸೂ: ಕೊನೆ ಪುಟದಲ್ಲಿ ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು/ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಹಾಗೂ ಶಿಕ್ಷಣ ಸಂಸ್ಥೆಯ "ಮಕ್ಕಳ ರಕ್ಷಣಾ ಸಮಿತಿ" ಯ, ಮಕ್ಕಳ ರಕ್ಷಣಾಧಿಕಾರಿಗಳ ಸಹಿ ಕಡ್ಡಾಯ. 18 ವರ್ಷದೊಳಗಿನ ಮಕ್ಕಳಿರುವ ಪ್ರತಿ ಶಾಲೆ/ಪ.ಪೂ. ಕಾಲೇಜು/ವಸತಿ ನಿಲಯ/ಶಿಕ್ಷಣ ಸಂಸ್ಥೆಗಳು ಈ ವರದಿಯನ್ನು ಪ್ರತಿ ವರ್ಷ ಡಿಸೆಂಬರ್ 25 ರ ಒಳಗಾಗಿ ನೀಡುವುದು.

| ಕ್ರ.ಸ | ವಿಷಯ | ಹೌದು | ಇಲ್ಲ | ಹೌದಾದರೆ ಯಾವಾಗ? ವಿವರ ಬರೆಯಿರಿ | ಇಲ್ಲವಾದರೆ ಯಾಕೆ? ಕಾರಣ ಸಹಿತ ಮುಂದೆ ಯಾವಾಗ ಮಾಡಿತ್ತೀರಿ? ವಿವರ ಬರೆಯಿರಿ. | ಅನುಷ್ಠಾನವಾಗಿರುವ ಬಗ್ಗೆ ಸಂಕ್ಷಿಪ್ತ ವಿವರ ಬರೆಯಿರಿ. (ಕೆಲವು ಛಾಯಾಚಿತ್ರ ಲಗತ್ತಿಸಿ) |
|---|---|---|---|---|---|---|
| 1. | ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು/ಶಿಕ್ಷಣ ಸಂಸ್ಥೆಯ ಆವರಣದಲ್ಲಿ **"ಮಕ್ಕಳ ಸಹಾಯವಾಣಿ–1098 ತುರ್ತು ರಕ್ಷಣೆಗೆ 112"** ರ ಕುರಿತು **ಶಾಶ್ವತ ಗೋಡೆ** ಬರಹವನ್ನು ನಿಗದಿತ ನಮೂನೆಯಲ್ಲಿಯೇ ಬರೆಯಿಸಲಾಗಿದೆಯಾ? | | | | | |
| 2. | ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು/ಶಿಕ್ಷಣ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023 ರನ್ವಯ ಸಂಸ್ಥೆಯಲ್ಲಿ **"ಮಕ್ಕಳ** | | | | | |

| | | | | | | |
|---|---|---|---|---|---|---|
| | **ರಕ್ಷಣಾ ನೀತಿ"** (CPP-Child Protection Policy) ಯನ್ನು ರಚಿಸಿ, ನಿಮ್ಮ ತಾಲೂಕು/ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಅನುಮೋದನೆ ಪಡೆದು ಅನುಷ್ಠಾನಕ್ಕೆ ತರಲಾಗಿದೆಯಾ? | | | | | |
| 3. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023 ರನ್ವಯ ಸಂಸ್ಥೆಯಲ್ಲಿ **"ಮಕ್ಕಳ ರಕ್ಷಣಾ ಸಮಿತಿ"** (CPC- Child Protection Committee) ಯನ್ನು ರಚಿಸಲಾಗಿದೆಯಾ? ***(ವಿಪತ್ತು ನಿರ್ವಹಣಾ ಸಮಿತಿ ಇದೇ ಆಗಿರುತ್ತದೆ)*** | | | | | |
| 4. | ಈ ಸಮಿತಿಯು ಪ್ರತಿ 03 ತಿಂಗಳಿಗೊಮ್ಮೆ **ಮಕ್ಕಳ ಸುರಕ್ಷತೆ, ಸುಭದ್ರತೆ ಹಾಗೂ ವಿಪತ್ತು ನಿರ್ವಹಣೆ, ಅನುಪಾಲನೆ** ಸೇರಿದಂತೆ ಸಭೆ ನಡೆಸಿದೆಯಾ? ***(3 ತಿಂಗಳಿಗೊಮ್ಮೆ– ವರ್ಷಕ್ಕೆ 4 ಸಭೆ ನಡೆಸಲೇಬೇಕು)*** | | | | | |
| 5. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು/ ಶಿಕ್ಷಕರು/ಸಿಬ್ಬಂದಿಗಳಿಂದ **"ಸಿಬ್ಬಂದಿ ಬದ್ಧತಾ ಪತ್ರ"** (Staff and Teacher's Endorsement) ವನ್ನು ಪಡೆಯಲಾಗಿದೆಯಾ? ***(ಪ್ರತಿ 2 ವರ್ಷಕ್ಕೊಮ್ಮೆ ಪ್ರತ್ಯೇಕವಾಗಿ ಸಿಬ್ಬಂದಿಗಳಿಂದ ಬದ್ಧತಾ ಪತ್ರ ಪಡೆಯಬೇಕು)*** | | | | | |
| 6. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಯಲ್ಲಿರುವ ಎಲ್ಲಾ ಮಕ್ಕಳಿಂದ **"ಮಕ್ಕಳ ಬದ್ಧತಾ ಪತ್ರ"** ವನ್ನು ದ್ವಿಪ್ರತಿಯಲ್ಲಿ ಪಡೆಯಲಾಗಿದೆಯಾ? ಒಂದು ಪ್ರತಿಯನ್ನು ಮಗುವಿನ **ಪೋಷಕರಿಗೆ ನೀಡಲಾಗಿದೆಯಾ**? | | | | | |
| 7. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ಶಿಕ್ಷಕರು/ಸಿಬ್ಬಂದಿಗಳ ಬಗ್ಗೆ **"ಪೊಲೀಸ್ ಇಲಾಖೆಯ ಪರಿಶೀಲನಾ ವರದಿ"** ಯನ್ನು ಪಡೆಯಲಾಗಿದೆಯಾ? | | | | | |

| | | | | | | |
|---|---|---|---|---|---|---|
| 8. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಯಲ್ಲಿ **"ಸಲಹಾ ಪೆಟ್ಟಿಗೆ"** (Suggestions Box) ಯನ್ನು ಮಕ್ಕಳಿಗೆ ನಿಲುಕುವ ಮತ್ತು ಸಿ.ಸಿ. ಕ್ಯಾಮರಾ ವ್ಯಾಪ್ತಿಗೆ **ಒಳಪಡದ** ಜಾಗದಲ್ಲಿ ಸ್ಥಾಪಿಸಲಾಗಿದೆಯಾ? | | | | | |
| 9. | **ಸಲಹಾ ಪೆಟ್ಟಿಗೆ** ಯನ್ನು ವಾರಕ್ಕೊಮ್ಮೆ ತೆರೆಯುತ್ತಿದ್ದೀರಾ? ಮಕ್ಕಳಿಂದ ಬಂದ ಸಲಹೆ/ದೂರುಗಳನ್ನು **ತಕ್ಷಣ ಪರಿಹರಿಸಿ/ಕ್ರಮ ಕೈಗೊಂಡು** ಅಥವಾ ಕ್ರಮಕ್ಕಾಗಿ ಆಯಾ ಇಲಾಖೆಗಳಿಗೆ ವಿಂಗಡಿಸಿ, ಕಳುಹಿಸಿ **ರಿಜಿಸ್ಟರ್** ನಲ್ಲಿ ನಡಾವಳಿ ದಾಖಲಿಸಲಾಗಿದೆಯೇ? | | | | | |
| 10. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಯಲ್ಲಿ **"ಮಕ್ಕಳ ಹಕ್ಕುಗಳ ಕ್ಲಬ್"** ಗಳನ್ನು ರಚಿಸಿ ಅನುಷ್ಠಾನಕ್ಕೆ ತರಲಾಗಿದೆಯಾ? | | | | | |
| 11. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಯ ಅಧಿಕಾರಿಗಳು, ಶಿಕ್ಷಕರು ಮತು ಸಿಬ್ಬಂದಿಗಳಿಗೆ ಮಕ್ಕಳ ಮೇಲೆ **"ದೈಹಿಕ, ಮಾನಸಿಕ, ಭಾವನಾತ್ಮಕವಾಗಿ ಹಲ್ಲೆ, ಹಿಂಸೆ ಮತ್ತು ಧರ್ಮ, ಜಾತಿ, ಬಣ್ಣ, ಲಿಂಗ, ಭಾಷೆ, ದೈಹಿಕ ಆಧಾರಿತ ತಾರತಮ್ಯ, ಅವಮಾನ ಹಾಗೂ ನಿರ್ಲಕ್ಷ್ಯ ಮಾಡುವುದು ನಿಷಿದ್ದ ಕಾನೂನು ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹ ಅಪರಾಧ"** ವೆಂದು ತಿಳಿಸಲಾಗಿದೆಯೇ? | | | | | |
| 12. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು**/ಶಿಕ್ಷಣ ಸಂಸ್ಥೆಯಲ್ಲಿನ ಮಕ್ಕಳು ***(ಗ್ರಾಮೀಣ ಪ್ರದೇಶವಾಗಿದ್ದಲ್ಲಿ ಮಾತ್ರ)*** **"ಮಕ್ಕಳ ಹಕ್ಕುಗಳ ಗ್ರಾಮಸಭೆ"** ಗಳಲ್ಲಿ ಭಾಗವಹಿಸಿದ್ದಾರಾ? | | | | | |
| 13. | **ಶಾಲೆ**/ **ವಸತಿ ನಿಲಯ**/ **ಪದವಿ ಪೂರ್ವ ಕಾಲೇಜು** /ಶಿಕ್ಷಣ ಸಂಸ್ಥೆಯಲ್ಲಿ **ಮಕ್ಕಳ ಸಹಾಯವಾಣಿ–1098/112,** .ಮಕ್ಕಳ ಹಕ್ಕುಗಳು, ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ತಿದ್ದುಪಡಿ–2019, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ/ಬಾಲ್ಯ ವಿವಾಹ ನಿಷೇಧ ಕಾಯ್ದೆ, ಇತರ ಕಾನೂನುಗಳ ಬಗ್ಗೆ ಹಾಗೂ **ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶ**, ಮಾದಕ ವ್ಯಸನ/ ಸಾಮಾಜಿಕ ಜಾಲತಾಣದ /ಸೈಬರ್ ಅಪರಾಧದ ಪರಿಣಾಮದ ಕುರಿತು ಮಕ್ಕಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆಯಾ? | | | | | |

**ಶಾಲೆ/ ಪದವಿ ಪೂರ್ವ ಕಾಲೇಜು/ ವಸತಿ ನಿಲಯ ಹಾಗೂ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ನಿರ್ವಹಿಸಲೇಬೇಕಾದ ಕಡತಗಳು ಹಾಗೂ ನಡಾವಳಿ ಪುಸ್ತಕಗಳನ್ನು ನಿರ್ವಹಿಸಿರವ ಬಗ್ಗೆ.**

| ಕ್ರ. ಸಂ | ಕಡತಗಳ ವಿವರ | ಹೌದು | ಇಲ್ಲ | ಹೌದಾದರೆ ಯಾವ ದಿನ/ತಿಂಗಳು/ ವರ್ಷದಿಂದ ನಿರ್ವಹಿಸಲಾಗಿದೆ | ಇಲ್ಲವಾದರೆ ಯಾಕೆ? ಕಾರಣ ಬರೆಯಿರಿ, ಮುಂದೆ ಯಾವಾಗ ಪ್ರಾರಂಬಿಸುತ್ತೀರಿ? |
|---|---|---|---|---|---|
| | **ನಿರ್ವಹಿಸಲೇಬೇಕಾದ ಕಡತಗಳು** | | | | |
| 1. | **ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು** ಶಿಕ್ಷಣ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023 ರನ್ವಯ ಸಂಸ್ಥೆಯಲ್ಲಿ **"ಮಕ್ಕಳ ರಕ್ಷಣಾ ನೀತಿ"** (CPP-Child Protection Policy) ಯನ್ನು ರಚಿಸಿ, ನಿಮ್ಮ ತಾಲೂಕು/ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಿದ, **ಮಕ್ಕಳ ರಕ್ಷಣಾ ನೀತಿ** ಮೂಲ ದಾಖಲೆ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳ ಕಡತ. | | | | |
| 2. | **ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು** ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲಾ ಮಕ್ಕಳಿಂದ **"ಮಕ್ಕಳ ಬದ್ಧತಾ ಪತ್ರ"** ವನ್ನು ಪಡೆದುಕೊಂಡಿರುವ ಪತ್ರಗಳನ್ನು ಪ್ರತ್ಯೇಕ ಕಡತದಲ್ಲಿ ನಿರ್ವಹಿಸಲಾಗಿದೆಯಾ? | | | | |
| 3. | **ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು** ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲಾ ಸಿಬ್ಬಂದಿಗಳಿಂದ **"ಸಿಬ್ಬಂದಿ ಬದ್ಧತಾ ಪತ್ರ"** ವನ್ನು ಪಡೆದು, **ಪ್ರತ್ಯೇಕ ಕಡತವನ್ನು** ನಿರ್ವಹಿಸಲಾಗಿದೆಯಾ? | | | | |
| 4. | **ಸಲಹಾ ಪಟ್ಟಿಗೆಗಳಿಗೆ ಬಂದ ಚೀಟಿಗಳನ್ನು ಎ4 ಕಾಗದದಲ್ಲಿ ಅಂಟಿಸಿ ಅವುಗಳಿಗಾಗಿ ಪ್ರತ್ಯೇಕ ಕಡತ ಇಡಲಾಗಿದೆಯಾ?** | | | | |
| 5. | **ಮಕ್ಕಳ ಹಕ್ಕುಗಳ ಕ್ಲಬ್ ರಚನೆಗೆ ಸಂಬಂದಿಸಿದ ಆದೇಶ/ಪತ್ರ/ ದಾಖಲೆಗಳ ಕಡತ ಇದೆಯಾ?** ***(ಪ್ರತಿ 2 ತಿಂಗಳಿಗೊಮ್ಮೆ ಈ ಕ್ಲಬ್ ನ ಸಭೆಯನ್ನು ಮಕ್ಕಳೇ ನಡೆಸಬೇಕು,)*** | | | | |
| | ನಿರ್ವಹಿಸಲೇಬೇಕಾದ ನಡಾವಳಿ ಪುಸ್ತಕಗಳು ರಿಜಿಸ್ಟರ್‌ಗಳು | | | | |
| 1. | **ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು** ಶಿಕ್ಷಣ ಸಂಸ್ಥೆಯ **"ಮಕ್ಕಳ ರಕ್ಷಣಾ ಸಮಿತಿ"** ಸಭೆಯ ಕಾರ್ಯಸೂಚಿಯನ್ವಯ ಪ್ರತ್ಯೇಕ **ರಿಜಿಸ್ಟರ್** ನಿರ್ವಹಿಸಿ ನಡಾವಳಿಗಳನ್ನು ಬರೆಯಲಾಗುತ್ತಿದೆಯಾ? (ವರ್ಷಕ್ಕೆ 4 ನಡಾವಳಿ ಇರಬೇಕು) | | | | |
| 2. | **"ಸಲಹಾ ಪೆಟ್ಟಿಗೆ"** ಯಲ್ಲಿ ಬಂದ ಮಕ್ಕಳ ಸಲಹೆಗಳ ಅನುಸಾರ ಕೈಗೊಂಡ ಪರಿಹಾರ/ಕ್ರಮಗಳ ನಡಾವಳಿ **ರಿಜಿಸ್ಟರ್** ನ್ನು ನಿರ್ವಹಿಸಲಾಗುತ್ತಿದೆಯಾ? ***(ವಾರಕ್ಕೆ ಒಂದು ಬಾರಿಯಂತೆ, ವರ್ಷಕ್ಕೆ 30 ಸಲ ಪೆಟ್ಟಿಗೆ ತೆರೆದಿರುವ ಬಗ್ಗೆ ದಾಖಲು/ಕ್ರಮದ ನಡಾವಳಿ ಬರೆದಿರಬೇಕು.)*** | | | | |
| 3. | **ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು** ಶಿಕ್ಷಣ **"ಮಕ್ಕಳ ಹಕ್ಕುಗಳ ಕ್ಲಬ್"** ಗಳ ನಡಾವಳಿಗಳಿಗಾಗಿ ನಡಾವಳಿ **ರಿಜಿಸ್ಟರ್** ನ್ನು ನಿರ್ವಹಿಸಲಾಗಿದೆಯಾ? (***ವರ್ಷಕ್ಕೆ 8 ಕಾರ್ಯಕ್ರಮ ನಡೆದಿರಬೇಕು.*** | | | | |
| 4. | **"ಪೋಷಕರ ಸಭೆ"** ಯ ನಡಾವಳಿಗಾಗಿ **ಪ್ರತ್ಯೇಕ ರಿಜಿಸ್ಟರ್** ಇದೆಯೇ? | | | | |
| 5. | ಮಕ್ಕಳ ಹಕ್ಕು, ಸಂರಕ್ಷಣೆ, ಮಕ್ಕಳ ಕಾನೂನುಗಳು, **ಸುರಕ್ಷಿತ ಸ್ಪರ್ಶ ಅಸುರಕ್ಷಿತ ಸ್ಪರ್ಶ** ಬಗ್ಗೆ ಮಾಹಿತಿ ನೀಡಿದ ಕಾರ್ಯಕ್ರಮ/ತಿಂಗಳಿಗೊಂದು ಕಾರ್ಯಕ್ರಮಗಳ ವರದಿ/ **ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ** ಮಕ್ಕಳು ಹಾಜರಾಗಿರುವ ವರದಿ/ ಗ್ರಾಮ ಪಂಚಾಯತಿ ಮಟ್ಟದ **ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಗೆ** ಮುಖ್ಯೋಪಾಧ್ಯಾಯರು ಅಥವಾ ಶಿಕ್ಷಕರು ಹಾಜರಾಗಿರುವ ವಿವರಗಳ ವರದಿ ಪುಸ್ತಕ ನಿರ್ವಹಿಸಲಾಗಿದೆಯಾ? | | | | |

## ಶಾಲೆ/ ಪದವಿ ಪೂರ್ವ ಕಾಲೇಜು/ ವಸತಿ ನಿಲಯಗಳ ವಾಹನ ನಿರ್ವಹಣೆಯಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ವರದಿ.

**(ಸರ್ವೋಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ (Civil) 13029 Of 1985 ರ ಶಾಲಾ ವಾಹನಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ನೀಡಿರುವ ಸೂಚನೆ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016, ಪರಿಷ್ಕರಣೆ–2023ರಲ್ಲಿ ತಿಳಿಸಿರುವಂತೆ)**

***(ಶಾಲಾ ವಾಹನ ಇದ್ದಲ್ಲಿ ಈ ಪುಟ ತುಂಬಿಸಿ, ಇಲ್ಲದಿದ್ದಲ್ಲಿ ಅನ್ವಯಿಸುವುದಿಲ್ಲ ಎಂದು ಬರೆದು ಕೊನೆಗೆ ಇಬ್ಬರ ಸಹಿ ಕಡ್ಡಾಯ)***

| ಕ್ರ.ಸಂ | ವಿಷಯ | ಹೌದು | ಇಲ್ಲ | ಹೌದಾದರೆ ಎಷ್ಟು? ವಿವರ ಬರೆಯಿರಿ. | ಅನುಷ್ಠಾನ ಮಾಡಿರುವ ಬಗ್ಗೆ ಸಂಕ್ಷಿಪ್ತ ಮಾಹಿತಿ ಬರೆಯಿರಿ. (ಷರಾ/ಟಿಪ್ಪಣಿ) |
|---|---|---|---|---|---|
| 1. | **ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು** ಶಿಕ್ಷಣ ಸಂಸ್ಥೆಯಲ್ಲಿ ಮಕ್ಕಳನ್ನು ಕರೆದುಕೊಂಡು ಬರಲು ಹಾಗೂ ಮನೆಗೆ ಬಿಡಲು **ವಾಹನ ಸೌಲಭ್ಯವನ್ನು** ಹೊಂದಿದೆಯಾ? | | | | |
| 2. | ವಾಹನದಲ್ಲಿ ನಿಗದಿಪಡಿಸಿದ **ಸಾಮರ್ಥ್ಯಕ್ಕನುಗುಣವಾಗಿ ಮಕ್ಕಳನ್ನು** ಕರೆದೊಯ್ಯಲಾಗುತ್ತಿದೆಯಾ? | | | | |
| 3. | ವಾಹನದಲ್ಲಿರುವ ಎಲ್ಲಾ ಸೀಟ್‌ಗಳು, **ಸೀಟ್ ಬೆಲ್ಟ್‌ಗಳನ್ನು** ಹೊಂದಿದೆಯಾ? | | | | |
| 4. | ವಾಹನ ಚಾಲಕರು, ನಿರ್ವಾಹಕರ **ಪೊಲೀಸ್ ಪರಿಶೀಲನೆ** ಆಗಿದೆಯಾ? | | | | |
| 5. | ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಪರವಾದ ಕಾನೂನುಗಳ ಬಗ್ಗೆ ವಾಹನ **ಸಿಬ್ಬಂದಿಗಳಿಗೆ ತಿಳುವಳಿಕೆಯನ್ನು** ನೀಡಲಾಗಿದೆಯಾ? | | | | |
| 6. | ವಾಹನ ಚಾಲಕರು/ನಿರ್ವಾಹಕರು/ ಸಿಬ್ಬಂದಿಗಳಿಂದ **"ಸಿಬ್ಬಂದಿ ಬದ್ಧತಾ ಪತ್ರ"** ಪಡೆಯಲಾಗಿದೆಯಾ? | | | | |
| 7. | **ಶಾಲೆ/ ವಸತಿ ನಿಲಯ/ ಪದವಿ ಪೂರ್ವ ಕಾಲೇಜು** ಶಿಕ್ಷಣ ಸಂಸ್ಥೆಯ ವಾಹನವು **ನಿಗದಿಪಡಿಸಿದ ಮಾನದಂಡಗಳನ್ನು** ಒಳಗೊಂಡಿದೆಯಾ? **(ಹಳದಿ ಬಣ್ಣ, ವೇಗ ನಿಯಂತ್ರಕ, ತುರ್ತು ನಿರ್ಗಮನ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಅಗ್ನಿ ನಂದಕ ಉಪಕರಣಗಳು ಮುಂತಾದವುಗಳನ್ನು ಹೊಂದಿದೆಯಾ?)** | | | | |
| 8. | ವಾಹನದ ಚಾಲಕರು, ನಿರ್ವಾಹಕರುಗಳ ಚಾಲನಾ ಪರವಾನಗಿ ಇತರ ದಾಖಲೆಗಳು ಮತ್ತು **ವಾಹನದ ದಾಖಲೆಗಳನ್ನು ಸ್ಥಳೀಯ ಪೊಲೀಸ್ ಠಾಣೆಗೆ** ನೀಡಲಾಗಿದೆಯಾ? | | | | |

**ಸಹಿ ಮತ್ತು ಮೊಹರು**
ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು/ಶಾಲೆಯ ಮುಖ್ಯೋಪಾಧ್ಯಾಯರು/
ಪ.ಪೂ.ಕಾಲೇಜಿನ ಪ್ರಾಂಶುಪಾಲರು/ವಸತಿ ನಿಲಯ ಪಾಲಕರು ಅಥವಾ ಮೇಲ್ವಿಚಾರಕರು.

**ಸಹಿ ಮತ್ತು ಮೊಹರು**
ಶಿಕ್ಷಣ ಸಂಸ್ಥೆಯ **ಮಕ್ಕಳ ರಕ್ಷಣಾ ಸಮಿತಿಯ,**
**ಮಕ್ಕಳ ರಕ್ಷಣಾಧಿಕಾರಿ.**

**ದಿನಾಂಕ:**_______________________

***(ವಿ.ಸೂ: ಈ ವರದಿಯನ್ನು ಪ್ರತಿ ಶಾಲೆ/ಪ.ಪೂ. ಕಾಲೇಜು/ವಸತಿ ನಿಲಯ/ಶಿಕ್ಷಣ ಸಂಸ್ಥೆಗಳು ಪ್ರತಿ ವರ್ಷ ಡಿಸೆಂಬರ್ 25 ರ ಒಳಗಾಗಿ ನಾಲ್ಕು ಪ್ರತಿ ತಯಾರಿಸಿ, 1 ನೇ ಪ್ರತಿ ನಿಮ್ಮ ಇಲಾಖೆಯ ತಾಲೂಕು ಮಟ್ಟದ ಅಥವಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ, 2ನೇ ಪ್ರತಿ ನಿಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ, 3ನೇ ಪ್ರತಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸಲ್ಲಿಸಬೇಕು (ಈ ಪ್ರತಿ ಮೂಲ ಪ್ರತಿಯಾಗಿದ್ದು, ಜಿಲ್ಲಾಧಿಕಾರಿಗಳಿಗೆ ಹೋಗುವ ಪ್ರತಿ). ಹಾಗೂ 4ನೇ ಪ್ರತಿ ನಿಮ್ಮ ಕಛೇರಿಯ ಮಕ್ಕಳ ರಕ್ಷಣಾ ನೀತಿಯ ಕಡತದಲ್ಲಿ ಇಡಬೇಕು.)***

**ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016, ಪರಿಷ್ಕರಣೆ–2023ನ್ನು ಅನುಷ್ಠಾನಗೊಳಿಸಿರುವ ಛಾಯಚಿತ್ರಗಳು:**

**ಈ ಕೆಳಗಿನವುಗಳು ಕಡ್ಡಾಯ:**

1. ಮಕ್ಕಳ ಸಹಾಯವಾಣಿ 1098 ರ ಶಾಶ್ವತ ಗೋಡೆ ಬರಹ ಫಲಕ ಹಾಕಿದ ಛಾಯಚಿತ್ರ.
2. ಮಕ್ಕಳ ರಕ್ಷಣಾ ನೀತಿಗೆ 20 ಬದ್ಧತೆಗಳನ್ನು ಗೋಡೆಯಲ್ಲಿ ಭಿತ್ತರಿಸಿರುವ ಛಾಯಾಚಿತ್ರ.
3. ಮಕ್ಕಳ ರಕ್ಷಣಾ ಸಮಿತಿ ಸದಸ್ಯರ ಗುಂಪಿನ ಸದಸ್ಯರ ಛಾಯಾಚಿತ್ರ
4. ಮಕ್ಕಳ ರಕ್ಷಣಾ ಸಮಿತಿ ಸಭೆಯ/ ಮಕ್ಕಳ ಹಕ್ಕುಗಳ ಕ್ಲಬ್ ಸಭೆಯ ಛಾಯಾಚಿತ್ರ.
5. ಸಲಹಾ ಪೆಟ್ಟಿಗೆ ಅಳವಡಿಸಿದ ಛಾಯಾಚಿತ್ರ.
6. ಇತರ ಕಾರ್ಯಕ್ರಮಗಳದ್ದು ಆಯ್ದ ಒಂದೊಂದು ಪೋಟೊ ಮಾತ್ರ.